Revolution in Education: China and Cuba in Global Context. 1957– 76

# ಶಿಕ್ಷಣದಲ್ಲಿ ಕ್ರಾಂತಿ – ಜಾಗತಿಕ ಸಂದರ್ಭದಲ್ಲಿ ಚೀನಾ ಮತ್ತು ಕ್ಯೂಬಾ, 1957– 76

ಯಿಂಗ್ ಹಾಂಗ್ ಚೆಂಗ್

Yinghong Cheng

ಡೆಲವೇ ಸ್ಟೇಟ್ ವಿಶ್ವವಿದ್ಯಾಲಯ( Delaware State University)

ಪ್ಯಾಟ್ರಿಕ್ ಮ್ಯಾನಿಂಗ್

Patrick Manning

ನಾರ್ತ್ ಈಸ್ಟರ್ನ್ ವಿಶ್ವವಿದ್ಯಾಲಯ

ಚೀನಾದಲ್ಲಿ ಆಗ ನಡೆಯುತ್ತಿದ್ದ ಸಾಂಸ್ಕೃತಿಕ ಕ್ರಾಂತಿ ಮತ್ತು ಕ್ಯೂಬಾದಲ್ಲಿ ಬಿಚ್ಚಿಕೊಳ್ಳುತ್ತಾ ಇದ್ದ ಕ್ರಾಂತಿಕಾರಿ ಆಂದೋಲನ ಇವುಗಳ ಮಧ್ಯೆ ಇರುವ ಹೋಲಿಕೆಗಳ ಬಗ್ಗೆ 1969ರಲ್ಲಿ ಫಿಡಲ್ ಕ್ಯಾಸ್ಟ್ರೋ ಅವರನ್ನು ಪ್ರಶ್ನಿಸಿದಾಗ ಅವರು ಹೀಗೆಂದು ಉತ್ತರಿಸಿದರು, "ನಾವೇನಾದರೂ ಚೀನಾದ ಕಮ್ಯುನಿಸ್ಟರನ್ನು ಹೋಲುವಂಥದ್ದನ್ನು ಮಾಡುತ್ತಾ ಇದ್ದರೆ ಅದು ಕೇವಲ ಒಂದು ಚಾರಿತ್ರಿಕ ಆಕಸ್ಮಿಕ ಅಷ್ಟೇ"[1]. ಕ್ಯಾಸ್ಟ್ರೋ ಅವರು ತಮ್ಮ ರಾಜಕೀಯ ಮತ್ತು ಸೈದ್ಧಾಂತಿಕ ಸೋಪಜ್ಞತೆಯ ಬಗ್ಗೆ ಹೇಳಿಕೊಳ್ಳುತ್ತಿದ್ದದ್ದು ಏಕೆಂದರೆ ಮೇಲುನೋಟಕ್ಕೆ ವೀಕ್ಷಿಸಿದವರಿಗೂ ಸಹ ಎರಡು ಆಂದೋಲನಗಳ ನಡುವೆ ಹೋಲಿಕೆ ಕಾಣುತ್ತಿತ್ತು. ಎರಡು ಕೂಡ ದೊಡ್ಡಮಟ್ಟದಲ್ಲಿ ಜನ ಸಮೂಹವನ್ನು ತೊಡಗಿಸಿಕೊಳ್ಳುವುದರ ಬಗ್ಗೆ ಅವಲಂಬಿಸಿದ್ದವು, ನೈತಿಕ ಉತ್ತೇಜಕಗಳನ್ನು ಬೆಂಬಲಿಸುತ್ತಿದ್ದವು, ಸಮಾನತಾವಾದಿ ಸಮಾಜವೊಂದರ ಗುರಿಯನ್ನು ಇಟ್ಟುಕೊಂಡಿದ್ದವು, ಹೊಸ ತಲೆಮಾರನ್ನು ಒಂದು "ಹೊಸ ಮನುಷ್ಯ"ನನ್ನಾಗಿ ರೂಪಿಸಲು ಆಶಿಸಿದ್ದವು ಮತ್ತು ಸೋವಿಯತ್ ಒಕ್ಕೂಟವು ಬಗೆದಿದ್ದ ದ್ರೋಹವನ್ನು ಅಥವಾ ಕಡೆಯ ಪಕ್ಷ ಅಲ್ಲಿ ಕಂಡುಬಂದಿದ್ದ ಭ್ರಷ್ಟಾಚಾರವನ್ನು ಖಂಡಿಸುತ್ತಿದ್ದವು[2].

ಆದರೆ ಪ್ರಾಯಶಃ ಎರಡೂ ಆಂದೋಲನಗಳಲ್ಲಿದ್ದ ಯಥಾವತ್ ಅಂಶವೆಂದರೆ ಅವೆರಡರಲ್ಲೂ ಇದ್ದ ಶೈಕ್ಷಣಿಕ ಕ್ರಾಂತಿಗಳು. ಪ್ರತಿಯೊಂದು ಪ್ರಕರಣದಲ್ಲಿ ಸಹ ಇದ್ದಂತಹ ಅಂತಿಮ ಧ್ಯೇಯವೆಂದರೆ ಶಾಲೆ ಮತ್ತು ಸಮಾಜದ ನಡುವಿನ ಸಾಂಸ್ಥಿಕ ಅಡ್ಡಗೋಡೆಗಳನ್ನು ಒಡೆದು ಹಾಕುವುದು. ಇದನ್ನು ಸಾಧಿಸಲು ಆಯ್ದುಕೊಂಡ ಮಾರ್ಗಗಳು ವಿಭಿನ್ನವಾಗಿದ್ದರೂ, ಎರಡೂ ದೇಶಗಳಲ್ಲಿಯೂ ಸಹ ಅಧ್ಯಯನ ಮತ್ತು ಕೆಲಸ ಒಂದುಗೂಡಬೇಕೆಂಬುದು ಮುಖ್ಯ ಅಂಶವಾಗಿತ್ತು. ಈ ಒಂದುಗೂಡುವಿಕೆಯನ್ನು ಸಾಧಿಸಲು ವಿದ್ಯಾರ್ಥಿಗಳನ್ನು ಮತ್ತು ಅಧ್ಯಾಪಕರನ್ನು ಹೊಲಗದ್ದೆಗಳಿಗೆ ಮತ್ತು ಕಾರ್ಖಾನೆಗಳಿಗೆ ಕಳಿಸಲಾಯಿತು.

ತಕ್ಷಣದ ಕೃಷಿ ಮತ್ತು ಕೈಗಾರಿಕೆಯ ಅವಶ್ಯಕತೆಗಳನ್ನು ಆಧರಿಸಿ ಪಠ್ಯಕ್ರಮವನ್ನು ರೂಪಿಸಲಾಯಿತು. ಶಾಲೆಗಳು, ಕಾರ್ಖಾನೆಗಳು ಮತ್ತು ಕೃಷಿ ಕ್ಷೇತ್ರಗಳು ಒಂದೇ ಆಡಳಿತ ವ್ಯವಸ್ಥೆಯನ್ನು ಹಂಚಿಕೊಂಡಿದ್ದವು; ತರಗತಿ ಕೇಂದ್ರಿತ ಶಿಕ್ಷಣದ ಬದಲಾಗಿ ಶ್ರಮ ಆಧಾರಿತ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿತ್ತು. ಅಧ್ಯಾಪನ ಮತ್ತು ಶಾಲಾ ನಿರ್ವಹಣೆಯ ಸ್ಥಾನಗಳನ್ನು ವಹಿಸಿಕೊಳ್ಳಲು ಕೆಲಸಗಾರರು ಮತ್ತು ರೈತರನ್ನು ನಿಯೋಜಿಸಲಾಗಿತ್ತು ಮತ್ತು ಪೂರ್ಣಾವಧಿ ಹಾಗೂ ಸಾಂಸ್ಥಿಕ ಸೌಲಭ್ಯಗಳ ಬದಲಾಗಿ ಹೆಚ್ಚು ಹೆಚ್ಚಾಗಿ ಅರೆಕಾಲಿಕ ಮತ್ತು ಸಾಂಸ್ಥಿಕವಲ್ಲದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗಿತ್ತು. ಈ ಒಂದು ಹೊಸ ಶೈಕ್ಷಣಿಕ ವ್ಯವಸ್ಥೆಯ ಉದ್ದೇಶವು ಬುದ್ದಿಜೀವಿಗಳನ್ನು, ಅಧಿಕಾರಿಗಳನ್ನು ಅಥವಾ ತಂತ್ರಜ್ಞರನ್ನು ಸೃಷ್ಟಿಸುವುದಾಗಿರದೆ, ಬದಲಿಗೆ ಪ್ರಾಯೋಗಿಕ ಮನಸ್ಸನ್ನು ಹೊಂದಿರುವ ಮತ್ತು ತಕ್ಷಣದ ಗುರಿಗಳಿಗೆ ತರಬೇತಿ ಹೊಂದಿರುವ ಕಾರ್ಮಿಕರನ್ನು ಸೃಷ್ಟಿಸುವುದಾಗಿತ್ತು. ಈ ಎಲ್ಲ ನೀತಿಗಳು ಸಹ ಒಂದು ಬಲವಾದ ನೈತಿಕ ಪ್ರಜ್ಞೆಯನ್ನು ಆಧರಿಸಿದ್ದವು; ಅವು ಸಾಮಾಜಿಕ ಸಮಾನತೆಯನ್ನು ಗಳಿಸಿಕೊಳ್ಳುವ ಉದ್ದೇಶವನ್ನು ಹೊಂದಿದ್ದವು, ಅದರಲ್ಲೂ ವಿಶೇಷವಾಗಿ ನಗರ ಮತ್ತು ಹಳ್ಳಿಗಾಡಿನ ನಡುವೆ, ಗಣ್ಯರು(elites) ಮತ್ತು ಜನಸಾಮಾನ್ಯರ ನಡುವೆ ಮತ್ತು ಬೌದ್ಧಿಕ ಮತ್ತು ಭೌತಿಕ ಶ್ರಮದ ನಡುವೆ ಇರುವ ವಿಭಜನೆಯನ್ನು ಹೋಗಲಾಡಿಸುವ ಉದ್ದೇಶವನ್ನು ಹೊಂದಿದ್ದವು ಎಂಬುದನ್ನು ಗಮನಿಸಬೇಕಾಗುತ್ತದೆ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ಅವು ಭವಿಷ್ಯದ ಕುರಿತಾದ ಒಂದು ಭವ್ಯವಾದ, ವರ್ಗ ರಹಿತ ಸಮತಾವಾದಿ (communist) ಸಮಾಜದ ಕುರಿತಾದ ಕಾಣ್ಕೆ (vision) ಯ ಭಾಗವಾಗಿದ್ದವು.

ಕಮ್ಯುನಿಸ್ಟ್ ಜಗತ್ತಿನ ಆಚೆ ಇರುವ ಶಿಕ್ಷಣ ತಜ್ಞರು ಚೀನಾ ಮತ್ತು ಕ್ಯೂಬಾದ ಶೈಕ್ಷಣಿಕ ಪ್ರಯೋಗಗಳ ಪ್ರಾಮುಖ್ಯತೆಯನ್ನು ಗುರುತಿಸಿದರು ಮತ್ತು ಅದನ್ನು ಅಪ್ಪಿಕೊಂಡರು ಸಹ. 1975ರಲ್ಲಿ ಪ್ರಕಟವಾದ ಕ್ಯೂಬಾದ ಶೈಕ್ಷಣಿಕ ವರದಿಗೆ ಯುನೆಸ್ಕೋ ಹೀಗೆಂದು ಮುನ್ನುಡಿ ಬರೆಯಿತು: “ಕೇವಲ ಭೂತಕಾಲದೊಂದಿಗೆ ಮಾತ್ರವಲ್ಲ, ಅಸ್ತಿತ್ವದಲ್ಲಿರುವ ಎಲ್ಲಾವುದರೊಂದಿಗೆಯೂ ಸಹ, ಶಿಕ್ಷಣ ವ್ಯವಸ್ಥೆಯಲ್ಲಿರುವ ಪ್ರತಿಯೊಂದು ಅಂಶದೊಂದಿಗೆ ಸಹ ಭಿನ್ನತೆಯನ್ನು ಹೊಂದಿರುವಂತಹ ಒಂದು ತೀವ್ರಗಾಮಿ ಪ್ರಕರಣ ಇದು”[3]. ಹೆಚ್ಚು ಕಡಿಮೆ ಇದೇ ಸಮಯದಲ್ಲಿ ಅಮೆರಿಕನ್ ಶಿಕ್ಷಣ ತಜ್ಞರೊಬ್ಬರು ಚೀನಾದ ಶೈಕ್ಷಣಿಕ ಸುಧಾರಣೆಯ ಕುರಿತು ಹೀಗೆಂದರು: “ಸಮಕಾಲೀನ ಸಂದರ್ಭದಲ್ಲಿ ಶೈಕ್ಷಣಿಕ ಬದಲಾವಣೆಗಳ ಕುರಿತಾದಂತಹ ಅಸಾಧಾರಣವಾದ ಘಟನೆಗಳ ಸಂಚಯವಿದು”[4]. ಮೂರನೆಯ ಜಗತ್ತಿನಲ್ಲಿ ಚೀನಾ ಮತ್ತು ಕ್ಯೂಬಾದ ಶೈಕ್ಷಣಿಕ ಆವಿಷ್ಕಾರಗಳನ್ನು, ಶಿಕ್ಷಣದ ಸಾರ್ವತ್ರೀಕರಣದಲ್ಲಿ ಅತ್ಯಂತ ಸಮರ್ಥವಾದ ಸಾಧನಗಳು ಎಂದು ಸ್ವೀಕರಿಸಲಾಯಿತು.

ಚೀನಾ ಮತ್ತು ಕ್ಯೂಬಾ ಎರಡೂ ಸಹ ಇದಕ್ಕೆ ಮೊದಲು ಸೋವಿಯತ್ ಮಾದರಿಯನ್ನು ಅನುಕರಿಸಲು ಪ್ರಯತ್ನಿಸಿದ್ದರೂ, ಈಗ ಅವು ಒಂದು ಇನ್ನೊಂದಕ್ಕೆ ಸ್ಫೂರ್ತಿಯಾಗಿರಬಹುದು ಎಂದುಕೊಳ್ಳಲು ಯಾವುದೇ ರೀತಿಯ ಸಾಕ್ಷ್ಯಾಧಾರವಿಲ್ಲ. ಈ ಅರ್ಥದಲ್ಲಿ ಕ್ಯಾಸ್ಟ್ರೋ ಅವರು ತಮ್ಮ ಬಗ್ಗೆ ಹೇಳಿಕೊಂಡಿರುವುದು ನ್ಯಾಯಯುತವಾದದ್ದೇ. ಈ ಎರಡು ಆಂದೋಲನಗಳು ಕೇವಲ

ಅನುಕರಣೆಯಾಗದೆ ಅಥವಾ ಒಂದು ಇನ್ನೊಂದಕ್ಕೆ ಸ್ಫೂರ್ತಿಯಾಗದೇ ಒಂದಕ್ಕೊಂದು ಸಾಮ್ಯತೆ ಹೊಂದಿದ್ದು ಆ ಮೂಲಕ ಹೆಚ್ಚು ಅರ್ಥಪೂರ್ಣವಾಗಿವೆ ಎಂಬುದೇ ಒಂದು ವಿರೋಧಾಭಾಸದಂತಿದೆ.

ಎರಡೂ ದೇಶಗಳ ಶೈಕ್ಷಣಿಕ ಕ್ರಾಂತಿಯ ಮೇಲೆ ಈ ಲೇಖನವು ತನ್ನ ಲಕ್ಷ್ಯವನ್ನು ಕೇಂದ್ರೀಕರಿಸಿದೆ. ನಾವು ಹೇಳ ಹೊರಟಿರುವುದು ಅವರ ಆರಂಭಕಾಲದ ಸಾಕ್ಷರತಾ ಆಂದೋಲನಗಳ ಶೈಕ್ಷಣಿಕ ಕ್ರಿಯಾ ಶೀಲತೆಯ ಬಗ್ಗೆ ಅಲ್ಲ ಮತ್ತು ನಾವು "ಸಾಮಾಜಿಕ ಸಮಾನತೆಗಾಗಿ ಶಿಕ್ಷಣ" ಎಂದು ಯಾವುದನ್ನು ಕರೆಯುತ್ತೇವೆ ಆ ಒಂದು ಅಧ್ಯಯನ ಮತ್ತು ಕೆಲಸದ ಸಂಯೋಜಿತ ಕಾರ್ಯಕ್ರಮಗಳ ಬಗ್ಗೆ ಸಹ ಅಲ್ಲ. "ಅಭಿವೃದ್ಧಿಗಾಗಿ ಶಿಕ್ಷಣ" ಎಂದು ನಾವು ಕರೆಯುವಂತಹ ಬಂಡವಾಳಶಾಹಿ ಆರ್ಥಿಕತೆಗೆ ಹತ್ತಿರ ಬರಬೇಕೆಂದು ನಡೆಸಿದ ಆಂದೋಲನಗಳ ಶೈಕ್ಷಣಿಕ ಪುನರ್ ಸೃಷ್ಟಿಯ ಬಗ್ಗೆ ಕೂಡ ನಾವು ನಮ್ಮ ಲಕ್ಷ್ಯವನ್ನು ಹರಿಸಿಲ್ಲ. ಮಾವೋ ಮತ್ತು ಕ್ಯಾಸ್ಟ್ರೋ ರವರ ಆಡಳಿತಗಳಲ್ಲಿ ಇದ್ದಂತಹ ಸೈದ್ಧಾಂತಿಕ ಬೋಧನೆಯ ಬಗ್ಗೆಯೂ ಕೂಡ ನಾವು ಹೆಚ್ಚು ಗಮನವನ್ನು ಕೇಂದ್ರೀಕರಿಸಿರುವುದಿಲ್ಲ. ಏಕೆಂದರೆ ಅದು ಯಾರಿಗೇ ಆಗಲಿ ಮೇಲ್ನೋಟಕ್ಕೆ ಗೋಚರವಾಗುತ್ತದೆ. ಬದಲಿಗೆ ನಮ್ಮ ಪ್ರಯತ್ನ ಕೇಂದ್ರೀಕೃತವಾಗಿರುವುದು "ಸಾಮ್ಯವಾದಕ್ಕಾಗಿ ಶಿಕ್ಷಣ" ಎಂಬುದರ ವಿವರಗಳನ್ನು ಬಿಚ್ಚಿಡುವುದರ ಕುರಿತು; ಎಂದರೆ ಬಹುತೇಕ ಪಾಶ್ಚಿಮಾತ್ಯ ಮತ್ತು ಪಾಶ್ಚಿಮಾತ್ಯೇತರ ದೇಶಗಳಲ್ಲಿ ಕಳೆದ ಎರಡು ಶತಮಾನಗಳ ಅವಧಿಯಲ್ಲಿ ಅಭಿವೃದ್ಧಿ ಹೊಂದಿದ್ದ ಆಧುನಿಕ ಶಿಕ್ಷಣ ಪದ್ದತಿಯನ್ನು ಕೆಡವಿ ಹಾಕಲು ಚೀನಾ ಮತ್ತು ಕ್ಯೂಬಾ 1967ರಿಂದ ಆರಂಭಿಸಿ ಮಾಡಿದಂತಹ ಸಾಂಸ್ಥಿಕ ಬದಲಾವಣೆಗಳ ಮೇಲೆ ನಾವು ಗಮನವನ್ನು ಹರಿಸಿದ್ದೇವೆ. ವಿರೋಧಾಭಾಸವೆಂದರೆ ಈ ಎರಡು ದೇಶಗಳಲ್ಲಿಯೂ ಸಹ ಶೈಕ್ಷಣಿಕ ಬದಲಾವಣೆಯ ಕ್ರಾಂತಿಕಾರಿ ಕಾಲಾವಧಿಯಲ್ಲಿ ಶಿಕ್ಷಣವನ್ನು ಸಂಸ್ಥೆಗಳ ಚೌಕಟ್ಟಿನಿಂದ ಹೊರಗಿಡುವುದು, ಶಾಲೆಗಳ ನಿರ್ದಿಷ್ಟ ರಚನೆಗಳನ್ನು ನಿಷೇಧಿಸುವುದು, ಶಿಕ್ಷಣವನ್ನು ಕೇವಲ ಕೆಲಸ ಮಾಡುವ ಸ್ಥಳಗಳ ಭಾಗವಾಗಿ ಮತ್ತು ಸಮಾಜದ ವಿಸ್ತಾರವಾದ ಮತ್ತು ಹೆಚ್ಚು ಸಾಮಾನ್ಯ ಸಂಸ್ಥೆಗಳ ಭಾಗವಾಗಿ ಪುನರ್ ಸ್ಥಾಪಿಸುವುದು ಅಲ್ಲಿನ ನೀತಿಯ ಉದ್ದೇಶವಾಗಿತ್ತು. ಬಹುತೇಕ ಈ ಮಹತ್ವಾಕಾಂಕ್ಷೆಯ ಪ್ರಯೋಗಗಳು ಉದ್ದೇಶಿತ ಗುರಿಗಳನ್ನು ಸಾಧಿಸುವಲ್ಲಿ ಏಕೆ ಮತ್ತು ಹೇಗೆ ವಿಫಲವಾದವು ಮತ್ತು ಎರಡೂ ಆಡಳಿತಗಳು ಕೂಡ ಏಕೆ ಹಿಂದೆ ಸರಿದು ಹಿಂದಿನ ಪದ್ದತಿಯನ್ನೇ ಮತ್ತೆ ಪುನರ್ ಸ್ಥಾಪಿಸಬೇಕಾಯಿತು ಎಂಬುದನ್ನು ನಾವು ವಿವರಿಸಲಿದ್ದೇವೆ.

ಅದೇ ಸಮಯದಲ್ಲಿ ನಮ್ಮ ವಿಶ್ಲೇಷಣೆಯು, ಕ್ಯೂಬಾ ಮತ್ತು ಚೀನಾದ ಶೈಕ್ಷಣಿಕ ಕ್ರಾಂತಿಗಳ ವೈಶಿಷ್ಟ್ಯವನ್ನು ಮತ್ತು ಶೈಕ್ಷಣಿಕ ಸುಧಾರಣೆಯ ಇತರ ಚಳುವಳಿಗಳೊಂದಿಗೆ ಅವು ಹಂಚಿಕೊಳ್ಳುವ ವಿನ್ಯಾಸಗಳನ್ನು ಒತ್ತಿ ಹೇಳುತ್ತದೆ. ಆ ಸಮಯದಲ್ಲಿ ಚೀನಾ ಮತ್ತು ಕ್ಯೂಬಾದ ಆಂದೋಲನಗಳು ಅದೆಷ್ಟು ಸೃಜನಶೀಲವಾಗಿ ಹಾಗೂ ಅನನ್ಯವಾಗಿ ಕಂಡರೂ ಕೂಡ ಅವು ಒಂದು ದೀರ್ಘಾವಧಿಯ ಶೈಕ್ಷಣಿಕ ಚರ್ಚೆಯ ಸಂದರ್ಭದಲ್ಲಿ ಅರಳಿಕೊಂಡವು. ಸಮಾಜವೊಂದು ತನ್ನ ಶೈಕ್ಷಣಿಕ ಪ್ರಯೋಗದ ಮೂಲಕ ಸಮಾನತೆ ಮತ್ತು ದಕ್ಷತೆಗಳ ನಡುವೆ ಹಾಗೂ ಸುಧಾರಣೆ ಮತ್ತು ಸಂಪ್ರದಾಯದ ನಡುವೆ ಹೇಗೆ ಉತ್ತಮ ಆಯ್ಕೆಯನ್ನು ಮಾಡಿಕೊಳ್ಳಬಹುದು ಎಂಬುದು ಈ ಚರ್ಚೆಯಾಗಿತ್ತು. ಚೀನಾ, ಕ್ಯೂಬಾ ಮತ್ತಿತರ

ಸ್ಥಳಗಳಲ್ಲಿ ನಡೆದಂತಹ ತೀವ್ರಗಾಮಿ ಬದಲಾವಣೆಗಳು ಮತ್ತು ನಂತರ ಅಲ್ಲಿ ನಡೆದ ಶೈಕ್ಷಣಿಕ ಸಂಸ್ಥೆಗಳ ಪುನರ್ ಸ್ಥಾಪನೆಗಳು ಒಂದು ಪುನರಾವರ್ತನೆಯಾಗುವ ತಾಕಲಾಟ (dilemma) ವನ್ನು ಪ್ರತಿಬಿಂಬಿಸಿದವು. ಸಮಾನತೆ ಮತ್ತು ದಕ್ಷತೆ ಹಾಗೂ ಸುಧಾರಣೆ ಮತ್ತು ಸಂಪ್ರದಾಯ (tradition) ಇವುಗಳ ಮಧ್ಯದ ಆಯ್ಕೆಗಳು ಇತ್ತೀಚಿನ ಶತಮಾನಗಳಲ್ಲಿ ಮಾನವ ಸಮಾಜವು ಎದುರುಗೊಂಡಿರುವ ಮತ್ತು ಭವಿಷ್ಯದಲ್ಲಿಯೂ ಎದುರಿಸಬೇಕಾದ ಮೂಲಭೂತ ಸಮಸ್ಯೆಗಳನ್ನು ನಮ್ಮೆದುರು ಇರಿಸಿವೆ.

## ಚಾರಿತ್ರಿಕ ಹಿನ್ನೆಲೆ

ಚೀನಾ ಮತ್ತು ಕ್ಯೂಬಾದ ಅನುಭವಗಳ ಹಿನ್ನೆಲೆಯಾಗಿ, 18ನೆಯ ಶತಮಾನದಿಂದ 20ನೆಯ ಶತಮಾನದವರೆಗಿನ ಪೂರ್ವ ಮತ್ತು ಪಶ್ಚಿಮ ದೇಶಗಳಲ್ಲಿನ ಶಿಕ್ಷಣದ ವಿಶ್ಲೇಷಣೆಯನ್ನು ಮತ್ತು 1920ರ ದಶಕದಲ್ಲಿ ಸೋವಿಯತ್ ಒಕ್ಕೂಟದಲ್ಲಿ ನಡೆದ ಶೈಕ್ಷಣಿಕ ಪ್ರಯತ್ನಗಳ ಮತ್ತು 1970ರ ದಶಕದಲ್ಲಿ ಮೂರನೆಯ ಜಗತ್ತಿನ ಅನೇಕ ದೇಶಗಳಲ್ಲಿ ನಡೆದ ಪ್ರಯೋಗಗಳ ವಿಮರ್ಶೆಯನ್ನು ನಾವು ಪರಿಶೋಧಿಸುತ್ತೇವೆ. ಈ ಎಲ್ಲಾ ಪ್ರಕರಣಗಳನ್ನು ಪುನರಾವಲೋಕಿಸುತ್ತ, ರಾಷ್ಟ್ರೀಯ ಮತ್ತು ಸಾಂಸ್ಕೃತಿಕ ಗಡಿಗಳನ್ನು ಮೀರಬಲ್ಲ, ಚೀನಾ ಮತ್ತು ಕ್ಯೂಬಾದ ಆಂದೋಲನಗಳನ್ನು ಮೇಳವಿಸಬಲ್ಲ, ಮತ್ತು ಇತರ ದೇಶಗಳ ಆಂದೋಲನಗಳೊಂದಿಗೆ ಸಂಬಂಧವನ್ನು ಏರ್ಪಡಿಸಬಲ್ಲ ಒಂದು ವಿಶ್ಲೇಷಣಾತ್ಮಕ ಚೌಕಟ್ಟನ್ನು ಸ್ಥಾಪಿಸಬಹುದೆಂದು ನಾವು ಆಶಿಸಿದ್ದೇವೆ. ನಾವು ಚರ್ಚಿಸಲಿರುವ ಎಲ್ಲಾ ಚಳುವಳಿಗಳು ಸಹ ಆಧುನಿಕ, ಸಾಂಸ್ಥೀಕೃತವಾದ ಶಿಕ್ಷಣವು ಶ್ರೀಮಂತರ ಹಾಗೂ ನಗರವಾಸಿಗಳ ಪರವಾದ ನಿಲುವನ್ನು ಹೊಂದಿವೆ ಎಂದು, ಕಾರ್ಯೋಪಯೋಗಿ ಕೌಶಲ್ಯಗಳನ್ನು ಉಪೇಕ್ಷಿಸಿವೆ ಎಂದು ಮತ್ತು ಅದು ಶಾಲೆಯನ್ನು ಸಮಾಜದಿಂದ ಹಾಗೂ ಶಿಕ್ಷಣವನ್ನು ಕೆಲಸದಿಂದ ಬೇರ್ಪಡಿಸಿದೆ ಎಂಬ ಟೀಕೆಯನ್ನು ಮಾಡಿವೆ. ಇಂತಹ ವಿಶ್ಲೇಷಣೆಯ ಉಗಮವನ್ನು 18ನೇ ಶತಮಾನದಲ್ಲಿಯೇ ನಾವು ಗುರುತಿಸಬಹುದು. ಒಂದು ವಿಶಾಲವಾದ ಅರ್ಥದಲ್ಲಿ ಇದು, ಆಧುನೀಕರಣದ ಆರಂಭದ ಕಾಲದಿಂದಲೂ ಆಧುನಿಕತಾವಾದದ ಕುರಿತಾಗಿ ಬಂದ ವಿಶ್ಲೇಷಣೆಯ ಭಾಗವಾಗಿತ್ತು. ಒಂದು ಚಿಕ್ಕ ಚಾರಿತ್ರಿಕ ಪುನರಾವಲೋಕನವು ನಾವು ಈ ಚಿಂತನಾ ಪ್ರವೃತ್ತಿಯು ಹೇಗೆ ಬೆಳೆದು ಬಂತು ಎಂದು ಗುರುತಿಸಲು ನೆರವಾಗುತ್ತದೆ.

19ನೇ ಶತಮಾನದಲ್ಲಿ ಕ್ಯೂಬಾ ರಾಷ್ಟ್ರೀಯತಾವಾದ (Cuban Nationalism) ದ ಪಿತಾಮಹರಾದ ಹೋಸೆ ಮಾರ್ಟಿ (Jose Marti) ಅವರು, ನಿರ್ದಿಷ್ಟವಾಗಿ ಆಧುನಿಕ ಶಿಕ್ಷಣದಲ್ಲಿ ಕೆಲಸ ಮತ್ತು ಅಧ್ಯಯನಗಳನ್ನು ಪ್ರತ್ಯೇಕಗೊಳಿಸಲಾಗಿರುವುದನ್ನು "ಒಂದು ದೈತ್ಯ ಅಪರಾಧ" ಮತ್ತು "ಗಂಭೀರ ಪರಿಣಾಮಗಳುಳ್ಳ ಪ್ರಮಾದ" ಎಂದು ಖಂಡಿಸಿದರು. ಭವಿಷ್ಯದಲ್ಲಿ ಪ್ರತಿಯೊಂದು ಶಾಲೆಯಲ್ಲಿಯೂ ಒಂದು 'ಕೃಷಿ ಕ್ಷೇತ್ರ"ವನ್ನು ನಡೆಸಬೇಕು; ಅದರ ಮೂಲಕ ವಿದ್ಯಾರ್ಥಿಗಳು ನೇಗಿಲನ್ನು ವರ್ಣಿಸುವುದು ಮಾತ್ರವಲ್ಲ ಅದನ್ನು ಉಪಯೋಗಿಸುವುದನ್ನು ಕಲಿಯಲು ಸಮರ್ಥರಾಗಬೇಕು ಎಂದು ಸಲಹೆ ನೀಡಿದರು[5]. ಚೀನಾದಲ್ಲಿ 1919 ರಷ್ಟು ಹಿಂದೆಯೇ ಬುದ್ಧಿಜೀವಿಗಳು ಹೊಸ ಸಾಂಸ್ಕೃತಿಕ ಆಂದೋಲನ

(New Culture Movement) ಮತ್ತು ಮೇ ನಾಲ್ಕರ ಚಳುವಳಿಯ (May Fourth Movement) ಸಂದರ್ಭದಲ್ಲಿ ಇದೇ ವಾದವನ್ನು ಎತ್ತಿ ಹಿಡಿದಿದ್ದರು. ಒಬ್ಬ ಪ್ರಭಾವಶಾಲಿ ಶೈಕ್ಷಣಿಕ ಸಿದ್ಧಾಂತಿಯಾಗಿದ್ದ ಮತ್ತು ಬೀಜಿಂಗ್ ವಿಶ್ವವಿದ್ಯಾಲಯದ ಅಧ್ಯಕ್ಷರಾಗಿದ್ದ ಕೇ ಯುವಾನ್ ಪೇ (Cai Yuanpei) ಎಂಬುವರು ಕೆಲಸ- ಅಧ್ಯಯನ ಕಾರ್ಯಕ್ರಮಗಳ ಪರವಾಗಿ, 'ಪ್ರತಿದಿನ ಕೆಲಸ ಮತ್ತು ಪ್ರತಿದಿನ ಅಧ್ಯಯನ' ದ ಯೋಜನೆಯನ್ನು ಪ್ರಸ್ತಾಪಿಸಿದರು. 'ಇಡೀ ದೇಶದ ಜನತೆ ಕೆಲಸ ಮಾಡುವ ಅಭ್ಯಾಸವನ್ನು ಬೆಳೆಸಿಕೊಂಡು ಕಾರ್ಮಿಕರು ಮತ್ತು ರೈತರ ಶ್ರಮದಲ್ಲಿ ಬೌದ್ಧಿಕ ಕೆಲಸಗಾರರು ಭಾಗಿಯಾಗುವಂತಾಗಬೇಕು' ಎಂದು ಪ್ರತಿಪಾದಿಸಿದರು[6]. 1920ರ ಹೊತ್ತಿಗೆ ಬೀಜಿಂಗ್ ವಿಶ್ವವಿದ್ಯಾಲಯದಲ್ಲಿ ಸರ್ವತೋಮುಖವಾದ ಶಿಕ್ಷಣವನ್ನು ಉತ್ತೇಜಿಸುತ್ತಾ ಮತ್ತು ಶ್ರಮವಿಭಜನೆಯನ್ನು ಅಂತಿಮವಾಗಿ ಕೊನೆಗಾಣಿಸುವುದನ್ನು ಆಶಿಸುತ್ತಾ, 'ಕೆಲಸ ಅಧ್ಯಯನ ವಾದ' ಎಂಬ ಚಳುವಳಿ ಸಹ ನಡೆದಿತ್ತು[7]. ಈ ಶೈಕ್ಷಣಿಕ ಪರಿಕಲ್ಪನೆಯನ್ನು ಆಚರಣೆಗೆ ತರುತ್ತ ನೂರಾರು ಜನ ತೀವ್ರ ಪ್ರಗತಿಗಾಮಿಗಳಾದ ತರುಣರು ತರುಣಿಯರು 1920ರ ದಶಕದಲ್ಲಿ ಕ್ರಾಂತಿಕಾರಿ ವೈಚಾರಿಕತೆಗಳನ್ನು ಮತ್ತು ಸಂಘಟನಾತ್ಮಕ ಅನುಭವಗಳನ್ನು ಹುಡುಕುತ್ತಾ ಫ್ರಾನ್ಸ್, ಜರ್ಮನಿ ಮತ್ತು ರಷ್ಯಾ ಗೆ ಹೋಗಲು ಸಿದ್ಧರಾದರು. ಅವರಲ್ಲಿ ಇದ್ದಂತಹ ಜೌ ಎನ್ ಲೈ(Zhou Enlai), ಡೆಂಗ್ ಸಿಯಾವೋ ಪಿಂಗ್(Deng Xiaoping), ಕೇ ಹೆಸೆನ್( Cai Hesen), ಕೆ ಚಾಂಗ್( Cai Chang), ಚಿನ್ ಯಿ( Chen Yi) ಇವರುಗಳು ನಂತರದ ಕಾಲದಲ್ಲಿ ಪ್ರಮುಖ ಕಮ್ಯುನಿಸ್ಟ್ ನಾಯಕರಾದರು. ಈ ಕೆಲಸ - ಅಧ್ಯಯನ ಕಾರ್ಯಕ್ರಮಗಳಲ್ಲಿ ತರುಣ ಸಹಜ ಆದರ್ಶವಾದಕ್ಕಿಂತ ಹೆಚ್ಚಾಗಿ ಇದ್ದದ್ದು ಆರ್ಥಿಕ ಅಗತ್ಯಗಳು ಎಂಬುದು ನಿಜವಾದರೂ, ಈ ಅನುಭವವು ಆರಂಭಕಾಲದ ಶೈಕ್ಷಣಿಕ ಸುಧಾರಣೆಯ ಚಿಂತನೆ ಮತ್ತು ನಂತರದ ಕಮ್ಯುನಿಸ್ಟ್ ವೈಚಾರಿಕತೆ ಇವುಗಳ ಮಧ್ಯೆ ಒಂದು ಕೊಂಡಿಯನ್ನು ಒದಗಿಸಿತು.

ಪಾಶ್ಚಿಮಾತ್ಯ ಬೌದ್ಧಿಕ ಮತ್ತು ರಾಜಕೀಯ ಇತಿಹಾಸವು ಆಧುನಿಕ ಶಿಕ್ಷಣದ ಕುರಿತಾದ ವಿಮರ್ಶೆಯ ಬಗೆಗೆ ಇನ್ನಷ್ಟು ಉದಾಹರಣೆಗಳನ್ನು ಒದಗಿಸುತ್ತದೆ. ಜಾಗತಿಕ ಕಮ್ಯುನಿಸ್ಟ್ ಚಳುವಳಿಯ ಆದ್ಯ ನಾಯಕರಲ್ಲಿ ಒಬ್ಬರಾದ ಕಾರ್ಲ್ ಮಾರ್ಕ್ಸ್ ಅವರು ಅಧ್ಯಯನ ಮತ್ತು ಕೆಲಸದ ಏಕೀಕರಣಕ್ಕೆ ಒತ್ತು ಕೊಡುವಂತೆ ಭವಿಷ್ಯದ ಶಿಕ್ಷಣದ ಕುರಿತು ಪರಿಕಲ್ಪನೆಯನ್ನು ಮಂಡಿಸಿದರು. ಮಾರ್ಕ್ಸ್ ಅವರಿಗೆ, ಬಂಡವಾಳಶಾಹಿ ವ್ಯವಸ್ಥೆಯಲ್ಲಿನ ಪರಕೀಯತೆಗೆ ತುತ್ತಾದ ಮನುಷ್ಯನಿಗೆ ತದ್ವಿರುದ್ಧವಾಗಿ ಕಮ್ಯುನಿಸ್ಟ್ ಸಮಾಜದಲ್ಲಿ "ಸುಪ್ರಬುದ್ಧ ಮನುಷ್ಯ"(ಚೆನ್ನಾಗಿ ಅಭಿವೃದ್ಧಿ ಹೊಂದಿದ ಮನುಷ್ಯ")ನನ್ನು ಸೃಷ್ಟಿಸಲು ಒಂದು ಸಂಪೂರ್ಣ ಶೈಕ್ಷಣಿಕ ಸುಧಾರಣೆ ಅಗತ್ಯ ಎನಿಸಿತು. ಬಂಡವಾಳಶಾಹಿ ಶೋಷಣೆಯನ್ನು ಅದರಲ್ಲೂ ವಿಶಿಷ್ಟವಾಗಿ ಬಾಲಶ್ರಮವನ್ನು ಅತ್ಯಂತ ಬಲವಾಗಿ ಖಂಡಿಸಿದರೂ ಸಹ, ಮಾರ್ಕ್ಸ್ ಅವರು ಕಾರ್ಮಿಕ ವರ್ಗದ ಮಕ್ಕಳಿಗೆ ಅರ್ಧ ದಿನ ಅಧ್ಯಯನ- ಅರ್ಧ ದಿನ ಶ್ರಮವನ್ನು ಪ್ರತಿಪಾದಿಸಿದ, 1864ರ ಬ್ರಿಟಿಷ್ ಕಾರ್ಖಾನೆ ಸುಧಾರಣೆ ಕಾಯ್ದೆಯ ಅನುಷ್ಠಾನದ ಬಗ್ಗೆ ಧನಾತ್ಮಕವಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು[8]. ಪ್ರಪ್ರಥಮ ಕಾರ್ಮಿಕರ ಅಂತರರಾಷ್ಟ್ರೀಯ ವೇದಿಕೆಯ ಮೊದಲ ಮಹಾದಿವೇಶನದ ಗೊತ್ತುವಳಿಗಳಲ್ಲಿ ಮಾರ್ಕ್ಸ್ ಅವರು ಭವಿಷ್ಯದ ಶಿಕ್ಷಣವನ್ನು ಹೀಗೆಂದು ನಿರೂಪಿಸಿದರು; " ಉತ್ಪಾದನೆಯ

ಎಲ್ಲಾ ಪ್ರಕ್ರಿಯೆಗಳ ಸಾಮಾನ್ಯ ತತ್ವಗಳ ಬಗ್ಗೆ ತಿಳುವಳಿಕೆ ನೀಡುವುದು ಮತ್ತು ಎಲ್ಲಾ ಕಸುಬುಗಳ ಪ್ರಾಥಮಿಕ ಉಪಕರಣಗಳನ್ನು ಪ್ರಾಯೋಗಿಕವಾಗಿ ಉಪಯೋಗಿಸುವುದು ಮತ್ತು ನಿರ್ವಹಿಸುವುದರ ಕುರಿತು ಮಗುವನ್ನು ತೊಡಗಿಸಿಕೊಳ್ಳುವುದಕ್ಕೆ ಸಾಧ್ಯವಾಗುವಂತೆ ಮಾನಸಿಕವಾದ, ಭೌತಿಕವಾದ ಮತ್ತು ತಂತ್ರಜ್ಞಾನದ ತರಬೇತಿ ನೀಡುವುದು". ಆ ಮಕ್ಕಳು ತಯಾರಿಸಿದ ಉತ್ಪನ್ನಗಳನ್ನು ಮಾರಾಟ ಮಾಡುವುದರ ಮೂಲಕ ಅಂತಹ ತಾಂತ್ರಿಕ ಶಿಕ್ಷಣದ ಖರ್ಚನ್ನು ತೂಗಿಸಬೇಕು ಎಂದು ಕೂಡ ಮಾರ್ಕ್ಸ್ ಸಲಹೆ ನೀಡಿದ್ದರು. ಈ ರೀತಿಯಾಗಿ ಶಿಕ್ಷಣವನ್ನು ಶ್ರಮದ ಜೊತೆ ಏಕೀಕರಿಸುವುದರಿಂದಾಗಿ "ಕಾರ್ಮಿಕ ವರ್ಗವನ್ನು ಮೇಲ್ವರ್ಗ ಮತ್ತು ಮಧ್ಯಮ ವರ್ಗಕ್ಕಿಂತ ಬಹಳಷ್ಟು ಮೇಲಕ್ಕೆ ಎತ್ತಬಹುದು" ಎಂದು ಅವರು ನಂಬಿದ್ದರು [9].

ಮಾರ್ಕ್ಸ್ ಅವರು ಫ್ರೆಂಚ್ ಮಹಾಕ್ರಾಂತಿಯ ಪರಂಪರೆಯಿಂದ ಬಹಳಷ್ಟು ಸ್ವೀಕರಿಸಿದ್ದರು ಮತ್ತು ಆ ಮಹಾನ್ ಕ್ರಾಂತಿಯ ಸಂದರ್ಭದಲ್ಲಿ ತೀವ್ರ ಪ್ರಗತಿಗಾಮಿ ಶಿಕ್ಷಣದ ಸುಧಾರಣೆಯ ಕೆಲವೊಂದು ಆರಂಭಿಕ ಪ್ರಯತ್ನಗಳು ನಡೆದಿದ್ದವು. 1789ರ ಕ್ರಾಂತಿಯ ಉತ್ಸಾಹೀ ಪ್ರವರ್ತಕರು ಕ್ರಾಂತಿಕಾರಿ ಪರಿವರ್ತನೆಯ ನಾಟಕೀಯ ಬೆಳವಣಿಗೆಗಳ ಮೂಲಕ ರೂಸೋರವರು ಈಗಾಗಲೇ ಭವಿಷ್ಯ ನುಡಿದಿದ್ದ 'ಹೊಸ ಮನುಷ್ಯ'ನನ್ನು ಸೃಷ್ಟಿಸಲು ಪ್ರಯತ್ನಿಸಿದರು. ಆನಂತರದಲ್ಲಿ ಪುನರ್ ಸೃಷ್ಟಿಗಾಗಿ ಇವರುಗಳು ನೀಡಿದ್ದ ಕರೆಯಿಂದಾಗಿ ಒಂದೆಡೆ ರಾಷ್ಟ್ರದ ತರುಣರ ನಡುವೆ ಸಮಾನತೆಯನ್ನು ಸಂಭ್ರಮಿಸುವ 'ಮೇಸನ್ಸ್ ಡೆ ಎಗಲೈಟ್ (*masons d'egalite*)" ಯೋಜನೆಗಳು ಆರಂಭವಾದರೆ ಇನ್ನೊಂದು ಕಡೆಯಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಇಬ್ಬರ ಮೇಲೆಯೂ ಕೂಡ ಕ್ರಾಂತಿಕಾರಿ ಶಿಸ್ತನ್ನು ಹೇರುವ ಚಳುವಳಿಗಳು ಸಹ ನಡೆದವು[10].

ಕಲ್ಪಿತಾದರ್ಶೀ ಸಮಾಜವಾದ (ಕಾಲ್ಪನಿಕ ಸಮಾಜವಾದ -utopian socialism) ಮತ್ತು ರಷ್ಯಾದ ಜನಪ್ರಿಯ ಆಂದೋಲನಗಳು ಸಹ ಶಿಕ್ಷಣದ ಮೂಲಕ ಸಮಾಜ ಪರಿವರ್ತನೆಯನ್ನು ಸಾಧಿಸಬಹುದು ಎಂಬ ಮುನ್ನೋಟಕ್ಕೆ ತಮ್ಮ ಕಾಣಿಕೆಯನ್ನು ನೀಡಿದವು. ಉದಾಹರಣೆಗೆ ಫ್ರೆಂಚ್ ಕಲ್ಪಿತಾದರ್ಶೀ ಸಮಾಜವಾದಿಯಾಗಿದ್ದ ಫೂರಿಯರ್ ಅವರು ತಮ್ಮ ಫ್ಯಾಲಾನ್ಸ್ ಟೆರಿ (phalansteries- ಎಲ್ಲರಿಗೂ ಸೇರಿದ ಆಸ್ತಿಯನ್ನು ಹೊಂದಿರುವ ಸಮುದಾಯ) ಗಳಲ್ಲಿ 'ಸಾಮರಸ್ಯಶಿಕ್ಷಣ(harmonic education)'ವನ್ನು ಪ್ರತಿಪಾದಿಸಿದರು. ಸಮಗ್ರವಾಗಿ ಅಭಿವೃದ್ಧಿ ಹೊಂದಿದ ವ್ಯಕ್ತಿಗಳನ್ನು ಸೃಷ್ಟಿಸಲಿಕ್ಕಾಗಿ ಜನರು ತಮ್ಮ ಉದ್ಯೋಗಗಳನ್ನು ಬದಲಾಯಿಸಿಕೊಳ್ಳುತ್ತಿರಬೇಕು ಮತ್ತು ಶಿಕ್ಷಣವು ಕೆಲಸ ಮತ್ತು ಬದುಕಿನ ಏಕೀಕರಣವನ್ನು ಆಧರಿಸಿರಬೇಕು. ದೈಹಿಕ ಮತ್ತು ಮಾನಸಿಕ ಶ್ರಮದ ನಡುವಿನ ಭೇದವು ಕೊನೆಯಾಗಬೇಕು. ರಷ್ಯಾದ ಜನಪ್ರಿಯವಾದಿಗಳಂತೂ ಸಾಂಸ್ಥಿಕ ಶಿಕ್ಷಣಕ್ಕೆ ಇನ್ನಷ್ಟು ವಿರುದ್ಧವಾಗಿದ್ದರು. ಅವರ ಪ್ರಕಾರ ಅಂತಹ ಸಾಂಸ್ಥಿಕ ಶಿಕ್ಷಣವು ಕೇವಲ ಮೇಲ್ವರ್ಗಗಳ ಉಪಯೋಗಕ್ಕೆ ಬರುತ್ತದೆ, ಜನಸಮುದಾಯದ ಅವಶ್ಯಕತೆಗಳನ್ನು ಉಪೇಕ್ಷಿಸುತ್ತದೆ ಮತ್ತು ತನ್ಮೂಲಕ ಸಾಮಾಜಿಕ ಅಸಮಾನತೆಗಳನ್ನು ಉಳಿಸಿಕೊಂಡು ಹೋಗುವಲ್ಲಿ ಅದು ಒಂದು ಮುಖ್ಯ ಅಂಶವಾಗುತ್ತದೆ. ಆದ್ದರಿಂದಲೇ ಪೀಟರ್ ಕ್ರೊಪೊಟ್ಕಿನ್ ಅವರು, "ಎಲ್ಲ ವಿಶ್ವವಿದ್ಯಾನಿಲಯಗಳು, ಅಕಾಡೆಮಿಗಳು ಮತ್ತು

ಉನ್ನತ ಶಿಕ್ಷಣದ ಸಂಸ್ಥೆಗಳನ್ನು ಮುಚ್ಚಬೇಕಾದ ಅವಶ್ಯಕತೆಯನ್ನು ಗುರುತಿಸಬೇಕು ಮತ್ತು ಅದರ ಬದಲಿಗೆ ಕಾರ್ಯಾಗಾರಗಳನ್ನು ಆರಂಭಿಸಬೇಕು" ಎಂದು ಕರೆ ನೀಡಿದರು. ಮಿಖಾಯಿಲ್ ಬಕುನಿನ್( Mikhail Bakunin) ಅವರು ವಿದ್ವಾಂಸರು ಮತ್ತು ದೈಹಿಕ ಶ್ರಮದ ಕಾರ್ಮಿಕರ ನಡುವೆ ಅಂತಿಮವಾಗಿ ಯಾವುದೇ ವ್ಯತ್ಯಾಸವಿಲ್ಲದ ಒಂದು "ಸರ್ವತೋಮುಖ ಶಿಕ್ಷಣ"ವನ್ನು ಪ್ರತಿಪಾದಿಸಿದರು[11].

ಮಾರ್ಕ್ಸ್ ವಾದ, ಕಾಲ್ಪನಿಕ ಸಮಾಜವಾದ ಮತ್ತು ರಷ್ಯಾದ ಜನಪ್ರಿಯವಾದ ಇವೆಲ್ಲವೂ ಕಲ್ಪಿಸಿಕೊಂಡ ಪರಿಕಲ್ಪನೆಗಳು ಮತ್ತು ಪ್ರತಿಪಾದನೆಗಳು ಅಕ್ಟೋಬರ್ ಕ್ರಾಂತಿಯ ನಂತರ ಪರೀಕ್ಷೆಗೆ ಒಡ್ಡಲ್ಪಟ್ಟವು. 1918ರಲ್ಲಿ ಸೋವಿಯತ್ ಶಿಕ್ಷಣದ ಪ್ರಪ್ರಥಮ ಆಯುಕ್ತರಾದ ಅನತೋಲ್ ಲುನಾಚಾರ್ಸ್ಕಿ(Anatol Lunacharski) ಅವರು, "ಉತ್ಪಾದಕ ಶ್ರಮ ಮತ್ತು ಶೈಕ್ಷಣಿಕ ಸಂಸ್ಥೆಗಳ ನಡುವೆ ಪ್ರಾರಂಭಿಕ ಸಮ್ಮಿಲನ"ದ ಮೇಲೆ ಮತ್ತು ಶಾಲೆಯು ಒಂದು ಉತ್ಪಾದಕ ಕಮ್ಯುನ್ ಆಗಿರಬೇಕು ಎಂಬುದರ ಮೇಲೆ ಒತ್ತು ಕೊಡುತ್ತಾ ಏಳು ಮೂಲಭೂತ ತತ್ವಗಳನ್ನು ಮುಂದಿಟ್ಟರು[12]. ಈ ತತ್ವಗಳನ್ನು ಅನುಸರಿಸಿ 1920ರ ದಶಕದಲ್ಲಿ ಒಂದಷ್ಟು ಪ್ರಯೋಗಗಳನ್ನು ಆಚರಣೆಗೆ ತರಲಾಯಿತು. ಅದಕ್ಕೆ ಒಂದು ಉದಾಹರಣೆ ಎಂದರೆ, ಪಾಲ್ ಬ್ಲಾನ್ಸ್ ಕಿ (Paul Blomsky) ಯುವರ ಕಲ್ಪನೆಗಳನ್ನು ಆಧರಿಸಿದ ಏಕೀಕೃತ ಶ್ರಮ ಶಾಲೆಯ ವ್ಯವಸ್ಥೆ(Unified Labor School System). "ಶಾಲಾ ಪೂರ್ವ, ಪ್ರಾಥಮಿಕ ಮತ್ತು ಮಾಧ್ಯಮಿಕ ಎಂಬ ಮೂರು ಹಂತಗಳನ್ನು ಒಂದು ಶಾಲೆಯಲ್ಲಿ ಸೇರಿಸಿ ಸಂಘಟಿಸಲಾಯಿತು ಮತ್ತು ಅದರಲ್ಲಿ ಮಗುವನ್ನು ಒಂದನೇ ತರಗತಿಯಿಂದ 9 ಅಥವಾ 10ನೆಯ ತರಗತಿಯವರೆಗೂ ತಡೆರಹಿತವಾಗಿ ತೇರ್ಗಡೆಗೊಳಿಸುವ ಅವಕಾಶವಿತ್ತು" ಹಾಗೂ ದೈಹಿಕ ಶ್ರಮ ಮತ್ತು "ಸಾಮಾಜಿಕವಾಗಿ ಉಪಯುಕ್ತವಾಗುವ ಚಟುವಟಿಕೆಗಳು" ಪಠ್ಯಕ್ರಮದ ದೊಡ್ಡ ಭಾಗವಾಗಿದ್ದವು[13]. ಸೋವಿಯತ್ ಒಕ್ಕೂಟದ ಶಿಕ್ಷಣ ತಜ್ಞರು ಈ ಶಾಲೆಯನ್ನು "ಕೆಲಸ ಮಾಡುವ ಶಾಲೆಯೇ ಹೊರತು ಮಾತನಾಡುವ ಶಾಲೆ ಅಲ್ಲ (ದುಡಿವ ಶಾಲೆ, ಕೇವಲ ನುಡಿವ ಶಾಲೆಯಲ್ಲ)" ಎಂದು ಹೆಮ್ಮೆಯಿಂದ ಕರೆದುಕೊಂಡರು. ಅನೇಕ ಜನ ಶಿಕ್ಷಕರು ಈಗಾಗಲೇ ಸ್ಥಾಪಿತವಾಗಿದ್ದ ಶೈಕ್ಷಣಿಕ ವಿಷಯಗಳನ್ನು ಒಂದೋ ಕಡಿತಗೊಳಿಸಬೇಕು ಇಲ್ಲವೇ ತೆಗೆದು ಹಾಕಬೇಕು ಎಂದು ವಾದಿಸಿದರು. ಇದರಲ್ಲೆಲ್ಲಾ ಅತ್ಯಂತ ತೀವ್ರಗಾಮಿಯಾದ ಕಲ್ಪನೆಯೆಂದರೆ, ಮಾಸ್ಕೋದಲ್ಲಿದ್ದ ಶಾಲಾ ವಿಧಾನಗಳ ಸಂಸ್ಥೆಯ ನಿರ್ದೇಶಕರಾಗಿದ್ದ ವಿ.ಎನ್. ಶುಲ್ ಜಿನ್ (V.N.Shul'gin) ಅವರು ಪ್ರತಿಪಾದಿಸಿದ "ಶಾಲೆಗಳ ಬಾಡುವಿಕೆ( withering away of the school)" ಎಂಬುದು. ಸೋವಿಯತ್ ಶಿಕ್ಷಣದ ಬಗ್ಗೆ ಅವರು ರೂಪಿಸಿದ ಮುನ್ನೋಟ/ದರ್ಶನ ಹೇಗಿತ್ತೆಂದರೆ, ಮಕ್ಕಳು ಬೆಳವಣಿಗೆ ಹೊಂದುವುದು "ಶಾಲೆಯಲ್ಲಿ ಅಲ್ಲ, ಶಾಲಾ ಪೂರ್ವ ತರಗತಿಗಳಲ್ಲಿ ಅಲ್ಲ, ಬದಲಿಗೆ ಕಾರ್ಖಾನೆಯಲ್ಲಿ, ಮಿಲ್ ಗಳಲ್ಲಿ, ಕೃಷಿ ಆರ್ಥಿಕತೆಯಲ್ಲಿ ಮತ್ತು ವರ್ಗ ಹೋರಾಟದಲ್ಲಿ"[14]. ಕಾರ್ಖಾನೆಯಲ್ಲಿ ನಡೆಸುವ ಶಾಲೆಗಳು ಮತ್ತು ಶಾಲೆಗಳು ನಡೆಸುವ ಕಾರ್ಖಾನೆಗಳು ಸಹ ಸಾಮಾನ್ಯವಾಗಿ ಅಸ್ತಿತ್ವದಲ್ಲಿ ಇರುತ್ತಿದ್ದವು.

1960 ಮತ್ತು 1970ರ ದಶಕಗಳಲ್ಲಿ ಚೀನಾ ಮತ್ತು ಕ್ಯೂಬಾದ ಪ್ರಯೋಗಗಳು ಪಾಶ್ಚಿಮಾತ್ಯ ಶಿಕ್ಷಣತಜ್ಞರನ್ನು ಆಕರ್ಷಿಸಿದಂತೆಯೇ ಸೋವಿಯತ್ ಶಿಕ್ಷಣದ ಹೊಸ ಪ್ರಯೋಗಗಳು ಸಹ ಪಾಶ್ಚಿಮಾತ್ಯ

ಶಿಕ್ಷಣತಜ್ಞರ ಮೆಚ್ಚುಗೆಯನ್ನು ಅಥವಾ ಸೂಕ್ಷ್ಮವಾದ ಗಮನವನ್ನು ಗಳಿಸಿಕೊಂಡವು. ಉದಾಹರಣೆಗೆ 1928ರಲ್ಲಿ ರಷ್ಯಾ ಗೆ ಭೇಟಿ ನೀಡಿ ಅದರ ಬಗ್ಗೆ ಸರಣಿ ಲೇಖನಗಳನ್ನು ಬರೆದು ಪ್ರಕಟಿಸಿದ ಜಾನ್ ಡ್ಯೂಯಿ ಅವರ ಲೇಖನಗಳ ಶೀರ್ಷಿಕೆಗಳೆಂದರೆ "ರಷ್ಯಾದ ಶಾಲೆಗಳು ಏನು ಮಾಡುತ್ತಿವೆ!" ಮತ್ತು "ಹೊಸಯುಗಕ್ಕೆ ಹೊಸ ಶಾಲೆಗಳು"[15.]

ಆದರೆ ಕೈಗಾರಿಕೀಕರಣವನ್ನು ಮತ್ತು ಪ್ರಭುತ್ವದ ಅಧಿಕಾರಶಾಹಿಯನ್ನು ಸ್ಥಾಪಿಸುವ ಸಂದರ್ಭ ಬಂದಾಗ ಈ ಎಲ್ಲಾ ರಮ್ಯವಾದಿ ಸುಧಾರಣೆಗಳಿಂದ, ಚೆನ್ನಾಗಿ ತರಬೇತಿ ಹೊಂದಿರುವ ತಾಂತ್ರಿಕ ಕೆಲಸಗಾರರನ್ನು, ಇಂಜಿನಿಯರ್ ಗಳನ್ನು ಹಾಗೂ ಆಡಳಿತಗಾರರನ್ನು ಉತ್ಪಾದಿಸುವಲ್ಲಿ ಸೋವಿಯತ್ ಒಕ್ಕೂಟದ ಶಾಲಾ ವ್ಯವಸ್ಥೆಯು ವಿಫಲವಾಗಿದೆ ಎಂಬುದನ್ನು ಅಲ್ಲಿನ ಕಮ್ಯುನಿಸ್ಟ್ ಪಕ್ಷವು ಕಂಡುಕೊಂಡಿತು. 1930ರ ದಶಕದ ಆರಂಭದಲ್ಲಿ ಪಕ್ಷ ಮತ್ತು ಸರ್ಕಾರಗಳು, "ಜ್ಞಾನದ ಮೇಲೆ ಪ್ರಭುತ್ವ ಸಾಧಿಸುವುದು" ಎಂಬ ಘೋಷಣೆಯ ಹೆಸರಿನಲ್ಲಿ ಮತ್ತೊಮ್ಮೆ ಹಿಂದೆ ಅಸ್ತಿತ್ವದಲ್ಲಿದ್ದ ಆಧುನಿಕ ಔಪಚಾರಿಕ ಶಿಕ್ಷಣವನ್ನು ಪುನರ್ ಸ್ಥಾಪಿಸಲು ಸರ್ಕಾರಿ ಆಜ್ಞೆಗಳ ಸರಣಿಯನ್ನೇ ಬಿಡುಗಡೆ ಮಾಡಬೇಕಾಯಿತು ಮತ್ತು ಅವರು 1920ರ ದಶಕದ ಸುಧಾರಣೆಗಳನ್ನು "ತೀವ್ರ ಎಡವಾದಿ ಪ್ರವೃತ್ತಿ" ಎಂದು ಹೆಸರಿಸಿದರು[16]. ಆನಂತರ ಸೋವಿಯತ್ ಶಿಕ್ಷಣವು, ಶೈಕ್ಷಣಿಕ ಶಿಸ್ತುಗಳಲ್ಲಿ ಬಿಗಿಯಾದ ವ್ಯವಸ್ಥೆಯನ್ನು, ವಿಷಯಗಳಲ್ಲಿ ದರ್ಜೆಗಳನ್ನು ಗಳಿಸುವುದರ ಕುರಿತು ಕಠಿಣವಾದ ನಿಯಮಗಳನ್ನು, ಶೈಕ್ಷಣಿಕ ಉತ್ಕೃಷ್ಟತೆ ಗಳಿಸಿದವರಿಗೆ ಅತ್ಯುತ್ತಮ ಬಹುಮಾನಗಳನ್ನು ಹಾಗೂ ಶಿಕ್ಷಣ ಆಧಾರಿತ ಸಾಮಾಜಿಕ ಭೇದಗಳನ್ನು ಗುರುತಿಸುವಂತಹ ವಿಶಿಷ್ಟವಾದ ಗುಣಲಕ್ಷಣಗಳನ್ನು ಬೆಳೆಸಿಕೊಂಡಿತು[17]. ಶಾಲೆಗಳಲ್ಲಿ ಬೌದ್ಧಿಕ ಅಭಿವೃದ್ಧಿಯನ್ನು ಮುಖ್ಯವಾದ ಆದ್ಯತೆ ಎಂದು ಗುರುತಿಸಿ ಪ್ರತಿಯೊಬ್ಬ ವಿದ್ಯಾರ್ಥಿಯಿಂದ ಕೂಡ ಐದನೇ ಹಂತ ಅಥವಾ ಸಂಪೂರ್ಣವಾದ ಅಂಕಗಳಿಸುವಿಕೆಯನ್ನು ನಿರೀಕ್ಷಿಸಲಾಯಿತು. ಸೋವಿಯತ್ ಶಿಕ್ಷಣವು ಸಾಂಸ್ಥಿಕ ಸೌಲಭ್ಯಗಳನ್ನು ಬಹಳಷ್ಟು ಅವಲಂಬಿಸಿತು ಮತ್ತು ಶಿಕ್ಷಣ ಎಂದರೆ ಅದು ಶಿಕ್ಷಕರು, ಪಠ್ಯಪುಸ್ತಕಗಳು ಮತ್ತು ತರಗತಿ ಚಟುವಟಿಕೆಗಳ ಸುತ್ತಲೂ ಇರುವಂತದ್ದು ಎಂದು ಗ್ರಹಿಸಲಾಯಿತು[18]. ಹೀಗಾಗಿ ಅತ್ಯಂತ ತೀವ್ರಗಾಮಿ ಸುಧಾರಣೆಗಳಿಂದ ಆಧುನಿಕ ಶಿಕ್ಷಣಪದ್ಧತಿಯತ್ತ ಹಿಂತಿರುಗುತ್ತಾ ಸೋವಿಯತ್ ಶಿಕ್ಷಣತಜ್ಞರು ತಮ್ಮ ಹಿಂದಿನ ಸಮತಾವಾದಿ ಮತ್ತು ರಮ್ಯವಾದಿ ಯೋಜನೆಗಳನ್ನು ಕೈಬಿಟ್ಟು ಹೆಚ್ಚು ಹೆಚ್ಚು ಪ್ರಾಯೋಗಿಕ ಅವಶ್ಯಕತೆಗಳತ್ತ ವಾಲಿಕೊಂಡರು. ಇದೇ ರೀತಿ ಆರಂಭ ಬಿಂದುವಿಗೆ ವಾಪಸ್ ಮರಳುವಂತಹ ಆವರ್ತಕ ಬೆಳವಣಿಗೆಯ ಪುನರಾವರ್ತನೆಯನ್ನು ಚೀನಾ ಮತ್ತು ಕ್ಯೂಬಾದ ಪ್ರಕರಣಗಳಲ್ಲೂ ನಾವು ಕಾಣಬಹುದು. ಇವೆರಡೂ ಕಡೆಗಳಲ್ಲಿ ಇರತಕ್ಕಂತಹ ಒಂದು ಮುಖ್ಯವಾದ ವ್ಯತ್ಯಾಸವೆಂದರೆ ಚೀನಾ ಮತ್ತು ಕ್ಯೂಬಾ ಗಳಲ್ಲಿ ಸುಧಾರಣೆಯ ಮುಖ್ಯ ಪ್ರತಿಪಾದಕರು ಮತ್ತು ಅದನ್ನು ಜಾರಿಗೊಳಿಸಿದವರು ಸರ್ಕಾರಗಳಾದರೆ, ಸೋವಿಯತ್ ಒಕ್ಕೂಟದಲ್ಲಿ ಸರ್ಕಾರಕ್ಕಿಂತಲೂ ಹೆಚ್ಚಾಗಿ ಉತ್ಸಾಹದಿಂದ ತೊಡಗಿಕೊಂಡವರು ಶೈಕ್ಷಣಿಕ ಕಾರ್ಯಕರ್ತರು.

## ಸೋವಿಯತ್ ಮಾದರಿಯ ಅಳವಡಿಕೆಯಿಂದ ಪುನರ್ ಪರೀಕ್ಷೆಗೆ

ಕಮ್ಯುನಿಸ್ಟ್ ಚೀನಾ ಮತ್ತು ಕ್ಯೂಬಾ ಗಳಲ್ಲಿ ಮೊದಲಿಗೆ ಶೈಕ್ಷಣಿಕ ಪದ್ಧತಿಗಳನ್ನು ಸ್ಥಾಪಿಸಿದ್ದು ಸೋವಿಯತ್ ಪ್ರಭಾವದಲ್ಲಿ. ಚೀನಾದಲ್ಲಿ ಇದ್ದ ಘೋಷಣೆಯೆಂದರೆ, "ಶಿಕ್ಷಣವನ್ನು ಸಂಪೂರ್ಣವಾಗಿ ಮತ್ತು ವ್ಯವಸ್ಥಿತವಾಗಿ ಸೋವಿಯತ್ ಒಕ್ಕೂಟದ ಮುಂದುವರೆದ ಅನುಭವಗಳಿಂದ ಕಲಿಯಲೇಬೇಕು" ಎಂಬುದು. ಚೀನಾದಲ್ಲಿ ಬೃಹತ್ ಪ್ರಮಾಣದಲ್ಲಿ ಸೋವಿಯತ್ ಪಠ್ಯಪುಸ್ತಕಗಳನ್ನು ಅನುವಾದಿಸಲಾಯಿತು ಮತ್ತು 600 ಮಂದಿ ಸೋವಿಯತ್ ತಜ್ಞರನ್ನು ಶಾಲಾ ನಿರ್ವಹಣೆಯಲ್ಲಿ ಭಾಗವಹಿಸಲು ಮತ್ತು ಶಿಕ್ಷಣ ನೀಡಲು ಆಹ್ವಾನಿಸಲಾಯಿತು[19]. ಉದಾಹರಣೆಗೆ ಜಾಗತಿಕ ಇತಿಹಾಸದ ಶಿಕ್ಷಣದಲ್ಲಿ ಚೀನಾ ಆದಿಮ ಸಮತಾವಾದಿ ಸಮಾಜದಿಂದ ಗುಲಾಮ ಪದ್ಧತಿ, ಊಳಿಗಮಾನ್ಯ ಪದ್ಧತಿ, ಬಂಡವಾಳಶಾಹಿ ಪದ್ಧತಿ ಮತ್ತು ಸಮಾಜವಾದಗಳೆಂಬ ಎಲ್ಲೆಡೆ ಅನ್ವಯಿಸುವ ಸಾಮಾನ್ಯವಾದ ಅಭಿವೃದ್ಧಿಯ ಹಂತಗಳ ಮೂಲಕ ಸಮಾಜವು ದಾಟಿ ಹೋಗಬೇಕಾಗುತ್ತದೆ ಎಂಬಂತಹ ಸ್ಟಾಲಿನ್ ವಾದಿ ತಿಳುವಳಿಕೆಯನ್ನು ಅಳವಡಿಸಿಕೊಂಡಿತು. ಯಾವುದೇ ಸ್ಥಳೀಯ ವೈವಿಧ್ಯತೆಗೆ ಗಮನ ನೀಡದೆ ಸಾರ್ವತ್ರಿಕವಾಗಿ ಹೇರುವ ಇಂತಹ ಬಲವಂತದ ವಿಶ್ವ ಚಾರಿತ್ರಿಕ ಚೌಕಟ್ಟನ್ನು ಸಾಕ್ಷಿ ಪುರಾವೆ ಇಲ್ಲದೆ ಒಪ್ಪಿಕೊಳ್ಳಲಾಯಿತು [20]. ಅಂಟನ್ ಮಕರೆಂಕೊ ಮತ್ತು ಐ.ಎ. ಕೈರೋವ್ ಮೊದಲಾದ ರಷ್ಯಾದ ಶಿಕ್ಷಣ ತಜ್ಞರನ್ನು ಆಚಾರ್ಯರು (ಅಧಿಕೃತತೆ ಇರುವ ವ್ಯಕ್ತಿಗಳು) ಎಂದು ಒಪ್ಪಿಕೊಂಡು ಚೀನಾದಲ್ಲಿನ ಪೀಪಲ್ಸ್ ಎಜುಕೇಶನ್ ಎಂಬ ಪ್ರಮುಖವಾದ ಬೋಧನಾಶಾಸ್ತ್ರದ (pedagogical) ನಿಯತಕಾಲಿಕವು ತೀವ್ರವಾಗಿ ಸೋವಿಯತ್ ಕಲ್ಪನೆಗಳನ್ನು ಪರಿಚಯಿಸಿತು[21]. ಶಾಲೆಯ ನಂತರದ ಚಟುವಟಿಕೆಗಳನ್ನು ಪ್ರದರ್ಶಿಸಲು ಚೀನಿಯರು "ಮಕ್ಕಳ ಅರಮನೆಗಳು" ಎಂಬ ರಷ್ಯನ್ ಮಾದರಿಯನ್ನು ಅಳವಡಿಸಿಕೊಳ್ಳುವವರೆಗೂ ಹೋಗಿದ್ದರು.

ರಷ್ಯಾದ ಶಿಕ್ಷಣ ಪದ್ಧತಿಯನ್ನು ಅನುಕರಿಸಲು ಕ್ಯೂಬಾ ದೇಶದವರು ಸಹ ಇಂತದೇ ಪ್ರಯತ್ನಗಳನ್ನು ಮಾಡಿದರು. ಕ್ಯೂಬಾದ ಕ್ರಾಂತಿಕಾರಿ ಸರ್ಕಾರದ ಪ್ರಪ್ರಥಮ ಶಿಕ್ಷಣ ಸಚಿವರಾದ ಅರ್ಮಾಂಡೋ ಹಾರ್ಟ್ ಅವರು ತಮ್ಮ ಕ್ರಾಂತಿಯು ಸಮಾಜವಾದಿ ಎಂದು ಘೋಷಿತವಾದ ಕೂಡಲೇ ಸೋವಿಯತ್ ವ್ಯವಸ್ಥೆಯನ್ನು ಅಧ್ಯಯನ ಮಾಡಲು 1961ರಲ್ಲಿ ಸೋವಿಯತ್ ಒಕ್ಕೂಟಕ್ಕೆ ಭೇಟಿ ನೀಡಿದರು. ಸೋವಿಯತ್ ಒಕ್ಕೂಟದಂತೆಯೇ ಇಲ್ಲಿಯೂ ಕೂಡ ಶೈಕ್ಷಣಿಕ ಮತ್ತು ವೈಜ್ಞಾನಿಕ ಕಾರ್ಮಿಕರ ಸಂಘವನ್ನು(Trade Union of Education and Scientific Workers) ಸರ್ಕಾರವು ಸ್ಥಾಪನೆ ಮಾಡಿ, ಅದು ಶೈಕ್ಷಣಿಕ ಸುಧಾರಣೆಯ ಕಾರ್ಯವನ್ನು ಕೈಗೆತ್ತಿಕೊಂಡಿತು. 1961 ಮತ್ತು 1962ರಲ್ಲಿ ಕ್ಯೂಬಾದ ಸರ್ಕಾರವು 4,700ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಸೋವಿಯತ್ ಒಕ್ಕೂಟಕ್ಕೆ ಮತ್ತು ಪೂರ್ವ ಯೂರೋಪಿನ ದೇಶಗಳಿಗೆ ಕಳಿಸಿಕೊಟ್ಟಿತು[22]. ಜೊತೆಗೆ ಅದು ಸೋವಿಯತ್ ಮಾದರಿಯನ್ನು ಅನುಕರಿಸಿ ಶಿಕ್ಷಕರ

ತರಬೇತಿಗಾಗಿ, ಮಕರೆಂಕೋ ಪೆಡಗಾಜಿಕಲ್ ಇನ್ಸ್ಟಿಟ್ಯೂಟ್ ಮತ್ತು ಒಂದಷ್ಟು ಪಾಲಿಟೆಕ್ನಿಕ್ ಶಾಲೆಗಳನ್ನು ಆರಂಭಿಸುವ ನಿರ್ದಿಷ್ಟ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡಿತು.

ಅದೇನೆ ಆದರೂ ಸೋವಿಯತ್ ಶಿಕ್ಷಣದ ಮಾದರಿಯ ಕುರಿತಾದ ಚೀನಾ ಮತ್ತು ಕ್ಯೂಬಾ ದೇಶಗಳಲ್ಲಿನ ಉತ್ಸಾಹವು ಮುಂದುವರೆದದ್ದು ಕೆಲವು ವರ್ಷಗಳ ಕಾಲ ಮಾತ್ರ. ತಮ್ಮ ತಮ್ಮ ದೇಶಗಳಲ್ಲಿ ಹೊಸ ಆಳ್ವಿಕೆಯನ್ನು ಸ್ಥಾಪಿಸಿ ಅನುಕ್ರಮವಾಗಿ ಏಳು ಅಥವಾ ಒಂಬತ್ತು ವರ್ಷಗಳು ಘಟಿಸುವಷ್ಟರಲ್ಲಿ ಎಂದರೆ ಚೀನಾದಲ್ಲಿ 1957ರ ಹೊತ್ತಿಗೆ ಮತ್ತು ಕ್ಯೂಬಾದಲ್ಲಿ 1965ರ ಹೊತ್ತಿಗೆ ಆಯಾ ದೇಶಗಳಲ್ಲಿನ ನಾಯಕರು, ಸಮತಾವಾದದ ಕುರಿತು ಸೊವಿಯತ್ ಒಕ್ಕೂಟವು ಅಳವಡಿಸಿಕೊಂಡಿದ್ದ ಸಾಮಾನ್ಯ ಧೋರಣೆಯ ಬಗೆಗೆ ಅಸಮಾಧಾನವನ್ನು ಬೆಳೆಸಿಕೊಳ್ಳಲಾರಂಭಿಸಿದರು ಮತ್ತು ತಾವು ಸೋವಿಯತ್ ಒಕ್ಕೂಟದಿಂದ ಯಾವುದನ್ನು ಸ್ವೀಕರಿಸಿ ಅನುಷ್ಠಾನಕ್ಕೆ ತಂದಿದ್ದರೋ ಅದನ್ನು ಪುನರ್ ವಿಮರ್ಶಿಸಲಾರಂಭಿಸಿದರು[23]. ಎರಡು ದೇಶಗಳಲ್ಲಿಯೂ ಸಹ ಸೋವಿಯತ್ ಧೋರಣೆಯನ್ನು ಮೊದಲು ಪುನರ್ ವಿಮರ್ಶೆಗೆ ಒಳಪಡಿಸಿ ಬದಲಾಯಿಸಿದ ಪ್ರಥಮ ಕ್ಷೇತ್ರವೆಂದರೆ ಅದು ಶಿಕ್ಷಣವೇ. ಚೀನಿಯರು ಮತ್ತು ಕ್ಯೂಬಾ ದೇಶದವರು ಇಬ್ಬರೂ ಕೂಡ ಸೋವಿಯತ್ ಶಿಕ್ಷಣದಲ್ಲಿ ಕಂಡುಕೊಂಡಂತಹ ಮಿತಿಗಳು ರಾಜಕೀಯವಾಗಿದ್ದವು, ಆರ್ಥಿಕವಾಗಿದ್ದವು ಮತ್ತು ಬೋಧನಾಶಾಸ್ತ್ರಕ್ಕೆ ಸಂಬಂಧಿಸಿದಂಥವಾಗಿದ್ದವು. ರಾಜಕೀಯ ದೃಷ್ಟಿಕೋನದಿಂದ ಹೇಳಬೇಕೆಂದರೆ ಸೋವಿಯತ್ ಪದ್ಧತಿಯು ಬೌದ್ಧಿಕ ಬೆಳವಣಿಗೆಯನ್ನು ಶಾಲಾ ಶಿಕ್ಷಣದ ಕೇಂದ್ರದಲ್ಲಿರಿಸಿತು ಮತ್ತು ಶಿಕ್ಷಣ ಆಧಾರಿತ ಮತ್ತು ನಗರ ಆಧಾರಿತ ಸಾಮಾಜಿಕ ಕುಲೀನ ವರ್ಗವನ್ನು ಪೋಷಿಸಿದ್ದು ಹಾಗೂ ತನ್ಮೂಲಕ ನಗರ ಮತ್ತು ಹಳ್ಳಿಯ ನಡುವೆ, ಬೌದ್ಧಿಕ ಮತ್ತು ಶಾರೀರಿಕ ಶ್ರಮಗಳ ನಡುವೆ ಹಿಂದಿನಿಂದಲೂ ಬಂದಿದ್ದ ಭೇದವನ್ನು ವಿಸ್ತಾರಗೊಳಿಸಿತು, ಆಳವಾಗಿಸಿತು. ಆರ್ಥಿಕವಾಗಿ ಅಲ್ಲಿನ ವ್ಯವಸ್ಥೆಯು ಔಪಚಾರಿಕ ಶಿಕ್ಷಣದ ಮೇಲೆ ವಿಪರೀತ ಅವಲಂಬನೆಯನ್ನು ಬೆಳೆಸಿಕೊಂಡು ಮಾದರೀಕೃತವಲ್ಲದ, ಸಾಂಸ್ಥೀಕರಿಸಲ್ಪಡದ ಸ್ವರೂಪಗಳನ್ನು ಅಲ್ಲಗಳೆದು ಶಿಕ್ಷಣದ ಸಾರ್ವತ್ರಿಕರಣಕ್ಕೆ ಅಡ್ಡಿಯಾಗಿತ್ತು[24]. ಬೋಧನಾಶಾಸ್ತ್ರದ ಮಟ್ಟಿಗೆ ಹೇಳಬೇಕೆಂದರೆ ಸೋವಿಯತ್ ಪದ್ಧತಿಯು, ಶಿಕ್ಷಣದ ಕುರಿತಾದ ಅದರ ಅತ್ಯಂತ ಸಂಕುಚಿತವಾಗಿ ನಿರೂಪಿಸಲ್ಪಟ್ಟ ಪರಿಕಲ್ಪನೆಗಳಿಗಾಗಿ ಹಾಗೂ ಅದರ ಕಠಿಣ (rigid) ವಿಧಾನಗಳಿಗಾಗಿ ಟೀಕೆಗೊಳಗಾಗಿತ್ತು[25].

ಕ್ರಾಂತಿಯ ನಂತರದ ಚೀನಾದ ಶಿಕ್ಷಣ ವ್ಯವಸ್ಥೆಯಲ್ಲಿ ಒಂದು ತಿರುವಿನ ಬಿಂದು 1957ರ ಆರಂಭದಲ್ಲಿ ಮಾವೋ ಅವರು "ಶಿಕ್ಷಣವು ಕಾರ್ಮಿಕ ವರ್ಗದ ರಾಜಕೀಯಕ್ಕೆ ನೆರವಾಗಬೇಕು ಮತ್ತು ಅದು ಉತ್ಪಾದನಾ ಚಟುವಟಿಕೆಯೊಂದಿಗೆ ಸಮ್ಮಿಲನ ಹೊಂದಬೇಕು" ಎಂದು ಆಗ್ರಹಿಸಿದ ನಂತರ ಕಾಣಿಸಿಕೊಂಡಿತು. "ಶ್ರಮದಲ್ಲಿ ತೊಡಗುವ ಜನಗಳು, ಅದೇ ಸಂದರ್ಭದಲ್ಲಿ ಬುದ್ಧಿಜೀವಿಗಳಾಗಿರಬೇಕು ಮತ್ತು ಬುದ್ಧಿಜೀವಿಗಳು ಶ್ರಮಿಕರಾಗಬೇಕು" ಎನ್ನಲಾಯಿತು[26]. ಅದೇ ವರ್ಷದಲ್ಲಿ ಈ ಒಂದು ಶೈಕ್ಷಣಿಕ ಪುನರ್ ರಚನೆಯ ಭಾಗವಾಗಿ, ಚೀನಾದ 'ಪೀಪಲ್ಸ್ ಎಜುಕೇಶನ್' ನಿಯತಕಾಲಿಕವು, ಸೋವಿಯತ್ ಶಿಕ್ಷಣ ತಜ್ಞರು ಬರೆದ ಲೇಖನಗಳನ್ನು ಪ್ರಕಟಿಸುವುದನ್ನು ನಿಲ್ಲಿಸಿತು ಮತ್ತು ಉನ್ನತ ಶಿಕ್ಷಣದ ಸಚಿವಾಲಯವು ಸೋವಿಯತ್

ಮಾದರಿಯ ಶೈಕ್ಷಣಿಕ ಹುದ್ದೆಯಾದ -ಪಶ್ಚಿಮದಲ್ಲಿ ಅಸೋಸಿಯೇಟ್ ಪ್ರೊಫೆಸರ್ ಎಂಬುದಕ್ಕೆ ಹತ್ತಿರವಾಗಿದ್ದ- ಅಸೋಸಿಯೇಟ್ ಡಾಕ್ಟರೇಟ್ ಎಂಬುದನ್ನು ನೀಡುವ ಪದ್ಧತಿಯನ್ನು ಕಿತ್ತುಹಾಕಿತು[27].

ಇದೇ ರೀತಿಯಲ್ಲಿ ಬೌದ್ಧಿಕತೆಯಿಂದ ತಾತ್ವಿಕತೆಯತ್ತ ಮತ್ತು ಶೈಕ್ಷಣಿಕ ಅಧ್ಯಯನದಿಂದ ಹೆಚ್ಚು ಉಪಯೋಗಕಾರಿ ಶಿಕ್ಷಣದತ್ತ ದಾರಿಯನ್ನು ಪುನರ್ ನಿರ್ಮಿಸಿಕೊಳ್ಳುವುದರೊಂದಿಗೆ 1965 ರಲ್ಲಿ ಕ್ಯೂಬಾದ ಕ್ರಾಂತಿಯ ನಂತರದ ಶಿಕ್ಷಣದಲ್ಲಿ ಒಂದು ತಿರುವಿನ ಬಿಂದು ಕಾಣಿಸಿಕೊಂಡಿತು. ಜೂನ್ ತಿಂಗಳಿನಲ್ಲಿ ಸರ್ಕಾರವು ಪ್ರತಿಯೊಬ್ಬ ನಾಗರಿಕನಲ್ಲಿ ಒಂದು ವೈಚಾರಿಕ ಬದಲಾವಣೆಯನ್ನು ಖಚಿತಪಡಿಸಲು ಶೈಕ್ಷಣಿಕ ಆಂದೋಲನವನ್ನು ಘೋಷಿಸುವುದರೊಂದಿಗೆ ಈ ಒಂದು ಪರಿವರ್ತನೆಯು ಕಾಣಿಸಿಕೊಂಡಿತು [28]. ಅನೇಕ ವರ್ಷಗಳ ನಂತರ ಕ್ಯಾಸ್ಟ್ರೋ ಅವರು 1960ರ ದಶಕದ ಆದಿಭಾಗದಲ್ಲಿನ ಶೈಕ್ಷಣಿಕ ನೀತಿಗಳತ್ತ ಹಿಂತಿರುಗಿ ನೋಡಿ ಹೀಗೆಂದು ನುಡಿದರು: "ನಾವು ದೇಶದ ಉತ್ಪಾದನಾ ಚಟುವಟಿಕೆಗಳಲ್ಲಿ ಭಾಗವಹಿಸದಿರುವ, ವಾಸ್ತವದಿಂದ ಮತ್ತು ಮೂರ್ತ ಸಮಸ್ಯೆಗಳಿಂದ ವಿಚ್ಛೇಧಿತರಾದ ಶೇಕಡ ನೂರರಷ್ಟು ಬುದ್ಧಿಜೀವಿಗಳನ್ನು ಸೃಷ್ಟಿಸುತ್ತಿದ್ದೇವೆ ಎಂಬುದನ್ನು ಗಮನಿಸಿದೆವು". ಗ್ರಂಥಾಲಯಗಳಲ್ಲಿ ವಿದೇಶಿ ಪಠ್ಯಪುಸ್ತಕಗಳು ತುಂಬಿಕೊಂಡಿವೆ; ಹೀಗಾಗಿ ವಿದ್ಯಾರ್ಥಿಗಳು ಒಂದು 'ಕಾಲ್ಪನಿಕ ಜಗತ್ತಿನಲ್ಲಿ' ಬದುಕುತ್ತಿದ್ದಾರೆ ಮತ್ತು ಅವರು ಶಾಲೆಯನ್ನು ಮುಗಿಸಿ ವಾಸ್ತವಿಕತೆಯನ್ನು ಎದುರಿಸಿದಾಗ 'ಆಘಾತಕ್ಕೆ ಒಳಗಾಗುತ್ತಿದ್ದಾರೆ' ಎಂದು ಸಹ ನುಡಿದರು ಚೀನಾ ಮತ್ತು ಕ್ಯೂಬಾ ಇಂತಹ ಒಂದು ಸಂದರ್ಭದಲ್ಲಿ ತಮ್ಮ ಶೈಕ್ಷಣಿಕ ಪ್ರಯೋಗಗಳನ್ನು ಆರಂಭಿಸಿದವು.

## ಚೀನಾದಲ್ಲಿ ಶೈಕ್ಷಣಿಕ ಕ್ರಾಂತಿ

ಚೀನಾದ ಶಿಕ್ಷಣ ಪದ್ಧತಿಯಲ್ಲಿ ಮರು ನಿರ್ದೇಶನವನ್ನು ನಾಟಕೀಯ ರೀತಿಯಲ್ಲಿ ನೇರವಾಗಿ ಆಗುಮಾಡಿದ್ದು 1958ರ ಮಹಾನ್ ಮುಂಜಿಗಿತ (Great Leap Forward): ಪ್ರಾಥಮಿಕ ಶಾಲೆಗಳ ಐದು ಅಥವಾ ಆರನೆ ತರಗತಿಗಳಿಂದ ಹಿಡಿದು ವಿಶ್ವವಿದ್ಯಾಲಯಗಳವರೆಗೂ ವಿದ್ಯಾರ್ಥಿಗಳು ಹಾಗೂ ಬೋಧಕರು ತಮ್ಮ ದಿನನಿತ್ಯದ ಮಾಮೂಲಿ ಚಟುವಟಿಕೆಗಳನ್ನು ಕೈಬಿಟ್ಟು ಉತ್ಪಾದಕ ಕೆಲಸಗಳಲ್ಲಿ ತಮ್ಮನ್ನೇ ತೊಡಗಿಸಿಕೊಂಡರು, ಅದರಲ್ಲೂ ವಿಶೇಷವಾಗಿ ಕ್ಯಾಂಪಸ್ ಗಳಲ್ಲಿ ಕುಲುಮೆಗಳನ್ನು ಕಟ್ಟಬೇಕೆಂಬ ಕಬ್ಬಿಣ ಮತ್ತು ಉಕ್ಕಿನ ಉದ್ದಿಮೆಯ ಪ್ರಚಾರದಲ್ಲಿ ತೊಡಗಿಸಿಕೊಂಡರು. ಅದು ಅಧ್ಯಯನ ಹಾಗೂ ದುಡಿಮೆಯನ್ನು ಒಗ್ಗೂಡಿಸಬೇಕೆಂಬ ದಿಕ್ಕಿನಲ್ಲಿ ತೆಗೆದುಕೊಳ್ಳಲಾದ ಒಂದು ನಿರ್ದಿಷ್ಟ ಕ್ರಮವಾಗಿತ್ತು.[30]

1958ರ ಸೆಪ್ಟೆಂಬರ್ ನಲ್ಲಿ, ಅಧ್ಯಯನದೊಂದಿಗೆ ಉತ್ಪಾದಕ ಕೆಲಸವನ್ನು ಒಟ್ಟುಗೂಡಿಸುವುದರ ಮೇಲೆ ಒತ್ತು ನೀಡಿದ್ದಂತಹ "ಶಿಕ್ಷಣದ ಕುರಿತಾದ ನಿರ್ದೇಶನ"ವನ್ನು ಪಕ್ಷದ ಕೇಂದ್ರ ಸಮಿತಿ ಹಾಗೂ ರಾಜ್ಯ ಮಂಡಳಿಗಳು ಜಂಟಿಯಾಗಿ ಹೊರಡಿಸಿದವು, ಅದು ವಿಶೇಷವಾಗಿ ಶಾಲೆಗಳು ಹಾಗೂ ಕಾರ್ಖಾನೆಗಳು

ಅಥವಾ ಕೃಷಿ ಕ್ಷೇತ್ರಗಳು ಒಂದು ಇನ್ನೊಂದನ್ನು ನಡೆಸುವುದರ ರೀತಿಯಲ್ಲಿರಬೇಕು ಎಂದು ಒತ್ತು ನೀಡಿತ್ತು. ಒಂದು ಮೂಲದ ಪ್ರಕಾರ, 1958 ರಲ್ಲಿ 397 ಕಾಲೇಜುಗಳು ಹಾಗೂ ವಿಶ್ವವಿದ್ಯಾಲಯಗಳು 7,240 ಕಾರ್ಖಾನೆಗಳನ್ನು ನಡೆಸುತ್ತಿದ್ದವು ಹಾಗೂ 13000 ಮಾಧ್ಯಮಿಕ ಶಾಲೆಗಳು 1,44,000 ಕಾರ್ಖಾನೆಗಳನ್ನು ನಡೆಸುತ್ತಿದ್ದವು.[31] ಈ ಮಧ್ಯೆ ಅನೇಕ ಕಾರ್ಖಾನೆಗಳು ಕಮ್ಯೂನ್ ಗಳು ಹಾಗೂ ಆಡಳಿತ ಘಟಕಗಳು ಶಾಲೆಗಳನ್ನು ಪ್ರಾರಂಭಿಸಿದವು ಅಥವಾ ಕೆಲಸ-ಅಧ್ಯಯನ ಕಾರ್ಯಕ್ರಮಗಳನ್ನು ನಡೆಸುತ್ತಿದ್ದವು. ಉದಾಹರಣೆಗೆ ಶೆಂಗ್ಯಾಂಗ್ ನಲ್ಲಿ ಲೈಮಿಂಗ್ ಮೆಷೀನರಿ ಉದ್ದಿಮೆಯು ವಿಶ್ವವಿದ್ಯಾಲಯದ ಡಿಪ್ಲೊಮೊಗಳನ್ನು ಮೂರು ಅಥವಾ ನಾಲ್ಕು ವರ್ಷಗಳಲ್ಲಿ ಪಡೆದುಕೊಳ್ಳಲು ನೂರಾರು ಕಾರ್ಮಿಕರನ್ನು ತರಬೇತುಗೊಳಿಸುವ ಯೋಜನೆಯೊಂದಕ್ಕಾಗಿ ಒಂದು ವಿಶ್ವವಿದ್ಯಾಲಯವನ್ನು ತೆರೆಯಿತು. ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳೂ ಸಹ ತರಕಾರಿ ಬೆಳೆಯುವುದರಲ್ಲಿ, ಕೋಳಿ ಸಾಕಣೆಯಲ್ಲಿ ಅಥವಾ ಗೊಬ್ಬರ ಸಂಗ್ರಹಿಸುವುದರಲ್ಲಿ ನಿರತರಾಗಿದ್ದರು. ‘ದುಡಿಮೆ’ ಎನ್ನುವ ಪದವು ಯಾವುದೇ ರೀತಿಯ ಉತ್ಪಾದನೆ ಹಾಗೂ ಕಲಿಕೆಯನ್ನು ಸೂಚಿಸುವುದರಿಂದ ‘ಅಧ್ಯಯನ’ ಎಂಬ ಪದವನ್ನೇ ಅಳಿಸಿ ಹಾಕಬೇಕು ಎಂದೂ ಸಹ ಕೆಲವರು ಪ್ರಸ್ತಾಪಿಸಿದರು. ಶಾಲೆಯನ್ನು “ದುಡಿಮೆ ಹಾಗೂ ಹೊಸ ತಲೆಮಾರಿನ ಉತ್ಪಾದನೆಯ ಉದ್ಯಾನವನ” ಎಂದು ಮರು ನಾಮಕರಣ ಮಾಡಬಹುದು ಎಂದರು.[32] ಹಾಗೆ ನೋಡಿದರೆ, ಜಾನ್ ಕ್ಲೆವರ್ ಲೀ ಅವರು ಸೂಚಿಸುವಂತೆ, “ಸರ್ಕಾರ ನಡೆಸುವಂತಹ, ಶೈಕ್ಷಣಿಕವಾದ ಹಾಗೂ ಪೂರ್ಣಕಾಲಿಕವಾದ ಒಂದು ಒಳ್ಳೆಯ ಶಾಲೆ ಇತ್ತು ಎನ್ನುವ ಯಾವುದೇ ಕಲ್ಪನೆಯನ್ನು ಕೈ ಬಿಡಬೇಕು. ಎಲ್ಲಾ ಉದ್ದಿಮೆಯ ಘಟಕಗಳು ಶಾಲೆಗಳನ್ನು ನಡೆಸಬಹುದು ಹಾಗೂ ಸಮರ್ಥ ಜನರು ಬೋಧಿಸಬಹುದು.”[33]

ಈ ಆಮೂಲಾಗ್ರ ಬದಲಾವಣೆಯ ಪ್ರಕ್ರಿಯೆಯಲ್ಲಿ ಪಠ್ಯಕ್ರಮದ ಬದಲಾವಣೆಯೂ ಸಹ ಒಂದು ಮುಖ್ಯ ಗುರಿಯಾಗಿತ್ತು. ವಿಜ್ಞಾನ ಹಾಗೂ ತಂತ್ರಜ್ಞಾನದ ಎಲ್ಲಾ ವಿಷಯಗಳ ಕುರಿತು ಶಾಲಾ ತರಗತಿಗಳ ಹೊರಗಡೆ ನೇರವಾದ ವಿವರಣೆಯನ್ನು ನೀಡುವುದು ಹಾಗೂ ಅವುಗಳ ಜಾರಿಗೊಳಿಸುವಿಕೆಯನ್ನು ಕುರಿತು ಮಾರ್ಗಗಳನ್ನು ಕಂಡುಕೊಳ್ಳುವುದು ಅಗತ್ಯವಾಗಿತ್ತು. ಬೋಧನೆಯ ಕೆಲಸವನ್ನು ಬಹಳಷ್ಟು ಸಲ ಕಾರ್ಖಾನೆ ಹಾಗೂ ಕೃಷಿ ಕ್ಷೇತ್ರಗಳಲ್ಲಿ ನಡೆಸಲಾಗುತ್ತಿತ್ತು. ಉದಾಹರಣೆಗೆ 1958 ರಲ್ಲಿ, ಚಿಂಗ್ ಹ್ವಾ (Qinghua) ವಿಶ್ವವಿದ್ಯಾಲಯದಲ್ಲಿ ಬಹುತೇಕ ಪದವೀಧರರು ಉತ್ಪಾದನಾ ಕೆಲಸದಲ್ಲಿ ಭಾಗವಹಿಸುವುದನ್ನು ತಮ್ಮ ಸಂಶೋಧನೆಯ ವಿಷಯವನ್ನಾಗಿ ಆರಿಸಿಕೊಂಡಿದ್ದರು, ಅದರಲ್ಲೂ ವಿಶೇಷವಾಗಿ ಬೀಜಿಂಗ್ ನ ಸುತ್ತಮುತ್ತಲಿನ ಕಮ್ಯೂನ್ ಗಳಿಗೆ ನೀರಾವರಿ ಪದ್ಧತಿಯನ್ನು ಅಥವಾ ಜಲ ವಿದ್ಯುತ್ ಸ್ಥಾವರಗಳನ್ನು ವಿನ್ಯಾಸಗೊಳಿಸುವುದು ಅವರು ಸಂಶೋಧನೆಯ ವಿಷಯವಾಗಿತ್ತು.

ಆಧುನಿಕ ಶಿಕ್ಷಣದ ಮೇಲೆ ಅಕ್ರಮಣವನ್ನು ಪ್ರಾರಂಭಿಸುತ್ತಿದ್ದಂತೆ ಶೈಕ್ಷಣಿಕ ಅಧ್ಯಯನ ಹಾಗೂ ಸಂಶೋಧನೆಗಳು ಅವನತಿಗೀಡಾದವು. "ಬೂರ್ಜ್ವಾ ವ್ಯಕ್ತಿವಾದವನ್ನು ಕೆಸರಿನಲ್ಲಿ ಮುಳುಗಿಸಿ" ಎಂಬ ಶೀರ್ಷಿಕೆಯಡಿಯಲ್ಲಿ *ಪೀಪಲ್ಸ್ ಡೇಲಿ* ಪತ್ರಿಕೆಯಲ್ಲಿ ಪ್ರಕಟವಾದ ಒಂದು ಸಂಪಾದಕೀಯವು ವೈಯಕ್ತಿಕ ಪ್ರೇರಣೆ ಹಾಗೂ ವ್ಯಕ್ತಿಗತ ಪ್ರಯತ್ನಗಳು ಎಂಬ ಶೈಕ್ಷಣಿಕ ಕೆಲಸದ ತಿರುಳಿನ ಮೇಲೆ ಅಕ್ರಮಣವನ್ನು ಮಾಡಿತು. ಶೈಕ್ಷಣಿಕ ಕೆಲಸವು "ಬೂರ್ಜ್ವಾ ವ್ಯಕ್ತಿವಾದದಿಂದ ಮಾರ್ಗದರ್ಶನವನ್ನು ಹೊಂದಿರುತ್ತದೆ" ಹಾಗೂ "ಯಾವುದೇ ಯೋಜನೆ ಅಥವಾ ಒತ್ತುಗಳಿಲ್ಲದ ವ್ಯಕ್ತಿಗತ ಪ್ರಸ್ತಾವನೆಗಳ ಮೇಲೆ ಆಧರಿಸಿರುತ್ತದೆ" ಎಂದು ಅದು ವಾದಿಸಿತು.[34] ಈ ಟೀಕೆಗೆ ಅನುಗುಣವಾಗಿ ಅನೇಕ ವಿಶ್ವವಿದ್ಯಾಲಯಗಳು ಬೌದ್ಧಿಕ ಕೆಲಸದ ಕುರಿತು ಸಾಮಾನ್ಯವಾಗಿ ಒಪ್ಪಿತವಾಗಿದ್ದಂತಹ ವಿಚಾರಗಳ ಮೇಲೆ ಕೆಲವು "ಚರ್ಚೆಗಳನ್ನು" ಆರಂಭಿಸಿದವು. ಒಮ್ಮೆ ಕ್ಸೈಬೆ(Xibie) ವಿಶ್ವವಿದ್ಯಾಲಯದ ಇತಿಹಾಸದ ವಿದ್ಯಾರ್ಥಿಯೊಬ್ಬರು ಅಮಾಯಕತೆಯಿಂದ "ಶ್ರಮದಲ್ಲಿ ವಿಶೇಷಜ್ಞತೆ" ಹಾಗೂ "ಬುದ್ಧಿಜೀವಿಗಳು ಮತ್ತು ಸಾಮಾನ್ಯ ಕಾರ್ಮಿಕರ ಮಧ್ಯದ ವ್ಯತ್ಯಾಸಗಳು" ಇವುಗಳು ಸಮಾಜವಾದಿ ಸಮಾಜದಲ್ಲಿ ಇನ್ನೂ ಸಹ ಉಪಯುಕ್ತವಾದ ವಿಚಾರಗಳು ಎಂದು ಒತ್ತಿ ನುಡಿದದ್ದಕ್ಕಾಗಿ, ಅವರ ಸಹಪಾಠಿಗಳು ಟೀಕೆಗಳಲ್ಲಿ ಅವನನ್ನು ಮುಳುಗಿಸಿಬಿಟ್ಟರು ಹಾಗೂ "ದುಡಿಯುವ ಜನಗಳ ವಿರುದ್ಧ ಬುದ್ಧಿಜೀವಿಗಳನ್ನು ಎತ್ತಿ ಕಟ್ಟಲು ಪ್ರಯತ್ನಿಸುತ್ತಿದ್ದಾನೆ" ಹಾಗೂ "ಬೂರ್ಜ್ವಾ ವಿಷಯಗಳನ್ನು ಮಾರಾಟ ಮಾಡುತ್ತಿದ್ದಾನೆ" ಎಂದು ಆರೋಪಿಸಿದ್ದರು.[35] ಔಪಚಾರಿಕ ಶಿಕ್ಷಣ ಹಾಗೂ ವಿಶೇಷ ತಜ್ಞತೆಗಳನ್ನು ನಿಷ್ಪ್ರಯೋಜಕವಾದವುಗಳು ಅಥವಾ ನಕಲಿಯಾದುದು ಎಂದೂ ಸಹ ಅನೇಕ ಸಲ ವರ್ಣಿಸಲಾಗುತ್ತಿತ್ತು. ಉದಾಹರಣೆಗೆ ಬೀಜಿಂಗ್ ವಿಶ್ವವಿದ್ಯಾಲಯದ ಜೀವ ವಿಜ್ಞಾನದ ವಿದ್ಯಾರ್ಥಿಗಳು ಅಕ್ಕಿ ಮತ್ತು ಗೋಧಿಯ ಮಧ್ಯದ ವ್ಯತ್ಯಾಸವನ್ನು ಹೇಳಲು ಅವರಿಗೆ ಸಾಧ್ಯವಾಗದಿರುವುದಕ್ಕೆ ನಾಚಿಕೆ ಪಟ್ಟುಕೊಳ್ಳುತ್ತಿದ್ದರು ಹಾಗೂ ರೈತರಿಗೆ ಸಹಾಯ ಮಾಡಲು ಭೌತವಿಜ್ಞಾನದ ವಿದ್ಯಾರ್ಥಿಗಳಿಗೆ ಜಲ ವಿದ್ಯುತ್ ಸ್ಥಾವರಗಳನ್ನು ವಿನ್ಯಾಸಗೊಳಿಸಲು ಕೇಳಿದಾಗ ಅವರಿಗೆ ಅದು ಸಾಧ್ಯವಾಗುತ್ತಿರಲಿಲ್ಲ.[36] ಇದರಿಂದ ಹತಾಶರಾದ ವಿದ್ಯಾರ್ಥಿಗಳು,, "ಬರವಣಿಗೆಯ ಪರೀಕ್ಷೆಗಳಲ್ಲಿ ನಾವು **5** ಅಂಕಗಳನ್ನು ಗಳಿಸಿದರೆ ನಿಜವಾದ ಸಮಸ್ಯೆಗಳನ್ನು ಎದುರಿಸಿದಾಗ ನಮಗೆ ಕೇವಲ ಎರಡು ಅಂಕಗಳು ಮಾತ್ರ ಸಿಗುತ್ತವೆ"ಎಂದು ಹೇಳುತ್ತಿದ್ದರು.[37]

ಈ ಎಲ್ಲಾ ತತ್ವಗಳು, ನೀತಿಗಳು ಹಾಗೂ ಪ್ರಕರಣಗಳ ಹಿಂದೆ ಕೆಲಸ ಮಾಡುತ್ತಿದ್ದುದು ಮಾವೋರವರ ವೈಯಕ್ತಿಕ ಶೈಕ್ಷಣಿಕ ದರ್ಶನ ಅಥವಾ ಮುನ್ನೋಟ (personal educational vision). ಅವರು ತಮಗೆ ತಾವೇ ಕೊಟ್ಟುಕೊಂಡಿದ್ದಂತಹ ಬಹಳ ಇಷ್ಟದ ಬಿರುದೆಂದರೆ "ಮಹಾನ್ ಶಿಕ್ಷಕ" ಎಂಬುದಾಗಿತ್ತು. ಅವರು ಶಿಕ್ಷಣಕ್ಕೆ ನೀಡಿದ ಈ ಮರು ನಿರ್ದೇಶನವನ್ನು ಅರ್ಥ ಮಾಡಿಕೊಳ್ಳಲು ಹಲವಾರು ಮಾವೋವಾದಿ ಕಲ್ಪನೆಗಳನ್ನು ನಾವು ಗಣನೆಗೆ ತೆಗೆದುಕೊಳ್ಳಬೇಕು. ಇದರಲ್ಲಿ ಮೊದಲನೆಯದೆಂದರೆ ಮಾವೋರವರು ಮಾಡಿಕೊಂಡ ಒಂದು ಜ್ಞಾನ ಶಾಸ್ತ್ರದ ( epistemological) ಪೂರ್ವ ತೀರ್ಮಾನ; ಅದೆಂದರೆ ಅವರು ತಮ್ಮ

*‘ಅಭ್ಯಾಸದ ಕುರಿತು’( ಆನ್ ಪ್ರಾಕ್ಟೀಸ್)* ಮತ್ತು ಇತರ ಕೃತಿಗಳಲ್ಲಿ ನಿಜವಾದ ಜ್ಞಾನವು ಲಭಿಸುವುದು ಕೇವಲ ಅಭ್ಯಾಸದ ಮೂಲಕ ಮತ್ತು ಕಲಿಕೆಗೆ ಮೂಲಾಧಾರ ಆಕರವೆಂದರೆ ಅದು ಉತ್ಪಾದನಾ ಚಟುವಟಿಕೆ ಎಂಬುದು. ಮಾವೋವಾದಿ ಚಿಂತನೆಯಲ್ಲಿ “ಅಭ್ಯಾಸ (practice)” ಎಂಬ ಪದದ ಅರ್ಥವು ಬಹುತೇಕ ಬಾರಿ ನೇರವಾಗಿ ಭಾಗವಹಿಸುವುದು ಎಂದಾಗುತ್ತದೆ ಮತ್ತು “ಜ್ಞಾನ” ಎಂದರೆ ಅದು ನೇರ ಅನುಭವ ಎಂಬ ಅರ್ಥವನ್ನು ಸೂಚಿಸುತ್ತದೆ. ಅವರಿಗಿದ್ದ ಎರಡನೆಯ ಕಲ್ಪನೆಯೆಂದರೆ ಔಪಚಾರಿಕ ಶಿಕ್ಷಣದ ಕುರಿತು ತಿರಸ್ಕಾರ ಮತ್ತು ಬುದ್ಧಿಜೀವಿಗಳ ಕುರಿತು ಇದ್ದ ಅಪನಂಬಿಕೆ. ಅವರೇ ಒಮ್ಮೆ ಹೀಗೆ ಹೇಳಿಕೊಂಡರು: “ನನಗೆ ಯಾವತ್ತಿಗೂ ಸಹ ಶಾಲೆಯ ಬಗ್ಗೆ ಗಾಢವಾದ ದ್ವೇಷವಿತ್ತು. ಆದ್ದರಿಂದ ನಾನು ಮತ್ತೆ ಶಾಲೆಗೆ ಹೋಗುವುದಿಲ್ಲ ಎಂದು ನಿರ್ಧರಿಸಿದೆ.” 1958ರ ಮಾರ್ಚ್ ತಿಂಗಳಿನಲ್ಲಿ ಅವರು ಒಂದು ಉಪನ್ಯಾಸವನ್ನು ನೀಡಿದ್ದರು. ಅದನ್ನು ನಂತರ ‘ಕಲಿಕೆಯಲ್ಲಿನ ಕುರುಡು ನಂಬಿಕೆಯ ವಿರುದ್ಧ’ ಎಂಬುದಾಗಿ ಪ್ರಕಟಿಸಲಾಗಿತ್ತು. ಅದರಲ್ಲಿ ಮಾವೋ ಅವರು, ಅನೇಕ ಪ್ರಕರಣಗಳಲ್ಲಿ ವಿಶೇಷವಾಗಿ ಕನ್ಫ್ಯೂಷಿಯಸ್, ಜೀಸಸ್, ಸನ್ ಯಾಟ್ ಸೆನ್, ಮಾರ್ಕ್ಸ್, ಮತ್ತು ಫ್ರಾಂಕ್ಲಿನ್ ಅವರಂತಹ ಪ್ರಮುಖ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಕಂಡುಬರುವಂತೆ, ಶೈಕ್ಷಣಿಕ ಮತ್ತು ಸಾಂಸ್ಥಿಕ ಶಿಕ್ಷಣವು, ಬೌದ್ಧಿಕ ಅಥವಾ ತಾಂತ್ರಿಕ ಸಾಧನೆಗೆ ಅನವಶ್ಯಕ ಎಂಬುದು ಸಾಬೀತಾಗಿದೆ ಎಂದರು [38]. ಇದಲ್ಲದೆ ಶಾಲಾ ಕಲಿಕೆಯ ಅವಧಿಯು ತುಂಬಾ ಉದ್ದವಾಗಿದ್ದು ಅದರಿಂದಾಗಿ ವಿದ್ಯಾರ್ಥಿಗಳು ಭತ್ತ ಸಾಸಿವೆ, ಗೋಧಿ ಅಥವಾ ನವಣೆಯಂತಹ ಧಾನ್ಯಗಳನ್ನು ಬೆಳೆಯುವ ಬಗ್ಗೆ ಏನೂ ತಿಳಿದುಕೊಂಡಿರುವುದಿಲ್ಲ[39]. ನಂತರ ಅವರು ಪಠ್ಯಕ್ರಮವನ್ನು ‘ಅರ್ಧದಷ್ಟು ಕತ್ತರಿಸಬೇಕು’ ಎಂದರು. ‘ಮೂಟೆಗಟ್ಟಲೆ ಕಲಿತವರ’ ಬಗ್ಗೆ ನೀವು ‘ಹೆದರುತ್ತೀರಿ’ ಎಂದು ಅವರು ತಮ್ಮ ಪ್ರೊಫೆಸರ್ ಗಳ ಬಗ್ಗೆ ಗೌರವವನ್ನು ಇಟ್ಟುಕೊಂಡಿರುವ ಕಾರ್ಯಕರ್ತರನ್ನು ಛೇಡಿಸಿದರು[40]. ಮಾವೋ ಅವರು ತಾವು ಕಮ್ಯುನಿಸ್ಟ್ ಆಗುವುದಕ್ಕೆ ಮುಂಚೆಯೇ ಭವಿಷ್ಯದ ಸಮಾಜದಲ್ಲಿ ಕಲಿಕೆ ಮತ್ತು ಕೆಲಸದ ಯೋಜನೆಯ ಬಗ್ಗೆ ನಿರ್ದಿಷ್ಟವಾದ ಚಿಂತನೆಗಳನ್ನು ಹೊಂದಿದ್ದರು. ಭವಿಷ್ಯದಲ್ಲಿ ಮಕ್ಕಳನ್ನು ಅವರ ಪೋಷಕರಿಂದ ದೂರ ಮಾಡಿ ಪ್ರಭುತ್ವದ ನೇರ ಸುಪರ್ದಿನಲ್ಲಿ ಅವರನ್ನು ಇರಿಸಿ ಅವರು ತಮ್ಮ ಆಹಾರವನ್ನು ತಾವೇ ಗಳಿಸಿಕೊಳ್ಳುವಂತೆ ಕಾರ್ಯಾಗಾರಗಳಲ್ಲಿಯೂ, ಕೃಷಿ ಕ್ಷೇತ್ರಗಳಲ್ಲಿಯೂ ಅವರನ್ನು ತೊಡಗಿಸಬೇಕು ಎಂದು ಅವರು 1919ರಲ್ಲಿ ತಮ್ಮ ಸ್ನೇಹಿತರೊಂದಿಗೆ ಹೇಳಿದ್ದರು [41]. 1919 ರಲ್ಲಿ ತಾವೇ ಬರೆದ ಲೇಖನ ಒಂದರಲ್ಲಿ ಅವರು ಹೊಸ ರೀತಿಯ ತರುಣರನ್ನು ಸೃಷ್ಟಿಸಲು ವಿದ್ಯಾರ್ಥಿಗಳು ಪ್ರತಿದಿನವೂ ಕೂಡ ಕೃಷಿ ಕೆಲಸದಲ್ಲಿ ನಾಲ್ಕು ಗಂಟೆಗಳ ಕಾಲ ತೊಡಗುವಂತಹ ಕೆಲಸ ಮತ್ತು ಅಧ್ಯಯನದ ಶಾಲೆಗಳನ್ನು ಸ್ಥಾಪಿಸಬೇಕು ಎಂದು ಪ್ರತಿಪಾದಿಸಿದರು[42]. ಅವರು ಮುಂದಿಟ್ಟ ನಾಲ್ಕನೆಯ ಪರಿಕಲ್ಪನೆಯು ಭವಿಷ್ಯದ ಸಮಾಜದ ಬಗ್ಗೆ ಒಂದು ಭವ್ಯವಾದ ಮುನ್ನೋಟವನ್ನು ಹೊಂದಿದ್ದು ಅದರಲ್ಲಿ ವ್ಯಕ್ತಿಗಳು ಸರ್ವಾಂಗೀಣವಾದ ವ್ಯಕ್ತಿತ್ವವನ್ನು ಹೊಂದಿದ್ದವರಾಗಿದ್ದು ಯಾರೂ ಕೂಡ ಒಂದೇ ಉದ್ಯೋಗಕ್ಕೆ ಅಂಟಿಕೊಂಡಿರುವಂತಿರಲಿಲ್ಲ. 1958ರಲ್ಲಿ

ಅವರು ಪದೇಪದೇ ರೈತರು, ಕಾರ್ಮಿಕರು, ಸೈನಿಕರು, ಕಾರ್ಯಕರ್ತರು, ವಿದ್ಯಾರ್ಥಿಗಳು ಮತ್ತು ಬುದ್ಧಿಜೀವಿಗಳು ತಮ್ಮ ಕೆಲಸವನ್ನು ಅದಲು ಬದಲು ಮಾಡಿಕೊಳ್ಳಬೇಕು ಎಂದು ಹೇಳುತ್ತಿದ್ದರು [43].

ಚೀನಾದ ಶಿಕ್ಷಣ ವ್ಯವಸ್ಥೆಯ ಮರು ನಿರ್ದೇಶನವನ್ನು ಮುನ್ನಡೆಸಿದ್ದು ಕೇವಲ ಮಾವೋರವರ ವೈಚಾರಿಕ ಮತ್ತು ನೈತಿಕ ಉಪದೇಶಗಳಲ್ಲ ಅಥವಾ ಆದರ್ಶ ರಾಜ್ಯದ ಭ್ರಮೆಗಳಲ್ಲ; ಬದಲಿಗೆ ಅವು ಅದರೊಂದಿಗೆ ಬೇರೆ ನಾಯಕರ ಹೆಚ್ಚು ಕಾರ್ಯಸಾಧುವಾದ ಪರಿಗಣನೆಗಳಾಗಿದ್ದವು ಸಹ. ಅವರಲ್ಲಿ ಒಬ್ಬರಾದ ಲಿಯು ಶಾವೋಕಿ (Liu Shaoqui) ಅವರು ಸಾಂಸ್ಕೃತಿಕ ಕ್ರಾಂತಿಯಲ್ಲಿ ಪತನವಾಗುವವರೆಗೂ ಪಕ್ಷದಲ್ಲಿ ಎರಡನೆಯ ಸ್ಥಾನದಲ್ಲಿದ್ದು 1958ಕ್ಕೆ ಮುಂಚೆ “ಎರಡು ಕಾಲುಗಳ” ಮೇಲೆ ನಿಲ್ಲುವಂತಹ ಶಿಕ್ಷಣ ವ್ಯವಸ್ಥೆಯೊಂದನ್ನು ಸ್ಥಾಪಿಸಬೇಕು ಎಂದಿದ್ದರು. ಅದರಲ್ಲಿ ಒಂದು ಪೂರ್ಣಾವಧಿ ಕಲಿಕೆಯದ್ದು ಮತ್ತು ಇನ್ನೊಂದು ಅರೆಕಾಲಿಕ ಕಲಿಕೆಯದ್ದು ಆಗಿದ್ದು ಎರಡನೆಯದಕ್ಕೆ ಹೆಚ್ಚು ಒತ್ತು ನೀಡಬೇಕು ಎಂದಾಗಿತ್ತು. ಲಿಯು ಅವರ ಕಲ್ಪನೆಯು “ಎರಡು ಕಾಲಿನ ಮೇಲೆ ನಿಂತ ಶಿಕ್ಷಣ ಪದ್ಧತಿ”ಯು ಚೀನಾದ ಎರಡು ಮುಖ್ಯ ಸಮಸ್ಯೆಗಳನ್ನು ಪರಿಹರಿಸಲು ನೆರವಾಗುತ್ತದೆ ಎಂಬುದಾಗಿತ್ತು. ಅದರಲ್ಲಿ ಮೊದಲನೆಯದೆಂದರೆ ಶಿಕ್ಷಣದ ಸಾರ್ವತ್ರಿಕರಣ. ಅವರ ಪ್ರಕಾರ, “ಈಗ ಪ್ರಚಲಿತವಿರುವ ಪರಿಸ್ಥಿತಿಯಲ್ಲಿ ಒಂದೇ ಒಂದು ರೀತಿಯ ಪೂರ್ಣಾವಧಿ ಕಲಿಕೆಯ ಪದ್ಧತಿ ಇದ್ದರೆ ಆಗ ನಾವು ಶಿಕ್ಷಣವನ್ನು ಸಾರ್ವತ್ರಿಕರಿಸಲು ಸಾಧ್ಯವಾಗುವುದಿಲ್ಲ”. ಅವರ ಪ್ರಕಾರ ಅನೇಕ ಪ್ರದೇಶಗಳಲ್ಲಿ ಅರ್ಧದಷ್ಟು ಮಕ್ಕಳಿಗೆ ಪೂರ್ಣಾವಧಿ ಶಾಲೆಗಳೇ ಇರಲಿಲ್ಲ. ಸಮಸ್ಯೆಯನ್ನು ಪರಿಹರಿಸಲು ಇರುವ ಏಕೈಕ ಮಾರ್ಗವೆಂದರೆ, “ಅರೆಕಾಲಿಕ ಕೃಷಿ /ಕೈಗಾರಿಕಾ ಕೆಲಸ ಇರುವ ಅರೆಕಾಲಿಕ ಅಧ್ಯಯನ ಶಾಲೆಗಳನ್ನು ಸ್ಥಾಪಿಸುವುದು ಮತ್ತು ಅದರಲ್ಲಿ ಸರ್ಕಾರದಿಂದ ಒಂದಷ್ಟು ಮತ್ತು ಕುಟುಂಬದಿಂದ ಒಂದಷ್ಟು ಸಬ್ಸಿಡಿಗಳನ್ನು ಪಡೆದು ಮಕ್ಕಳು ತಮ್ಮ ಅನ್ನವನ್ನು ತಾವೇ ದುಡಿದುಕೊಳ್ಳಲು ಸಾಧ್ಯವಾಗುತ್ತದೆ”. ಪೂರ್ಣಾವಧಿ ಶಾಲೆಗಳ ಸಂಖ್ಯೆಯನ್ನು ಹೆಚ್ಚಿಸಲು ಆಗುವುದಿಲ್ಲ ಮತ್ತು ಪ್ರಭುತ್ವವು ಅವುಗಳಿಗೆ ಹಣಕಾಸನ್ನು ನೀಡಲು ಸಾಧ್ಯವಿಲ್ಲ ಬದಲಿಗೆ ಅರೆಕಾಲಿಕ ಕಲಿಕೆಯ ಎರಡನೆಯ ‘ಶಾಖೆ’ಯನ್ನು ಅಭಿವೃದ್ಧಿಪಡಿಸಬೇಕು ಎಂದು ಅವರು ಪ್ರತಿಪಾದಿಸಿದರು [44].

ಲಿಯು ಅವರ ಎರಡನೆಯ ಕಾಳಜಿ ಎಂದರೆ ನಿರುದ್ಯೋಗ ಮತ್ತು ಹರಿಹರೆಯದವರ ಸಮಸ್ಯೆಗಳು. 1949 ರಿಂದ ಕ್ರಮೇಣ ಖಾಸಗಿ ಕ್ಷೇತ್ರವು ಕಾಣೆಯಾಗಿದ್ದು ಅದು ಉದ್ಯೋಗದ ಅವಕಾಶಗಳನ್ನು ವಿಶೇಷವಾಗಿ ನಗರಗಳಲ್ಲಿ ಮತ್ತು ಪಟ್ಟಣಗಳಲ್ಲಿ ತೀವ್ರವಾಗಿ ಕಡಿತಗೊಳಿಸಿತ್ತು. ಒಂದೆಡೆ ಪೂರ್ಣಾವಧಿ ಶಾಲೆಗೆ ಹೋಗಲಾಗದೆ ಇರುವ ಮತ್ತು ಇನ್ನೊಂದೆಡೆ ಪೂರ್ಣಾವಧಿ ಕೆಲಸವನ್ನು ಗಳಿಸಿಕೊಳ್ಳಲು ಸಾಧ್ಯವಾಗದಿರುವ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಿಂದ ಹೊರಬಂದು ಪ್ರಶಸ್ತಿ ಪತ್ರ ಹೊಂದಿರುವವರ ಸಂಖ್ಯೆಯು ಅತ್ಯಂತ ದೊಡ್ಡದಾಗಿದ್ದು ಪರಿಸ್ಥಿತಿಯು ಬಿಗಡಾಯಿಸಿತು. *ಪೀಪಲ್ಸ್ ಡೈಲಿ* ಪತ್ರಿಕೆಯ ಪ್ರಕಾರ 1953ರ ಆರಂಭದಲ್ಲಿ ಕೆಲವೊಂದು ನಗರಗಳಲ್ಲಿ ಹದಿಹರೆಯದವರ ಅಪರಾಧ ಪ್ರಕರಣಗಳು ಒಂದು ಗಂಭೀರ ಸಮಸ್ಯೆಯಾಗಿತ್ತು [45]. ಹೀಗಾಗಿ ಲಿಯು ಅವರಿಗೆ ಕೆಲಸ ಮತ್ತು ಅಧ್ಯಯನದ ಕಾರ್ಯಕ್ರಮಗಳು ಅಂತವರೆಲ್ಲರ ಸಮಸ್ಯೆಗಳನ್ನು ಬಗೆಹರಿಸಲು ಒಂದು ತಾತ್ಕಾಲಿಕ ವ್ಯವಸ್ಥೆಯಾಗಿ ಕೆಲಸ

ಮಾಡಬಹುದು ಎನಿಸಿತು. ಅವರ ಬೆಂಬಲದೊಂದಿಗೆ 1963 ಮತ್ತು 1964ರಲ್ಲಿ ಶೈಕ್ಷಣಿಕ ಪ್ರಾಧಿಕಾರವು ಶೈಕ್ಷಣಿಕ ಕ್ರಾಂತಿಯ ಮೂಲಭೂತ ಕ್ರಮ ಎಂಬ ಹೆಸರಿನಲ್ಲಿ ಕೆಲಸ ಮತ್ತು ಅಧ್ಯಯನದ ಪ್ರಯೋಗವನ್ನು ವಿಸ್ತರಿಸಿತು ಮತ್ತು ನಾಲ್ಕು ಮಾದರಿ ಶಾಲೆಗಳನ್ನು ಸೃಷ್ಟಿಸಿತು: ಅವುಗಳೆಂದರೆ ಶಾಂಘೈ ಮತ್ತು ಗುವಾಂಗ್ ಕ್ಸಿ (Guangxi), ಹಾಗೂ ಗುವಾಂಗ್ಡಾಂಗ್(Guangdong), ಮತ್ತು ಶಾಂಡಾಂಗ್(Shandong) ಪುರಸಭೆಯ ಪ್ರದೇಶಗಳಲ್ಲಿನ ಶಾಲೆಗಳು [46].

1960ರ ಆದಿ ಭಾಗದಲ್ಲಿ ಚೀನಾದ ಶೈಕ್ಷಣಿಕ ಮರು ನಿರ್ದೇಶನ ಹಿನ್ನಡೆಯನ್ನು ಅನುಭವಿಸಿತು[47]. ಇದು ಪಕ್ಷದ ಮಹಾನ್ ಮುನ್ನಡೆಯ ಜಿಗಿತ (Great Leap Forward) ಕಾರ್ಯಕ್ರಮದ ವಿನಾಶಕಾರಿ ಪರಿಣಾಮವಾಗಿತ್ತು. ಇದು ವೇದ್ಯವಾಗುತ್ತಿದ್ದಂತೆ ಪಕ್ಷವು ತಾನು ಅಳವಡಿಸಿಕೊಂಡ ಮಾರ್ಗದಿಂದ ಹಿಂದಡಿ ಇಡಲು ನಿರ್ಧರಿಸಿತು. ಆದರೆ ಅನೇಕ ವರ್ಷಗಳ ನಂತರ ಸಾಂಸ್ಕೃತಿಕ ಕ್ರಾಂತಿ (Cultural Revolution) ಯು ಘಟಿಸಿದಾಗ ಶಿಕ್ಷಣವು ಆಂದೋಲನದ ಹೊಡೆತವನ್ನು ನೇರವಾಗಿ ಅನುಭವಿಸಬೇಕಾಯಿತು ಮತ್ತು ಹಿಂದಿನ ಮರು ನಿರ್ದೇಶನದ ಅವಧಿಯಲ್ಲಿ ಅನುಭವಿಸಿದ್ದಕ್ಕಿಂತಲೂ ತೀವ್ರವಾದ ಬದಲಾವಣೆಗೆ ತುತ್ತಾಯಿತು. ಇದೊಂದು ಶೈಕ್ಷಣಿಕ ಕ್ರಾಂತಿಯಾಗಿತ್ತು. ಸಾಪೇಕ್ಷವಾಗಿ ಶಿಕ್ಷಣವು ಸಮಾಜದಿಂದ ಪ್ರತ್ಯೇಕಗೊಂಡಿರುವುದರ ಅನುಕೂಲವನ್ನು ಮಾರ್ಕ್ಸ್-ವಾದಿಯೇತರ ಶಕ್ತಿಗಳು ದುರುಪಯೋಗಪಡಿಸಿಕೊಂಡಿದ್ದು, ತಾವು ಬೆಳೆಯಲು ಅದನ್ನು ಫಲವತ್ತಾದ ಕ್ಷೇತ್ರವನ್ನಾಗಿ ಮಾಡಿಕೊಂಡಿವೆ ಎಂದು ಮಾವೋ ಭಾವಿಸಿದ್ದರಿಂದ ಶಿಕ್ಷಣವನ್ನು ಈ ಆಂದೋಲನದ ಗುರಿಯಾಗಿ ಆಯ್ಕೆ ಮಾಡಿಕೊಳ್ಳಲಾಗಿತ್ತು [48].

ವಿದ್ಯಾರ್ಥಿಗಳ ದಂಗೆ, ರೆಡ್ ಗಾರ್ಡ್ ಗಳ ಚಳುವಳಿ, ಶಿಕ್ಷಕರನ್ನು ಸೈದ್ಧಾಂತಿಕ ಕಾರಣಕ್ಕಾಗಿ ಕೆಲಸದಿಂದ ಹೊರಗೆ ಹಾಕುವುದು ಮತ್ತು ಶಾಲೆಗಳು ತಾತ್ಕಾಲಿಕವಾಗಿ ನಿಂತು ಹೋದದ್ದು ಈ ಎಲ್ಲಾ ಕಾರಣಗಳಿಂದಾಗಿ ಚೀನಾದ ಶಿಕ್ಷಣ ಪದ್ಧತಿಯು 1966 ರಿಂದ 1968 ರವರೆಗೂ ಸಂಪೂರ್ಣವಾಗಿ ಅಲ್ಲೋಲಕಲ್ಲೋಲಕ್ಕೆ ಗುರಿಯಾಗಿತ್ತು. ಮತ್ತೊಮ್ಮೆ ಮಾಮೂಲು ಸ್ಥಿತಿ ಮರುಕಳಿಸಿ ಶಾಲೆಗಳು ಆರಂಭವಾದಾಗ ಶೈಕ್ಷಣಿಕ ಪದ್ಧತಿಯು ಮಾವೋರವರ ಮೂರು ನಿರ್ದೇಶನಗಳನ್ನು ಜಾರಿ ಮಾಡಲು ಹೊರಟಿತು. 1966ರ ಮೇ 7ನೇ ತಾರೀಕು ನೀಡಲಾದ ಮೊದಲನೆಯ ನಿರ್ದೇಶನವು ಎಲ್ಲಾ ಹಂತಗಳಲ್ಲಿನ ವಿದ್ಯಾರ್ಥಿಗಳು ಕೈಗಾರಿಕೆ ಮತ್ತು ಕೃಷಿಯ ಕೆಲಸಗಳಲ್ಲಿ ಭಾಗವಹಿಸಬೇಕು ಮತ್ತು ಜೊತೆಯಲ್ಲಿ ಸೈನ್ಯದ ಕರ್ತವ್ಯಗಳನ್ನು ಕಲಿಯಬೇಕು ಹಾಗೂ ಶಾಲೆಯ ಅವಧಿ ಚಿಕ್ಕದಾಗಬೇಕು ಎಂದು ಆಗ್ರಹಿಸಿತ್ತು [49]. 1947ರ ಜುಲೈ 30ರಂದು ಬಿಡುಗಡೆ ಮಾಡಲಾದ ಎರಡನೆಯ ನಿರ್ದೇಶನದಲ್ಲಿ ಮಾವೋರವರು ಕಾರ್ಮಿಕರು, ರೈತರು ಮತ್ತು ಸೈನಿಕರ ಭಾಗವಹಿಸುವಿಕೆಯೊಂದಿಗೆ ಶೈಕ್ಷಣಿಕ ಕ್ರಾಂತಿಯನ್ನು ಮುನ್ನಡೆಸಬೇಕು ಎಂದು ಹೇಳಿದ್ದರು. ಕಾರ್ಮಿಕರು ಮತ್ತು ರೈತರು ಶಾಲೆಯ ನಿರ್ವಹಣೆಯಲ್ಲಿ ಪ್ರವೇಶಿಸಿ ಅದರ ನಾಯಕತ್ವವನ್ನು ವಹಿಸಿಕೊಳ್ಳಬೇಕು ಎಂದು ಹೇಳಲಾಗಿತ್ತು [50]. 1968ರ ಜುಲೈ 21ರಂದು ನೀಡಲಾದ ಮೂರನೆಯ ನಿರ್ದೇಶನದಲ್ಲಿ ಮಾವೋ ರವರು ವಿಜ್ಞಾನ ಮತ್ತು ತಂತ್ರಜ್ಞಾನದ ಕಾಲೇಜುಗಳನ್ನು ಪುನರಾರಂಭಿಸಲು ಅನುಮತಿ ನೀಡಿದ್ದರು ಆದರೆ

ಅದರಲ್ಲಿ ಮಾನವಿಕ ಶಾಸ್ತ್ರಗಳ ಹಾಗೂ ಸಮಾಜ ವಿಜ್ಞಾನದ ಕೋರ್ಸ್ ಗಳನ್ನು ಸೇರಿಸಿರಲಿಲ್ಲ. ಅಧ್ಯಯನದ ಅವಧಿಯನ್ನು ಕತ್ತರಿಸಬೇಕಾಗಿ ಬಂತು ಮತ್ತು ವಿದ್ಯಾರ್ಥಿಗಳನ್ನು, ಪದವಿ ಮುಗಿದ ನಂತರ ತಮ್ಮ ತಮ್ಮ ಕಾರ್ಯ ಕ್ಷೇತ್ರಗಳಿಗೆ ಹಿಂದಿರುಗುವಂತಹ ಅನುಭವಿ ಕಾರ್ಮಿಕರು ಮತ್ತು ರೈತರ ನಡುವಿನಿಂದ ಆಯ್ಕೆ ಮಾಡಬೇಕಾಗಿತ್ತು [51]. ಹೀಗಾಗಿ ಈ ಹೊಸ ರೀತಿಯ ವಿದ್ಯಾರ್ಥಿಯನ್ನು "ಕಾರ್ಮಿಕ- ರೈತ- ಸೈನಿಕ ವಿದ್ಯಾರ್ಥಿ" ಎಂದು ಕರೆಯಲಾಗುತ್ತಿತ್ತು.

ಈ ಮಾರ್ಗದರ್ಶನಗಳ ಅಡಿಯಲ್ಲಿ ಚೀನಾದಲ್ಲಿನ ಶಿಕ್ಷಣವು 'ಸಮಾಜವಾದಿ ಹೊಸ ಅಂಶಗಳ' ಪ್ರಾಬಲ್ಯಕ್ಕೆ ಒಳಗಾಗಿತ್ತು. ಶೈಕ್ಷಣಿಕ ಕ್ರಾಂತಿಯ ಪ್ರತಿಪಾದಕರು "ಜಗತ್ತಿಗೆ ಪರಿಚಯಿಸಬಹುದು ಎಂದು ಭಾವಿಸಿದ್ದ ಒಂದು ಶಿಕ್ಷಣದ ಅನನ್ಯವಾದ ಮಾದರಿಯು ಲಿಯಾವೋ ನಿಂಗ್ (Liaoning) ಪ್ರದೇಶದ ಚಾವೋಯಾಂಗ್ ಕೃಷಿ ಶಾಸ್ತ್ರದ ಕಾಲೇಜಿನಲ್ಲಿ (Chaoyang Agronomy College) ಗ್ರಾಮೀಣ ಪ್ರದೇಶಗಳಲ್ಲಿ ಉನ್ನತ ಶಿಕ್ಷಣಕ್ಕಾಗಿ ಸ್ಥಾಪಿಸಲ್ಪಟ್ಟಿತು[52]. ಕಾಲೇಜಿನ ಮೂಲ ತತ್ವಗಳು ಹೀಗಿದ್ದವು: 1. ಶಿಕ್ಷಣದಲ್ಲಿ ಕಾರ್ಮಿಕ ವರ್ಗದ ನೇತೃತ್ವ; 2. ಹಳ್ಳಿಗಾಡಿನ ಮಾಧ್ಯಮಿಕ ಶಾಲೆಗಳಲ್ಲಿ ಹರಡಿಕೊಂಡ ತರಗತಿಗಳು 3. ಕಮ್ಯೂನ್ ಗಳಿಂದ ಆಯ್ಕೆಯಾಗಿದ್ದ ಮತ್ತು ಅಲ್ಲಿಗೇ ವಾಪಸ್ ಆಗುವಂಥ ವಿದ್ಯಾರ್ಥಿಗಳು; 4. "ಬುದ್ಧಿಶಕ್ತಿಯೇ ಪ್ರಥಮ" ಎನ್ನುವುದಕ್ಕೆ ವಿರೋಧ; 5. ಅರ್ಧ ಕೆಲಸ, ಅರ್ಧ ಅಧ್ಯಯನ; 6. ಉತ್ಪಾದನೆಗೆ ಸಂಬಂಧಿಸಿದ ಸಂಶೋಧನೆ, ಉತ್ಪಾದನೆ ಮತ್ತು ಬೋಧನೆಗಳನ್ನು ಐಕ್ಯಗೊಳಿಸುವುದು ಮತ್ತು ಬೋಧನೆಯು ಮೊದಲಿನ ಅಂಶಗಳಿಗೆ ಅಧೀನವಾಗಿರತಕ್ಕದ್ದು; 7. ನಿಯತವಾದ ಕ್ಯಾಂಪಸ್ ಗಳು ಇರುವುದಿಲ್ಲ; 8. ಕೋರ್ಸ್ ನ ಪ್ರವೇಶಕ್ಕೆ ಯಾವುದೇ ಸಿದ್ಧ ಮಾದರಿಯ ಅರ್ಹತೆ ಇರುವುದಿಲ್ಲ; 9. ಕಾರ್ಮಿಕ- ರೈತ- ಸೈನಿಕ ವಿದ್ಯಾರ್ಥಿಗಳು ಕಾಲೇಜಿನಲ್ಲಿ ಪ್ರವೇಶ ಪಡೆಯುತ್ತಾರೆ, ಆಡಳಿತವನ್ನು ನಿರ್ವಹಿಸುತ್ತಾರೆ ಮತ್ತು ಸುಧಾರಣೆಗಳನ್ನು ತರುತ್ತಾರೆ; ಮತ್ತು 10. ಕಾರ್ಮಿಕ –ರೈತ ಶಿಕ್ಷಕರ ಶ್ರೇಣಿಯನ್ನು ಸ್ಥಾಪಿಸುವುದು[53]. ವಿದ್ಯಾಲಯದ ಪಕ್ಷ ಸಮಿತಿಯ ವರದಿಯ ಪ್ರಕಾರ "ಹಳೆಯ ಕಾಲೇಜು ಒಂದು ಸಣ್ಣ ಪಗೋಡಾವಾಗಿತ್ತು, ಹೊಸ ಕಾಲೇಜು ರೈತರೆಲ್ಲರಿಗೂ ತೆರೆದಿತ್ತು." ಪಠ್ಯಕ್ರಮವನ್ನು ಕನಿಷ್ಠ ಪ್ರಮಾಣಕ್ಕೆ ಇಳಿಸಲಾಯಿತು: ವಿದ್ಯಾರ್ಥಿಗಳು ನೋಂದಾವಣೆ ಮಾಡಿಕೊಂಡ ಕೂಡಲೇ ಜೋಳದ ಗಿಡವನ್ನು ನೆಡಲು ಆರಂಭಿಸಿದರು ಮತ್ತು ಮಣ್ಣಿನ ಕುರಿತ ವಿಜ್ಞಾನವನ್ನು, ಸಸಿ ನೆಡುವುದನ್ನು ಅಧ್ಯಯನ ಮಾಡುವುದು ಅವಶ್ಯಕವಾಗಿರಲಿಲ್ಲ.

ನಗರಗಳಲ್ಲಿ ಉನ್ನತ ಶಿಕ್ಷಣಕ್ಕಾಗಿ ಶಾಂಘೈ ಮೆಷಿನ್ ಟೂಲ್ಸ್ ಕಾರ್ಖಾನೆಯು ಕಾರ್ಮಿಕರನ್ನು ಇಂಜಿನಿಯರ್ ಗಳಾಗಿ ಮಾರ್ಪಡಿಸುವುದಕ್ಕೆ ನಿದರ್ಶನವಾಯಿತು. ಒಂದು ಅಧಿಕೃತ ವರದಿಯ ಪ್ರಕಾರ ಸಾಂಸ್ಕೃತಿಕ ಕ್ರಾಂತಿಗೆ ಮುಂಚೆ ಕಾರ್ಖಾನೆಯಲ್ಲಿ 350 ಇಂಜಿನಿಯರ್ ಗಳಿದ್ದು, ಅವರಿಗೆ ಒಂದೋ ಕಾಲೇಜೊಂದರ ಪದವಿ ಅಥವಾ ಡಿಪ್ಲೋಮೋ ಇರುತ್ತಿತ್ತು. ಮತ್ತು ಸುಮಾರು 250 ಜನ ಅನುಭವಿಗಳಾದ ಕೇವಲ ಮಾಧ್ಯಮಿಕ ಶಿಕ್ಷಣವನ್ನು ಹೊಂದಿದ್ದ ಅಥವಾ ಹೆಚ್ಚೆಂದರೆ ವೃತ್ತಿಪರ ಶಾಲೆಯ ಡಿಪ್ಲೋಮೋ ಹೊಂದಿದ್ದ "ಕಾರ್ಮಿಕ ಇಂಜಿನಿಯರ್" ಗಳಿದ್ದರು. ವಿನ್ಯಾಸ ರಚನೆ ಮತ್ತು ಆವಿಷ್ಕಾರಗಳಲ್ಲಿ ನಿಜಕ್ಕೂ ಸಹ

ಬೆನ್ನೆಲುಬಾದವರೆಂದರೆ ಉತ್ತಮ ಶಿಕ್ಷಣ ಪಡೆದು ತಜ್ಞರಾಗಿದ್ದವರಲ್ಲ, ಬದಲಿಗೆ ಕಡಿಮೆ ಶಿಕ್ಷಣವನ್ನು ಹೊಂದಿದ್ದು ಹೆಚ್ಚು ಅನುಭವವನ್ನು ಪಡೆದವರಾಗಿದ್ದರು. 1958ರ ಒಂದು ವರದಿಯ ಪ್ರಕಾರ ಕಾರ್ಮಿಕ ಇಂಜಿನಿಯರ್ ಗಳು ಎಲ್ಲ ಯೋಜನೆಗಳ ಶೇಕಡ 60 ಅನ್ನು ನಿರ್ವಹಿಸುತ್ತಿದ್ದರು. 1860ರಲ್ಲಿ ಶೇಕಡ 60 ಅದ ಈ ಪ್ರಮಾಣವು ಸಾಂಸ್ಕೃತಿಕ ಕ್ರಾಂತಿಯ ಸಂದರ್ಭದಲ್ಲಿ ನೂರಕ್ಕೆ ನೂರರಷ್ಟು ಆಯಿತು [55]. ಮಾವೋರವರ ಪ್ರಸಿದ್ಧವಾದ ಜುಲೈ 21 ರ ನಿರ್ದೇಶನವು ನಿರ್ದಿಷ್ಟವಾಗಿ ಈ ತಜ್ಞರ ಬದಲಿಗೆ ಕಾರ್ಮಿಕರೇ ಇಂಜಿನಿಯರ್ ಗಳಾಗಿರುವುದನ್ನು ಉತ್ತೇಜಿಸುವ ಹಾಗೂ ಅವಲಂಬಿಸುವ ಕಾರ್ಖಾನೆಯ ಉಪಕ್ರಮವನ್ನು ಉದಾಹರಣೆಯಾಗಿ ಹೆಸರಿಸಿತ್ತು. ಮತ್ತು ಈ ಅಭ್ಯಾಸವನ್ನೇ ಸಾಂಸ್ಥೀಕರಿಸಬೇಕು ಎಂದು ಸಲಹೆ ನೀಡಿತ್ತು. ಇದಕ್ಕೆ ಪ್ರತಿಕ್ರಿಯೆಯಾಗಿ ಕಾರ್ಖಾನೆಯು "ಜುಲೈ 21ರ ಕಾರ್ಮಿಕರ ಕಾಲೇಜು" ಎಂಬುದನ್ನು ಸ್ಥಾಪಿಸಿತು ಮತ್ತು ಈ ಹೊಸ ಮಾದರಿಯ ಕಾಲೇಜ್ ವೇಗವಾಗಿ ದೇಶದಾದ್ಯಂತ ಹರಡಿಕೊಂಡಿತು.

ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣಕ್ಕೆ, ಲ್ಯಾನ್ಝೋ ಕುಲುಮೆಯ ಕಾರ್ಖಾನೆಯ ಮೇ 7ರ ಮಾಧ್ಯಮಿಕ ಶಾಲೆಯು (May Seventh Middle School of Lanzhou Foundry Plant) ನಿದರ್ಶನವನ್ನು ಒದಗಿಸುತ್ತದೆ. ಈ ಶಾಲೆಯು ಮೊದಲಿಗೆ ಲ್ಯಾನ್ಝೋ, ಗಾಂಶು (Ganshu) ಪ್ರದೇಶದ ಐದನೆಯ ಮಾಧ್ಯಮಿಕ ಶಾಲೆಯಾಗಿತ್ತು ಆದರೆ 1968ರ ಶಿಶಿರ ಋತುವಿನ ನಂತರ ಈ ಶಾಲೆಯು ಕಾರ್ಖಾನೆಯೊಂದಿಗೆ ಜೋಡಿಸಲ್ಪಟ್ಟು ಶಾಲೆ ಮತ್ತು ಕಾರ್ಖಾನೆಯ ಮಧ್ಯದ ಸಂಯೋಜನೆಯನ್ನು ಸೂಚಿಸುವಂತೆ ಅದಕ್ಕೆ ಮರುನಾಮಕರಣ ಮಾಡಲಾಯಿತು. ಇಂಥದೇ ಸಂಯೋಜನೆಗಳನ್ನು ಶಾಲೆ, ಕಮ್ಯೂನ್ ಮತ್ತು ಸೇನೆಯ ದಳವೊಂದರ ಜೊತೆಗೆ ಸ್ಥಾಪಿಸಲಾಯಿತು. ಈ ಜೋಡಣೆಯ ವ್ಯವಸ್ಥೆಯ ಅಡಿಯಲ್ಲಿ ಕಾರ್ಖಾನೆಯ ಕ್ರಾಂತಿಕಾರಿ ಸಮಿತಿಯ ನಿರ್ದೇಶಕನು ಶಾಲೆಯ ನಿರ್ದೇಶಕನ ಪಾತ್ರವನ್ನು ವಹಿಸಿದನು ಮತ್ತು ಶಾಲೆಯಲ್ಲಿನ ತರಗತಿಗಳನ್ನು ಮತ್ತು ವರ್ಗಗಳನ್ನು ಕೂಡ ಸೇನೆಯಲ್ಲಿ ಇರುವ ಶ್ರೇಣಿಗಳಂತೆಯೇ ಸಂಘಟಿಸಿ ಅವುಗಳಿಗೆ ಕಂಪನಿಗಳು, ಸ್ಕ್ವಾಡ್ ಗಳು ಎಂದು ಹೆಸರಿಸಿ, ಪ್ರತಿಯೊಂದು ಘಟಕಕ್ಕೂ ಸಹ ಕಾರ್ಮಿಕರಿಂದಲೇ ಆಯ್ಕೆಯಾದ ರಾಜಕೀಯ ನಿರ್ದೇಶಕನನ್ನು ನಿಯೋಜಿಸಲಾಯಿತು[56]. ವಿದ್ಯಾರ್ಥಿಗಳನ್ನು ಮತ್ತು ಶಿಕ್ಷಕರನ್ನು ಎರಡು ಗುಂಪುಗಳಾಗಿ ವಿಭಜಿಸಲಾಯಿತು. ವರ್ಷವೊಂದರಲ್ಲಿ ಎರಡು ಘಟಕಗಳು ಕೂಡ ಒಂದಾದ ಮೇಲೆ ಇನ್ನೊಂದರಂತೆ (ಪರ್ಯಾಯವಾಗಿ), ಒಂದು ಕಾರ್ಖಾನೆಗೆ ಹೋದರೆ ಇನ್ನೊಂದು ಕಮ್ಯೂನ್ ಗೆ ಹೋಗುತ್ತಿತ್ತು. ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರ ಗಳನ್ನು ಕಾರ್ಖಾನೆಯ ಮೂಲ ತತ್ವಗಳು, ಕೃಷಿಯ ಮೂಲತತ್ವಗಳು ಎಂದು ಮರುನಾಮಕರಣ ಮಾಡಲಾಯಿತು (ಎಲ್ಲ ಮಾಧ್ಯಮಿಕ ಶಾಲೆಗಳಲ್ಲೂ ಕೂಡ ಆಗ ವಿಷಯಗಳಿಗೂ ಮತ್ತು ಉತ್ಪಾದನೆಗೂ ಇರುವ ಸಂಬಂಧವನ್ನು ಈ ರೀತಿಯಲ್ಲಿ ಸೂಚಿಸುವುದು ಸಾಮಾನ್ಯ ಅಭ್ಯಾಸವಾಗಿತ್ತು), ಮತ್ತು ಅವುಗಳನ್ನು ಕಾರ್ಖಾನೆ ಮತ್ತು ಕಮ್ಯುನ್ ನ ಕ್ಷೇತ್ರದಲ್ಲೇ ಕಲಿಸಲಾಗುತ್ತಿತ್ತು. ನಾಲ್ಕು ಜನ ಹಿರಿಯ ಕಾರ್ಮಿಕರನ್ನು ಪೂರ್ಣಾವಧಿ ಶಿಕ್ಷಕರಾಗಿ ಸಂಬಳ ನೀಡಿ ನೇಮಿಸಲಾಯಿತು ಮತ್ತು ಡಜನ್ ಗಟ್ಟಲೆ ಕಾರ್ಮಿಕರು ರೈತರು ಮತ್ತು ಸೈನಿಕರನ್ನು ಅರೆಕಾಲಿಕ ಶಿಕ್ಷಕರಾಗಿ ಸೇವೆಗೆ ನಿಯೋಜಿಸಲಾಯಿತು ಮತ್ತು ಅವರ ನಡುವೆ ಒಬ್ಬನೇ

ಒಬ್ಬ ತಂತ್ರಜ್ಞನಿದ್ದು ಆತನು "ಕಾರ್ಮಿಕರೊಂದಿಗೆ ಚೆನ್ನಾಗಿ ಹೊಂದಿಕೊಳ್ಳುತ್ತಾನೆ ಎಂದು ಪರಿಗಣಿಸಲಾಗಿತ್ತು." ಶಾಲೆಗಳಲ್ಲಿದ್ದ ಹಿಂದಿನ ಮೂಲ ಶಿಕ್ಷಕರನ್ನು ಹಾಗೂ ಸಿಬ್ಬಂದಿಯನ್ನು ಒಂದೋ ವಿದ್ಯಾರ್ಥಿಗಳೊಂದಿಗೆ ಕಾರ್ಖಾನೆ ಅಥವಾ ಕೃಷಿ ಕಮ್ಯೂನ್ ಗೆ ಕಳಿಸಲಾಯಿತು ಅಥವಾ ಅವರನ್ನು ಯಾವುದೇ ಬೋಧನೆಯ ಕೆಲಸ ನೀಡದೆ, ಅವರು ತಮ್ಮನ್ನೇ "ಸುಧಾರಣೆಗೆ" ಒಳಪಡಿಸಿಕೊಳ್ಳಬೇಕು ಎಂದು ಕಾರ್ಖಾನೆ ಮತ್ತು ಕಮ್ಯೂನ್ ಗಳಲ್ಲಿ ಕೆಲಸ ಮಾಡಲು ಕಳಿಸಿಕೊಡಲಾಯಿತು.

ಸೋವಿಯತ್ ಒಕ್ಕೂಟದಲ್ಲಿ 1920ರ ದಶಕದಲ್ಲಿ ನಡೆದಂತಹ ಸಮಾನಾಂತರವಾದ ಚಳುವಳಿಗಿಂತಲೂ 1950ರ ದಶಕದ ಕೊನೆಯ ಭಾಗದಿಂದ 1970ರ ದಶಕದ ಮಧ್ಯ ಭಾಗದವರೆಗೂ ಚೀನಾದಲ್ಲಿ ನಡೆದ ಶಿಕ್ಷಣದ ಮರು ನಿರ್ದೇಶನ ಮತ್ತು ಕ್ರಾಂತಿಯ ಸತತವಾದ ಹಂತಗಳು ಹೆಚ್ಚು ಆಳವಾಗಿದ್ದವು [57]. ಆದರೆ ಸೋವಿಯತ್ ಒಕ್ಕೂಟದಲ್ಲಿ ಆದದ್ದಕ್ಕಿಂತಕ್ಕಿಂತಲೂ ಹೆಚ್ಚು ಹಠಾತ್ತಾಗಿ ಚೀನಾದ ಶೈಕ್ಷಣಿಕ ಕ್ರಾಂತಿಯು ಅಂತ್ಯವನ್ನು ಕಂಡಿತು. 1976ರಲ್ಲಿ ಮಾವೋರವರು ನಿಧನವಾದ ನಂತರ ಪಕ್ಷವು ಸಾಂಸ್ಕೃತಿಕ ಕ್ರಾಂತಿಯನ್ನು ಖಂಡಿಸಿತು ಮತ್ತು ದುಷ್ಟ ಚತುಷ್ಟಯ (Gang of Four) ಎಂಬ ತೀವ್ರಗಾಮಿ ಗುಂಪನ್ನು ಪಕ್ಷದಿಂದ ಹೊರಕ್ಕೆ ಹಾಕಿತು. ಪ್ರತಿಯೊಂದು ವಿನಾಶಕಾರಿ ನೀತಿಗೂ ಕೂಡ ದುಷ್ಟ ಚತುಷ್ಟಯವೇ ಜವಾಬ್ದಾರಿ ಎಂದು ಆಪಾದಿಸಲಾಯಿತು ಮತ್ತು ಆ ಹತ್ತು ವರ್ಷಗಳ "ಅತ್ಯಂತ ಅಲ್ಲೋಲ ಕಲ್ಲೋಲಮಯವಾದ ಕಾಲದಲ್ಲಿ ಶಿಕ್ಷಣವೇ ಅತ್ಯಂತ ವಿನಾಶಕಾರಿಯಾಗಿದ್ದ ಕ್ಷೇತ್ರ" ಎಂದು ಭಾವಿಸಲಾಯಿತು. ಮಾವೋರವರ ಸೈದ್ಧಾಂತಿಕ ಪ್ರಯೋಗದಿಂದ ಹೆಚ್ಚು ಕಾರ್ಯಸಾಧುವಾದ ಅಭಿವೃದ್ಧಿಯತ್ತ ಚಾರಿತ್ರಿಕವಾದ ಪರಿವರ್ತನೆಗೆ ನೇತೃತ್ವ ನೀಡಿದ ಡೆಂಗ್ ಸಿಯಾವೊ ಪಿಂಗ್(Deng Xiaoping) ಅವರು ದೇಶದ ಅತ್ಯುನ್ನತ ವಿಜ್ಞಾನಿಗಳಿಗೆ ಚೀನಾದ ತಂತ್ರಜ್ಞಾನವು ಪಶ್ಚಿಮಕ್ಕಿಂತಲೂ 20 ವರ್ಷ ಹಿಂದುಳಿದಿದೆ ಮತ್ತು ಈ ಹಿನ್ನಡೆಗೆ 20 ವರ್ಷಗಳ ಶೈಕ್ಷಣಿಕ ಕ್ರಾಂತಿಯೇ ಕಾರಣ ಎಂದು ಘೋಷಿಸಿದರು [58].

1977ರ ಹೊತ್ತಿಗೆ ಆಧುನಿಕ ಶಿಕ್ಷಣವು ಮೊದಲಿಗೆ ಕಾಲೇಜಿನ ಪ್ರವೇಶಕ್ಕೆ ಪರೀಕ್ಷೆಗಳನ್ನು ಮತ್ತೆ ಪರಿಚಯಿಸುವುದರೊಂದಿಗೆ ಮತ್ತು ಆ ನಂತರ ಎಲ್ಲಾ ಔಪಚಾರಿಕ ಶೈಕ್ಷಣಿಕ ಸಂಸ್ಥೆಗಳನ್ನು ಪುನರ್ ಸ್ಥಾಪಿಸಿ ವಿಸ್ತರಿಸುವುದರೊಂದಿಗೆ ಚೀನಾದಲ್ಲಿ ಮತ್ತೆ ಕಾಣಿಸಿಕೊಂಡಿತು. ಎಲ್ಲಾ 'ಸಮಾಜವಾದಿ ನವಜಾತ ಅಂಶಗಳು' ಕಣ್ಮರೆಯಾದವು. ಗುಣಮಟ್ಟ, ಶ್ರೇಣೀಕರಣ ಮತ್ತು ತೇರ್ಗಡೆ ಶತಾಂಶ ಮುಂತಾದವು ಶಾಲಾ ಶಿಕ್ಷಣದ ಆದ್ಯತೆಗಳಾದವು. ಪ್ರತಿಯೊಂದು ನಗರ ಮತ್ತು ಪ್ರಾಂತ್ಯದಲ್ಲಿ "ಕೀಲಿ ಕೈ ಶಾಲೆ"ಗಳು (ಉತ್ತಮ ಮಟ್ಟದ/ ಮಾದರಿ) ಶಾಲೆಗಳು ಸ್ಥಾಪಿಸಲ್ಪಟ್ಟವು. ಚೀನಾ ಹೀಗೆ ಪ್ರಯೋಗ ಮತ್ತು ಪುನರ್ ಸ್ಥಾಪನೆಯ ನಡುವೆ ಓಲಾಡುತ್ತಿರುವುದನ್ನು ಕಂಡ ಯುಗೋಸ್ಲಾವಿಯಾದ ಶಿಕ್ಷಣ ತಜ್ಞರೊಬ್ಬರು ಹೀಗೆಂದು ದ್ವಂದ್ವಾತ್ಮಕವಾಗಿ (ದ್ವಿಮಾನಾತ್ಮಕವಾಗಿ) ತೀರ್ಮಾನಿಸಿದರು: "ಜ್ಞಾನ, ವಿಜ್ಞಾನ ಮತ್ತು ಸಂಸ್ಕೃತಿಯನ್ನು ತಿರಸ್ಕರಿಸಿದಂತಹ ತೀವ್ರವಾದಿ ನಿಲುವು ಮತ್ತೊಂದು ಸ್ಥಿತ್ಯಂತರಕ್ಕೆ ಆಸ್ಪದ ನೀಡಿತು— ಎಂದರೆ ಹಳೆಯ ಶಾಲಾ ಪದ್ಧತಿಗೆ, ತಂತ್ರಜ್ಞಾನ ಆಧಾರಿತ ಸುಧಾರಣೆಯ ಕುರಿತಾದ ಒಲವನ್ನು ಬಲಪಡಿಸುವುದು ಇವುಗಳಿಗೆ

ಮರಳುವುದು ಆಯಿತು." [59]. ಇಷ್ಟಾಗಿಯೂ ಮಾವೋವಾದಿ ಶೈಕ್ಷಣಿಕ ಕ್ರಾಂತಿಯು ಕೆಲವೊಂದು ಕುರುಹುಗಳನ್ನು ಉಳಿಸಿತು. ಉದಾಹರಣೆಗೆ ಅರೆಕಾಲಿಕ ಮತ್ತು ವಯಸ್ಕ ಶಾಲೆಗಳು, ರಾತ್ರಿ ಶಾಲೆಗಳು ಮತ್ತು ಅಲ್ಪಾವಧಿಯ ತಾಂತ್ರಿಕ ತರಬೇತಿ ಮುಂತಾದ ಕಾರ್ಯಕ್ರಮಗಳು ಉಳಿದುಕೊಂಡವು ಮತ್ತು ಅದರಲ್ಲಿ ಕೆಲವೊಂದು ಕಾರ್ಯಕ್ರಮಗಳನ್ನು, ಉದಾಹರಣೆಗೆ ಎರಡು ವರ್ಷದ ಕಾಲೇಜು ಪದವಿಗೆ ಸಮಾನವಾದ ಪ್ರಸಾರ ಮತ್ತು ದೂರದರ್ಶನ ವಿಶ್ವವಿದ್ಯಾಲಯ ನೀಡುತ್ತಿದ್ದ ಪ್ರಶಸ್ತಿ ಪತ್ರಗಳಂತಹ ಕಾರ್ಯಕ್ರಮಗಳನ್ನು, ಹೊಸ ಶೈಕ್ಷಣಿಕ ಸ್ವರೂಪಗಳೊಂದಿಗೆ ಸೇರಿಸಿಕೊಳ್ಳಲಾಯಿತು. ಆದರೆ ಈ ಕಾರ್ಯಕ್ರಮಗಳ ನ್ಯಾಯೋಚಿತತೆಯು ಹಿಂದಿನಂತೆ ಸೈದ್ಧಾಂತಿಕತೆ (ideology) ಯನ್ನು ಆಧರಿಸಿರಲಿಲ್ಲ. ಬದಲಿಗೆ ಅವು ಔಪಚಾರಿಕ ಶಿಕ್ಷಣಕ್ಕೆ ಪೂರಕವಾಗಿ ಎಷ್ಟರಮಟ್ಟಿಗೆ ಕಾರ್ಯಸಾಧು ಎನ್ನುವುದರ ಮೇಲೆ ಅವಲಂಬಿತವಾಗಿತ್ತು.

1950ರ ದಶಕದ ಅಂತ್ಯಭಾಗದಿಂದ 1970ರ ದಶಕದ ಮಧ್ಯಭಾಗದವರೆಗೂ ನಡೆದಂತಹ ಶೈಕ್ಷಣಿಕ ಮರುಮಾರ್ಗದರ್ಶನ ಮತ್ತು ಕ್ರಾಂತಿಯ ಪ್ರಕ್ರಿಯೆಗಳು ಚೀನಾದಲ್ಲಿ ಮೂಲಭೂತವಾಗಿದ್ದವು ಮತ್ತು ಸಮಗ್ರವಾಗಿದ್ದವು. ಪ್ರತಿಯೊಂದು ಶಾಲೆಯ ಗೋಡೆಯ ಮೇಲೆ ಬರೆಯಲಾದ ಒಂದು ಘೋಷಣೆಯಲ್ಲಿ ಇದರ ತಿರುಳನ್ನು ನಾವು ಕಾಣಬಹುದು:"ಮುಕ್ತ ದ್ವಾರದ ಶಾಲಾ ಕಲಿಕೆ (Open Door Schooling)"[60]. ಇಲ್ಲಿ ದ್ವಾರ ಎಂಬುದರ ಅರ್ಥವೇನೆಂದರೆ ಶಿಕ್ಷಣವನ್ನು ಬೇರೆ ಎಲ್ಲಾ ವೃತ್ತಿಯಿಂದ ವಿಶಿಷ್ಟವಾಗಿ ಗುರುತಿಸಲು ಸಾಧ್ಯವಾಗುವಂತಹ ಎಲ್ಲಾ ನಿರ್ದಿಷ್ಟ ಲಕ್ಷಣಗಳು. ಹೀಗಾಗಿ ಬಾಗಿಲನ್ನು ತೆರೆಯುವುದು ಎಂಬುದರ ಅರ್ಥವೇನೆಂದರೆ ಎಲ್ಲಾ ರೀತಿಯ ಭೇದಗಳನ್ನು ನಿವಾರಿಸುವುದು ಮತ್ತು ರಾಜಕೀಯವಾಗಿ, ಬೌದ್ಧಿಕವಾಗಿ ಮತ್ತು ಭೌತಿಕವಾಗಿ ಬೇರೆ ಸಾಮಾಜಿಕ ಉದ್ಯಮಗಳೊಂದಿಗೆ ಒಂದಾಗುವಂತಹ ಒಂದು ಹೊಸ ಶಿಕ್ಷಣವನ್ನು ಸೃಷ್ಟಿಸುವುದು.

## ಕ್ಯೂಬಾದಲ್ಲಿ ಶೈಕ್ಷಣಿಕ ಕ್ರಾಂತಿ

ಕ್ಯೂಬಾದ ಶೈಕ್ಷಣಿಕ ಬದಲಾವಣೆಯು ಚೀನಾದಲ್ಲಿ ಆದಷ್ಟು ಹಠಾತ್ತಾಗಿ ಆಗಲಿಲ್ಲ. 1960ರ ದಶಕದ ಆರಂಭದಲ್ಲಿ ಯಾವಾಗ ಕ್ಯೂಬಾ ಸೋವಿಯತ್ ಒಕ್ಕೂಟದ ಔಪಚಾರಿಕ ಶಿಕ್ಷಣ ಪದ್ಧತಿಯನ್ನೇ ಮೂಲಭೂತವಾಗಿ ಆಧರಿಸಿಕೊಂಡು ತನ್ನ ನೀತಿಗಳನ್ನು ರೂಪಿಸಿತೋ ಆಗ ಕೆಲವೊಂದು ಲಕ್ಷಣಗಳು ಮುಂದೆ ಬರುವ ಬೆಳವಣಿಗೆಗಳನ್ನು ಸೂಚಿಸಿದವು. 1961 ರಲ್ಲಿ, ಕ್ರಾಂತಿಕಾರಿ ಕ್ಯಾಲೆಂಡರ್ ನಲ್ಲಿ ಯಾವುದನ್ನು ಶಿಕ್ಷಣದ ವರ್ಷ ಎಂದು ಗುರುತಿಸಲಾಗಿದೆಯೋ

ಆಗ, ಸರ್ಕಾರವು ತನ್ನ ಸಾಕ್ಷರತೆಯ ಆಂದೋಲನವನ್ನು ಆರಂಭಿಸಿತು. ಎಲ್ಲಾ ಪ್ರೌಢಶಾಲೆಗಳನ್ನು ಮುಚ್ಚಿತು ಮತ್ತು ಒಂದು ಲಕ್ಷಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳನ್ನು (ಬ್ರಿಗೇಡ್ ಗಳಾಗಿ ಸಂಘಟಿಸಿ) ಅವರು ಗ್ರಾಮೀಣ ಪ್ರದೇಶದಲ್ಲಿ ಆರು ತಿಂಗಳಗಳ ಕಾಲ ರೈತರಿಗೆ ಅಕ್ಷರವನ್ನು ಕಲಿಸುವುದು ಮಾತ್ರವಲ್ಲದೆ ಸೈದ್ಧಾಂತಿಕತೆ (ideology) ಯನ್ನು ಕಲಿಸಬೇಕು ಎಂದು ಕಳಿಸಿಕೊಟ್ಟಿತು. ಅದೇ ವರ್ಷದಲ್ಲಿ ಕ್ಯೂಬಾದ ಸರ್ಕಾರವು ಕ್ರಾಂತಿಕಾರಿ ಬೋಧನೆಯ ಶಾಲೆಗಳನ್ನು (Schools of Revolutionary Instruction) ಸ್ಥಾಪಿಸಿತು. ಕ್ಯಾಸ್ಟ್ರೋ ಅವರು ಒಮ್ಮೆ ವಿವರಿಸಿದ ಹಾಗೆ, "ಈ ಶಾಲಾ ಪದ್ಧತಿಯ ಉದ್ದೇಶವು ಕ್ರಾಂತಿಕಾರಿಯನ್ನು ಸೈದ್ಧಾಂತಿಕವಾಗಿ ರೂಪಿಸುವುದು ಮತ್ತು ಕ್ರಾಂತಿಕಾರಿಗಳನ್ನು ಉಪಯೋಗಿಸಿಕೊಂಡು ಉಳಿದ ಜನತೆಯಲ್ಲಿಯೂ ಕೂಡ ಸೈದ್ಧಾಂತಿಕ ರೂಪಿಸುವಿಕೆ (ideological formation) ಯನ್ನು ವಾಸ್ತವವಾಗಿಸುವುದು" [61]. ಈ ಶಾಲಾ ಪದ್ಧತಿಯನ್ನು ಬೇರೆ ಸಮಾಜವಾದಿ ರಾಷ್ಟ್ರಗಳಲ್ಲಿನ ಪಕ್ಷದ ಅಕಾಡೆಮಿಗಳಿಗಿಂತ ವಿಶಿಷ್ಟವನ್ನಾಗಿಸಿದ ಅಂಶ ಯಾವುದೆಂದರೆ ಇಲ್ಲಿ ಎಲ್ಲ ವಿದ್ಯಾರ್ಥಿಗಳ ವಯಸ್ಸು ಸಹ 14ಕ್ಕಿಂತ ಮೇಲೆ ಇರುತ್ತಿತ್ತು; ಬಹುತೇಕ ಶಾಲೆಗಳು ಇದ್ದಂತಹ ಸ್ಥಳಗಳು ಅತ್ಯಂತ ದುರ್ಗಮವಾದ, ದೂರದ, ಗ್ರಾಮೀಣ ಪ್ರದೇಶಗಳಲ್ಲಿದ್ದವು ಮತ್ತು ವಿದ್ಯಾರ್ಥಿಗಳು ತಮ್ಮ ವೆಚ್ಚಕ್ಕಾಗಿ ಅರೆಕಾಲಿಕವಾಗಿ ಕೆಲಸ ಮಾಡಲೇಬೇಕಾಗಿತ್ತು. 1962 ರಲ್ಲಿ ಈ ಕಾರ್ಯಕ್ರಮದೊಳಗೆ 12 ಪ್ರಾದೇಶಿಕ ಶಾಲೆಗಳಿದ್ದವು ಮತ್ತು ಒಂದು ರಾಷ್ಟ್ರಮಟ್ಟದ ಸಂಸ್ಥೆ ಇದ್ದಿತು ಹಾಗೂ ಇವು ಒಟ್ಟಾಗಿ 12 ಸಾವಿರ ವಿದ್ಯಾರ್ಥಿಗಳನ್ನು ಹೊಂದಿದ್ದವು[62]. 1960 ರಲ್ಲಿ ಆರಂಭವಾದ ಇನ್ನೊಂದು ಯೋಜನೆಯೆಂದರೆ ಹದಿಹರೆಯದ ವಿದ್ಯಾರ್ಥಿಗಳನ್ನು ನೋಂದಾಯಿಸಿಕೊಂಡು ಅವರಿಗೆ ತರಬೇತಿ ನೀಡಿ ಅವರನ್ನು ಪ್ರಾಥಮಿಕ ಶಿಕ್ಷಕರನ್ನಾಗಿಸುವಂತಹ ಒಂದು ಆರಂಭಿಕ ಶೈಕ್ಷಣಿಕ ಉಪಕ್ರಮವಾಗಿತ್ತು. ತರಬೇತಿಯನ್ನು ಪಡೆದುಕೊಳ್ಳುತ್ತಿದ್ದವರು ಪರ್ವತ ಪ್ರದೇಶದಲ್ಲಿದ್ದ ಕ್ಯಾಂಪಸ್ ನಲ್ಲಿ ನಾಲ್ಕು ವರ್ಷಗಳ ಕಾಲ ಅಧ್ಯಯನ ಮತ್ತು ಕೆಲಸವನ್ನು ಒಟ್ಟಿಗೆ ಮಾಡಬೇಕಿತ್ತು ಮತ್ತು ಕಡೆಯ ಎರಡು ವರ್ಷಗಳನ್ನು ರಾಜಧಾನಿ ಹವಾನಾದ ಬಳಿ ಇರುವ ಮಕರಂಕೋ ಬೋಧನಾ ಸಂಸ್ಥೆ (Makarenko Pedagogical Institute) ಯಲ್ಲಿ ಕಳೆಯಬೇಕಾಗಿತ್ತು. ಪದವಿಯನ್ನು ಪಡೆದುಕೊಂಡ ನಂತರ ವಿದ್ಯಾರ್ಥಿಗಳಿಗೆ ಗ್ರಾಮೀಣ ಪ್ರದೇಶದಲ್ಲಿ ಅಧ್ಯಾಪಕರ ಕೆಲಸಗಳನ್ನು ನಿಯೋಜಿಸುತ್ತಿದ್ದದ್ದು ಮಾತ್ರವಲ್ಲದೆ ಅವರು ಸ್ಥಳೀಯ ಮಟ್ಟದಲ್ಲಿ ರಾಜಕೀಯ ನಾಯಕತ್ವವನ್ನು ಸಹ ವಹಿಸಿಕೊಳ್ಳಬೇಕಾಗುತ್ತಿತ್ತು. ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ "ಕಾರ್ಮಿಕ- ರೈತ- ಶಿಕ್ಷಕರು" ಒಂದು ರಾಷ್ಟ್ರಮಟ್ಟದ ಜಾಲದ ಭಾಗವಾಗಿದ್ದು, ಕಾರ್ಮಿಕ ಜನತೆಯ ಶೈಕ್ಷಣಿಕ ಮಟ್ಟವನ್ನು ವಿಶ್ವವಿದ್ಯಾಲಯದ ಅಧ್ಯಯನಕ್ಕೆ ಸೂಕ್ತವಾಗುವಂತೆ ಮೇಲಕ್ಕೆ ಎತ್ತುವ ಉದ್ದೇಶವನ್ನು ಹೊಂದಿದ್ದ ಅರ್ಧ ದಿನ ಕೆಲಸ - ಅರ್ಧ

ದಿನ ಅಧ್ಯಯನದ ಕಾರ್ಯಕ್ರಮದಲ್ಲಿ ತೊಡಗಿಕೊಂಡಿದ್ದರು. ಅನೇಕ ವರ್ಷಗಳ ಸಿದ್ಧತೆಯ ನಂತರ ಈ ಕಾರ್ಮಿಕ- ವಿದ್ಯಾರ್ಥಿಗಳು ವಿಶ್ವವಿದ್ಯಾಲಯಗಳ ನಿಯತವಾದ ಅಧ್ಯಯನವನ್ನು ಆರಂಭಿಸುತ್ತಿದ್ದರು. ಈ ಆರಂಭಿಕ ನೀತಿಗಳು ಸಾಕ್ಷರತೆಯ ಅವಶ್ಯಕತೆ ಮತ್ತು ಶಿಕ್ಷಣವು ಕಾರ್ಮಿಕ ಜನತೆಗೆ ಕೈಗೆಟಕುವಂತೆ ಮಾಡುವಂತಹ ತುರ್ತಾದ ಅವಶ್ಯಕತೆಗಳನ್ನು ಪ್ರತಿಬಿಂಬಿಸುತ್ತಿದ್ದವು ಮತ್ತು ಶಾಲೆಯನ್ನು ಸಮಾಜದೊಂದಿಗೆ ಹಾಗೂ ಅಧ್ಯಯನವನ್ನು ಕೆಲಸದೊಂದಿಗೆ ಏಕೀಭವಿಸಬೇಕೆಂಬ ಕೆಲವೊಂದು ಸೈದ್ಧಾಂತಿಕ ಮಾರ್ಗದರ್ಶನಗಳಿಗೆ ಅನುಗುಣವಾಗಿದ್ದವು. ಕ್ರಾಂತಿಕಾರಿ ನಾಯಕರಾದ ಚೆಗೆವಾರ ಅವರು ತಮ್ಮ "ಕ್ಯೂಬಾದಲ್ಲಿ ಮಾನವ ಮತ್ತು ಸಮಾಜವಾದ" ಎಂಬ ಪ್ರಭಾವಶಾಲಿ ಪ್ರಬಂಧದಲ್ಲಿ ಪ್ರತಿಪಾದಿಸಿದುದು "ಇಡಿಯ ಸಮಾಜವೇ ಒಂದು ವಿಶಾಲವಾದ ಶಾಲೆಯಾಗಬೇಕು......ಶಿಕ್ಷಣವು ಸಮಾಜದೊಂದಿಗೆ ಏಕೀಕೃತವಾದುದು ಮತ್ತು ಆರಂಭಿಕ ಹಂತದಿಂದಲೂ ಕೂಡ ವಿದ್ಯಾರ್ಥಿಗಳನ್ನು ಕೆಲಸದಲ್ಲಿ ತೊಡಗಿಸುವುದನ್ನು ನಾವು ಉಪೇಕ್ಷಿಸುವುದಿಲ್ಲ"[63] ಎಂದು. ಇಂತಹ ಶೈಕ್ಷಣಿಕ ಪರಿಕಲ್ಪನೆಗಳು "ಹೊಸ ಮನುಷ್ಯ"ನ ವಿಚಾರದೊಂದಿಗೆ ಆಪ್ತವಾಗಿ ಸಂಬಂಧವನ್ನು ಹೊಂದಿದ್ದವು; ಸ್ವತಃ ಚೆಗೆವಾರ ಅವರ ವ್ಯಕ್ತಿತ್ವದಲ್ಲಿ ಮೂರ್ತೀಭವಿಸಿದೆ ಎಂದು ಹೇಳಲಾದಂತಹ ಗುಣಗಳು ಅದರಲ್ಲಿ ಇರಬೇಕು; ಅವೆಂದರೆ, "ನಿಸ್ವಾರ್ಥ ಮನೋಭಾವ, ಆತ್ಮತ್ಯಾಗ, ಸರಳ ಜೀವನ, ಸಂಪೂರ್ಣವಾಗಿ ಸಮಾಜೀಕರಣಗೊಂಡ, ಸಮಾನತಾಪರನಾದ ಮನುಷ್ಯನಾಗಿರುವುದು" ಇತ್ಯಾದಿ.

1964ರ ಮೇ ತಿಂಗಳಿನಲ್ಲಿ ಸರ್ಕಾರವು ಕೆಲಸ ಮತ್ತು ಅಧ್ಯಯನಗಳು ಒಂದಾಗುವುದಕ್ಕೆ ಒತ್ತು ನೀಡಿದಂತಹ ಪಾಲಿಟೆಕ್ನಿಕ್ ಶಿಕ್ಷಣವನ್ನು ಕುರಿತಾದಂತಹ 392ನೇ ನಿರ್ಣಯವನ್ನು ಅಂಗೀಕರಿಸಿತು. ಹೊಸ ಸಮಾಜವನ್ನು ಕಟ್ಟುವುದೆಂದರೆ ಅದಕ್ಕೆ ಜೀವನದ ಕುರಿತಾದ ಒಂದು ಹೊಸ ಧೋರಣೆ ಇರಬೇಕು ಎಂದು ಆ ಗೊತ್ತುವಳಿಯು ಹೇಳಿತು; ಅದೆಂದರೆ "ಕೆಲಸದ ಪ್ರೀತಿ ಮತ್ತು ಕೆಲಸಗಾರನ ಕುರಿತು ಗೌರವ". ಆದರೆ ಈ ಹೊಸ ಧೋರಣೆಯು ತನ್ನಷ್ಟಕ್ಕೆ 'ಒಂದು ಸಂಕೀರ್ಣ ಪ್ರಕ್ರಿಯೆಯ ಫಲವಾಗಿ ಹೊರಹೊಮ್ಮುವುದಿಲ್ಲ'. ಕೆಲಸವು ಒಂದು ಅವಶ್ಯಕ ಅಂಗವಾಗಿರುವಂತಹ "ಸತತವಾದ ಹಾಗೂ ಸಹಜವಾದ ಬದುಕಿನ ಉಪಾಧಿಯನ್ನು" ಒದಗಿಸಲಾಗುವಂತೆ ಪಾಲಿಟೆಕ್ನಿಕ್ ಶಿಕ್ಷಣವನ್ನು ವಿನ್ಯಾಸಗೊಳಿಸಲಾಗಿತ್ತು. ಜೊತೆಗೆ ಅಂತಹ ಶಿಕ್ಷಣದ ಗುರಿಯು ಕೇವಲ ನೈತಿಕವಾಗಿದ್ದಲ್ಲ, ಬದಲಿಗೆ ಅದು ಜ್ಞಾನಶಾಸ್ತ್ರಕ್ಕೆ ಸಂಬಂಧಪಟ್ಟಿದ್ದು, ಏಕೆಂದರೆ "ಬದುಕಿನ ಅನುಭವವನ್ನು ಆಧರಿಸಿದ ಶಿಕ್ಷಣವು ಅತ್ಯಂತ ಪರಿಣಾಮಕಾರಿಯಾದದ್ದು"[65]. ಈ ನಿರ್ಣಯವು ಬರಲಿರುವ ವರ್ಷಗಳಲ್ಲಿ ಕಾಣಲಿರುವ ಶಿಕ್ಷಣದ ಮರು ನಿರ್ದೇಶನದ ಕುರುಹಾಗಿತ್ತು[66]. ಚೀನಾದಲ್ಲಿನ ಶೈಕ್ಷಣಿಕ ಮರುನಿರ್ದೇಶನವು ರಾಷ್ಟ್ರೀಯ

ರಾಜಕೀಯ ಮತ್ತು ಆರ್ಥಿಕ ಆಂದೋಲನಗಳಿಂದ ಮುನ್ನಡೆಸಲ್ಪಟ್ಟಂತೆ ಕ್ಯೂಬಾದಲ್ಲಿಯೂ ಸಹ ಅಂಥದೇ ಘಟನೆಗಳಿಂದ ಅವು ಮುನ್ನಡೆಸಲ್ಪಟ್ಟಿದ್ದವು. 1966 ರಿಂದ 1971 ರವರೆಗಿನ ಅವಧಿಯಲ್ಲಿ "ಕ್ರಾಂತಿಕಾರಿ ಆಂದೋಲನ"ವು ಹೆಚ್ಚು ವೇಗವನ್ನು ಪಡೆದುಕೊಂಡಾಗ ಮತ್ತು ಅದನ್ನು ಅಧಿಕೃತವಾಗಿ 1968ರಲ್ಲಿ ಘೋಷಿಸಿದಾಗ ಕ್ಯೂಬಾದ ಶೈಕ್ಷಣಿಕ ಬದಲಾವಣೆಯು ತನ್ನ ಅಲೆಯ ಉಬ್ಬರವನ್ನು ಕಂಡುಕೊಂಡಿತು. ಸಾಂಸ್ಕೃತಿಕ ಕ್ರಾಂತಿಯ ಸಂದರ್ಭದಲ್ಲಿ ಚೀನಾದಲ್ಲಿ ಆದಂತಹ ಘಟನೆಗಳನ್ನು ಹೋಲುವಂತಹ ಕ್ರಾಂತಿಕಾರಿ ಬದಲಾವಣೆಯ ಮೂಲಕ ಕ್ಯೂಬಾದ ಶಿಕ್ಷಣವು ಹಾದು ಹೋದದ್ದು ಈ ಸಂದರ್ಭದಲ್ಲಿಯೇ.

1965ರಲ್ಲಿ ಆರಂಭವಾಗಿ ಕ್ಯೂಬಾದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವು ಆಮೂಲಾಗ್ರವಾಗಿ ಬದಲಾವಣೆಯನ್ನು ಕಂಡಿತು. ಇದರಲ್ಲಿ ಮೊದಲನೆಯ ಮತ್ತು ಅತ್ಯಂತ ಪ್ರಭಾವಶಾಲಿಯಾದ ಯೋಜನೆಯನ್ನು, 'ಶಾಲೆಗಳು ಗ್ರಾಮೀಣ ಪ್ರದೇಶಕ್ಕೆ ಹೋಗುವುದು' ಎಂದು ಕರೆಯಲಾಯಿತು ಮತ್ತು ಅದನ್ನು 1965ರಲ್ಲಿ ಕ್ಯಾಮಗ್ವೇ (Camaguey) ಪ್ರಾಂತ್ಯದಲ್ಲಿ ಜಾರಿಗೆ ತರಲಾಯಿತು. ನಂತರ ಎಲ್ಲಾ ಪ್ರದೇಶಗಳಲ್ಲೂ ಅದನ್ನು ಅನುಷ್ಠಾನಗೊಳಿಸಲಾಯಿತು. ಈ ಯೋಜನೆಯನ್ನು ಅನುಸರಿಸಿ ಪ್ರೌಢ ಶಾಲೆಗಳಲ್ಲಿ ಮತ್ತು ಪದವಿ ಪೂರ್ವ ಸಂಸ್ಥೆಗಳಲ್ಲಿ ಇದ್ದಂತಹ ಎಲ್ಲ ವಿದ್ಯಾರ್ಥಿಗಳನ್ನು ಮತ್ತು ಶಿಕ್ಷಕರನ್ನು 35 ರಿಂದ 45 ದಿನಗಳ ಕಾಲ ಕೃಷಿ ಕ್ಷೇತ್ರಗಳಿಗೆ ನಿಯೋಜಿಸಿ ಅಲ್ಲಿ ಅವರು ಕ್ಷೇತ್ರಕಾರ್ಯವನ್ನು ಮತ್ತು ಅಧ್ಯಯನವನ್ನು ಒಟ್ಟಾಗಿ ನಡೆಸಬೇಕೆಂದು ಹೇಳಲಾಯಿತು. ಈ ಯೋಜನೆಯ ಶೈಕ್ಷಣಿಕ ಗುರಿಗಳನ್ನು *ಗ್ರ್ಯಾನ್ಮಾ ವೀಕ್ಲಿ ರಿವ್ಯೂ(Granma Weekly Review)* ಎಂಬ ಪತ್ರಿಕೆಯಲ್ಲಿ ಪ್ರಕಟವಾದ ವರದಿಯೊಂದರಲ್ಲಿ ಹೀಗೆಂದು ಸಂಗ್ರಹ ರೂಪದಲ್ಲಿ ಮಂಡಿಸಲಾಗಿತ್ತು:

1. ಹೊಸ ಉತ್ಪಾದನಾ ಕಾರ್ಯ ಯೋಜನೆಯ ಒಳಗಡೆಯೇ ಅಧ್ಯಯನದ ಮುಂದುವರಿಕೆಯನ್ನು ಸಾಧಿಸುವುದು ಮತ್ತು ತನ್ಮೂಲಕ ಉತ್ಪಾದನೆಯನ್ನು ಹಾಗೆಯೇ ಉಳಿಸಿಕೊಂಡು ಅದೇ ಸಮಯದಲ್ಲಿ ನಿಯತವಾದ ಶಾಲಾ ತೇರ್ಗಡೆಯು ಯಾವುದೇ ರೀತಿಯಲ್ಲಿ ಹಿಂದೆ ಬೀಳದಂತೆ ನೋಡಿಕೊಳ್ಳುವುದು; 2. ಪುಸ್ತಕಗಳಲ್ಲಿ, ಉಪನ್ಯಾಸಗಳಲ್ಲಿ ಮತ್ತು ಸೈದ್ಧಾಂತಿಕ ಕೃತಿಗಳಲ್ಲಿ ಅಭಿವ್ಯಕ್ತಿಯಾಗಿರುವಂತಹ ಬಲವಾದ ಸೈದ್ಧಾಂತಿಕ ಚೌಕಟ್ಟಿನಿಂದ ದೂರ ಸರಿಯುವುದು, "ಶಾಲೆಯನ್ನು ಬದುಕಿನೊಂದಿಗೆ ಜೋಡಿಸುವುದು"," ಸಿದ್ಧಾಂತ ಮತ್ತು ಅಭ್ಯಾಸವನ್ನು ಜೊತೆಗಿರಿಸುವುದು" ಮತ್ತು "ಉತ್ಪಾದನಾ ಕೆಲಸದೊಂದಿಗೆ ಶಿಕ್ಷಣ" ಮುಂತಾದ ಪರಿಕಲ್ಪನೆಗಳಿಗೆ ಅರ್ಥ ನೀಡುವುದು; 3. ಕೃಷಿ ಉತ್ಪಾದನಾ ಕ್ಷೇತ್ರದಲ್ಲಿಯೂ ಸಹ ಪಾಲಿಟೆಕ್ನಿಕ್ ಶಿಕ್ಷಣದ ಯೋಜನೆ(ಯೋಜಿಸುವಿಕೆ- planning)ಯನ್ನು ಅನ್ವಯಿಸುವುದು; 4. ಸಮಾಜವಾದಿ ನೈತಿಕ ಮಾನದಂಡಗಳಿಗೆ ಹೊಂದಿಕೊಳ್ಳುವಂತೆ ಮತ್ತು ದೀರ್ಘಾವಧಿಯಲ್ಲಿ ಕುಟುಂಬದೊಳಗಿನ ಶಿಕ್ಷಣಕ್ಕೆ ಕಾಣಿಕೆ ನೀಡುವಂತೆ ಶಾಲಾ ಮಕ್ಕಳ ಚಾರಿತ್ರ್ಯವನ್ನು ಬಲಪಡಿಸುವುದು; 5. ಗ್ರಾಮೀಣ ಪ್ರದೇಶ ಮತ್ತು ನಗರದ ಸಂಬಂಧವನ್ನು ಮತ್ತು ದೈಹಿಕ ಶ್ರಮ ಮತ್ತು ಬೌದ್ಧಿಕ ಶ್ರಮದ ನಡುವಿನ ಸಂಬಂಧವನ್ನು ಬಲಪಡಿಸುವುದು [67].

ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶದ ಸಮಸ್ಯೆಗಳನ್ನು ಪರಿಚಯ ಮಾಡಿಕೊಳ್ಳಬೇಕು ಎನ್ನುವುದು ಮತ್ತು ತಾವು ವೃತ್ತಿಯ ಆಯ್ಕೆಯಲ್ಲಿ ವೈಯಕ್ತಿಕ ಆದ್ಯತೆಗಳನ್ನು ತೀರ್ಮಾನ ಮಾಡುವಾಗ ತಮ್ಮ ಸಾಮಾಜಿಕ ಕರ್ತವ್ಯಗಳನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವಂತಾಗಬೇಕು ಎಂಬುದು ಸಹ ಯೋಜನೆಯ ಉದ್ದೇಶವಾಗಿತ್ತು.

ಕ್ರಾಂತಿಕಾರಿ ಆಂದೋಲನವು ಆಗಮಿಸಿದಾಗ ಏಳರಿಂದ ಹತ್ತನೆಯ ತರಗತಿಗಳನ್ನು ಆವರಿಸುವಂತೆ 'ಗ್ರಾಮೀಣ ಪ್ರದೇಶದಲ್ಲಿ ಸೆಕೆಂಡರಿ ಶಾಲೆ' ಎಂಬ ಹೊಸ ಯೋಜನೆಯನ್ನು, 'ಗ್ರಾಮೀಣ ಪ್ರದೇಶಕ್ಕೆ ಶಾಲೆಗಳು ಹೋಗುವುದು' ಎಂಬ ಯೋಜನೆಯ ಬದಲಿಗೆ ಜಾರಿಗೆ ತರಲಾಯಿತು. ಈ ಎರಡರ ಮಧ್ಯೆ ಇದ್ದ ವ್ಯತ್ಯಾಸವೇನೆಂದರೆ," ಇಲ್ಲಿನ ವಿದ್ಯಾರ್ಥಿಗಳು ಮುಖ್ಯವಾಗಿ ನಗರ ಪ್ರದೇಶದ ಜಿಲ್ಲೆಗಳಿಂದ ಬಂದಿದ್ದು ವಸತಿ ನಿಲಯಗಳಲ್ಲಿ ಇರುತ್ತಿದ್ದರು ಮತ್ತು ಅವರು ಇಡೀ ಶೈಕ್ಷಣಿಕ ವರ್ಷದ ಅವಧಿಯಲ್ಲಿ ಅಧ್ಯಯನ ಮತ್ತು ಕೆಲಸವನ್ನು ವ್ಯವಸ್ಥಿತವಾಗಿ ಜೊತೆಯಲ್ಲಿಯೇ ಮಾಡಿಕೊಂಡು ಹೋಗುತ್ತಿದ್ದರು ಮತ್ತು ಅವರ ಚಟುವಟಿಕೆಗಳು ಯಾವಾಗಲೂ ಸಹ ಒಂದು ಆರ್ಥಿಕ ಅಭಿವೃದ್ಧಿಯ ಯೋಜನೆಯ ಭಾಗವಾಗಿರುತ್ತಿತ್ತು." ವಿದ್ಯಾರ್ಥಿಗಳು ಪ್ರತಿದಿನವೂ ಸಹ ಮೂರು ಗಂಟೆಗಳ ಕಾಲ ಜಮೀನುಗಳಲ್ಲಿ ಕೆಲಸ ಮಾಡುತ್ತಿದ್ದರು (5 ಗಂಟೆಗಳಕಾಲ ಶೈಕ್ಷಣಿಕ ಕೆಲಸವಿತ್ತು) ಮತ್ತು ಅವರು ಅದರಿಂದ ತಮ್ಮನ್ನೇ ತಾವು ಆಹಾರದ ಉತ್ಪಾದನೆಯ ವಿಷಯದಲ್ಲಿ ಸ್ವಾವಲಂಬಿಗಳಾಗಿ ಪರಿವರ್ತಿಸಿಕೊಳ್ಳುತ್ತಿದ್ದರು ಮತ್ತು ಅವರಲ್ಲಿ ಕೆಲವರು ಹಗುರವಾದ ಕಾರ್ಖಾನೆ ಕೆಲಸದಲ್ಲೂ ಸಹ ತೊಡಗಿಕೊಳ್ಳುತ್ತಿದ್ದರು[68]. ಸದ್ಯದ ಭವಿಷ್ಯದಲ್ಲಿಯೇ ಅದು ಈಗಿರುವಂತೆ 45 ದಿನಗಳ ಕಾಲದ ಗ್ರಾಮೀಣ ಪ್ರದೇಶಕ್ಕೆ ಶಾಲೆ ಹೋಗುವುದು ಎಂಬ ಯೋಜನೆಯಾಗಿರದೆ ಗ್ರಾಮೀಣ ಪ್ರದೇಶದಲ್ಲಿಯೇ ಶಾಲೆ ಎಂಬ ಯೋಜನೆಯಾಗುತ್ತದೆ ಎಂದು ಕ್ಯಾಸ್ಟ್ರೋ ಘೋಷಿಸಿದರು[69] 1969ರಲ್ಲಿ ಈ ಯೋಜನೆಯಲ್ಲಿ 2,50,000 ಜನ ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದರು[70] ಈ ಶಾಲಾ ಪದ್ಧತಿಯ ಮುಖ್ಯ ತತ್ವಗಳು ಹೀಗಿದ್ದವು: ಸಮುದಾಯದ ಒಳಗೆ ಶಿಕ್ಷಣ, ಬೌದ್ಧಿಕ ಮತ್ತು ಭೌತಿಕ ಕೆಲಸಗಳ ಸಂಯೋಜನೆ, ಉತ್ಪಾದಕರಾಗುವಂತೆ ವಿದ್ಯಾರ್ಥಿಗಳಿಗೆ ತರಬೇತಿ ನೀಡುವುದು, ಶಿಕ್ಷಣವನ್ನು ಆರ್ಥಿಕ ಅಭಿವೃದ್ಧಿಯ ಯೋಜನೆಗಳೊಂದಿಗೆ ಜೋಡಿಸುವುದು, ನಗರದ ತರುಣರನ್ನು ರೈತರೊಂದಿಗೆ ಏಕೀಕರಿಸುವುದು, ಸ್ವಂತ ನೆರವಿನ ಮೂಲಕ ಮತ್ತು ಸಾಮಾಜಿಕವಾಗಿ ಉಪಯುಕ್ತವಾದ ಕೆಲಸದ ಮೂಲಕ ಶಿಕ್ಷಣ, ಸಾರ್ವಜನಿಕ ಆಸ್ತಿಯ ಬಗ್ಗೆ ಕಾಳಜಿ ಮತ್ತು ಅದನ್ನು ಉಳಿಸಿಕೊಂಡು ಹೋಗುವುದರ ಬಗ್ಗೆ ಎಳೆಯರಿಗೆ ಶಿಕ್ಷಣ ನೀಡುವುದು ಮತ್ತು ವೃತ್ತಿಪರ ತರಬೇತಿ ಮತ್ತು ಮಾರ್ಗದರ್ಶನದ ಮೂಲಕ ವಿದ್ಯಾಭ್ಯಾಸ [71].

.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಮತ್ತೊಂದು ಸೃಜನಶೀಲ ಮುಂದೊಡಗು(innovation) ಎಂದರೆ ಹೊಸತಾಗಿ ಸ್ಥಾಪಿತವಾಗಿದ್ದ ಸಮುದಾಯಗಳೊಂದಿಗೆ ಶಾಲೆಗಳನ್ನು ಏಕೀಕರಿಸುವುದು. ೧೯೬೦ರ ದಶಕದ ಉತ್ತರಾರ್ಧದಲ್ಲಿ ಹೊಸ ತಲೆಮಾರಿಗೆ ಒಂದು ಸಂಪೂರ್ಣವಾಗಿ ಹೊಸದಾದ ಸಾಮಾಜಿಕ ಪರಿಸರವನ್ನು ಸೃಷ್ಟಿಸಲಿಕ್ಕೆಂದು, ಕ್ಯೂಬಾದ ಸರ್ಕಾರವು ಗ್ರಾಮೀಣ ಪ್ರದೇಶಗಳಲ್ಲಿ ವಸತಿಗಾಗಿ ಮನೆಗಳನ್ನು ಕಟ್ಟಿಕೊಡುವುದರೊಂದಿಗೆ ಹೊಸ ಹೊಸ ಸಮುದಾಯಗಳನ್ನು ಸ್ಥಾಪಿಸಿತು. ಅಲ್ಲಿ ಕಾರ್ಖಾನೆಗಳು, ಕೃಷಿ ಕ್ಷೇತ್ರಗಳು, ಆಸ್ಪತ್ರೆಗಳು, ಶಿಶುವಿಹಾರಗಳು, ಶಾಲೆಗಳು, ದಿನಸಿ ಅಂಗಡಿಗಳು ಮತ್ತು ಧೋಬಿ ಸೇವೆ ಲಭ್ಯವಿದ್ದವು. ತಾಯಂದಿರ ಮಾತೃತ್ವ ರಜೆ ಮುಗಿಯುವ ಹೊತ್ತಿಗೆ ಎಂದರೆ ಬಹಳ ಬೇಗನೆ ಮಕ್ಕಳನ್ನು ಹಗಲು ಹೊತ್ತಿನಲ್ಲಿ ಶಿಶುವಿಹಾರಗಳಿಗೆ ಸೇರಿಸಲಾಗುತ್ತಿತ್ತು. ಎಲ್ಲ ಶಾಲೆಗಳು ಕೂಡ ವಸತಿ ಶಾಲೆಗಳಾಗಿದ್ದವು ಮತ್ತು ವಿದ್ಯಾರ್ಥಿಗಳು ವಾರದ ಐದು ದಿನಗಳನ್ನು ಶಾಲೆಯಲ್ಲಿ ಕಳೆಯುತ್ತಿದ್ದರು. ಮತ್ತು ಸಮುದಾಯದ ಅಗತ್ಯಕ್ಕೆ ತಕ್ಕಂತಹ ಕೆಲಸದಲ್ಲಿ ಭಾಗವಹಿಸುವುದನ್ನು ಅಧ್ಯಯನದ ಜೊತೆಯಲ್ಲಿಯೇ ಮಾಡುತ್ತಿದ್ದರು. 1967ರಲ್ಲಿ ಅಂತಹ ಸಮುದಾಯಗಳಿಗಾಗಿ ಮೂರು ಚಾಲಕ ಪೈಲೆಟ್ ಯೋಜನೆಗಳನ್ನು ಆರಂಭಿಸಲಾಯಿತು. ಸ್ಯಾನ್ ಆಂಡ್ರೆ ಡೇ ಕೈಗುನಬೆ(San Andres De Caiguanabe) ಯಲ್ಲಿ ಉದ್ಘಾಟನೆಯನ್ನು ಮಾಡುತ್ತಾ ಕ್ಯಾಸ್ಟ್ರೋ ಅವರು, ಸ್ಯಾನ್ ಆಂಡ್ರೆಯು ಮುಂದಿರುವ ಭವಿಷ್ಯದತ್ತ ಇಟ್ಟಿರುವ ಒಂದು ಹೆಜ್ಜೆ ಎಂದು ಘೋಷಿಸಿದರು. 1975ರ ವೇಳೆಗೆ ಅಂತಹ ಶಾಲೆಗಳನ್ನು ದೇಶದಾದ್ಯಂತ ಸ್ಥಾಪಿಸಲಾಗುವುದು ಎಂದೂ ಸಹ ಅವರು ನುಡಿದರು[72].

ಕ್ಯೂಬಾದ ಉನ್ನತ ಶಿಕ್ಷಣವೂ ಸಹ ಮೂಲಭೂತ ಬದಲಾವಣೆಯನ್ನು ಕಂಡಿತು. ಕ್ರಾಂತಿಯ ನಂತರ ಕ್ಯೂಬಾದ ಉನ್ನತ ಶಿಕ್ಷಣದ ಸೌಲಭ್ಯಗಳು ದೇಶದ ಆರ್ಥಿಕ ಪರಿಸ್ಥಿತಿಗೆ ಹೋಲಿಸಿದರೆ ತೂಕ ತಪ್ಪುವಷ್ಟು ಪ್ರಮಾಣದಲ್ಲಿ ಹೆಚ್ಚಿದೆ ಎಂದು ಭಾವಿಸಲಾಯಿತು. ತತ್ಪರಿಣಾಮವಾಗಿ ವಿಶ್ವವಿದ್ಯಾಲಯಗಳ ಸಂಖ್ಯೆಯನ್ನು ಏಳರಿಂದ ಮೂರಕ್ಕೆ ಇಳಿಸಲಾಯಿತು. (ಅವುಗಳೆಂದರೆ ಪಶ್ಚಿಮದಲ್ಲಿ ಹವಾನ ವಿಶ್ವವಿದ್ಯಾಲಯ, ಕೇಂದ್ರ ಭಾಗದಲ್ಲಿ ಲಾ ವಿಲ್ಲ (Las Villas) ವಿಶ್ವವಿದ್ಯಾಲಯ ಮತ್ತು ಪೂರ್ವದಲ್ಲಿ ಒರಿಯೆಂಟೆ(Oriente) ವಿಶ್ವವಿದ್ಯಾಲಯ[73]). ಉಳಿದಿರುವಂತಹದರಲ್ಲಿ ಪಠ್ಯಕ್ರಮ ಮತ್ತು ನೋಂದಣಿಯನ್ನು ಹೆಚ್ಚು ಹೆಚ್ಚು ಕಾರ್ಯಸಾಧುವಾದ ಗುರಿಗಳತ್ತ ಮರು ನಿರ್ದೇಶನ ಮಾಡಲಾಯಿತು. 1959 ರಿಂದ 67ರವರೆಗೆ ಇಡಿಯ ವಿದ್ಯಾರ್ಥಿ ಸಮುದಾಯದಲ್ಲಿ ಸಮಾಜ ವಿಜ್ಞಾನದ ವಿದ್ಯಾರ್ಥಿಗಳ ಸಂಖ್ಯೆಯು ಶೇಕಡ 25.3 ರಿಂದ ಶೇಕಡ 7.1ಕ್ಕೆ ಇಳಿಯಿತು ಮತ್ತು ಮಾನವಿಕ ಶಾಸ್ತ್ರಗಳಲ್ಲಿ ಶೇಕಡಾ 4.3 ರಿಂದ ಶೇಕಡ 2.1ಕ್ಕೆ ಇಳಿಯಿತು. ಮತ್ತು ಅದೇ ಸಮಯದಲ್ಲಿ ಶಿಕ್ಷಣದಲ್ಲಿ ನೋಂದಣಿಯು ಶೇಕಡ 19

ರಿಂದ ಶೇಕಡ 26 ಕ್ಕೆ ಹೆಚ್ಚಿತು. ಅದೇ ರೀತಿಯಲ್ಲಿ ಇಂಜಿನಿಯರಿಂಗ್ ಮತ್ತು ವಾಸ್ತುಶಿಲ್ಪದಲ್ಲಿ ಶೇಕಡ13 ರಿಂದ ಶೇಕಡ 23.5 ಮತ್ತು ಕೃಷಿ ವಿಜ್ಞಾನಗಳಲ್ಲಿ ಶೇಕಡಾ 4.7 ರಿಂದ ಶೇಕಡ 10ಕ್ಕೆ ಏರಿತು. ಕಣ್ಣಿಗೆ ರಾಚುವಂತಹ ಕುಸಿತವಾದದ್ದು ಕಾನೂನು ವಿಭಾಗದಲ್ಲಿ. ಕಾನೂನು ವಿದ್ಯಾರ್ಥಿಗಳ ಶೇಕಡವಾರು ಸಂಖ್ಯೆಯು 11.2 ರಿಂದ 0.8ಕ್ಕೆ ಇಳಿಯಿತು. ಎಂದರೆ 1959ರಲ್ಲಿ 6000 ಜನ ಕಾನೂನು ವಿದ್ಯಾರ್ಥಿಗಳಿದ್ದರೆ, 1967 ರಲ್ಲಿ ಕೇವಲ 200 ಜನ ಉಳಿದಿದ್ದರು[74].

ಉನ್ನತ ಶಿಕ್ಷಣದಲ್ಲಿಯೂ ಸಹ ಅಧ್ಯಯನ ಮತ್ತು ಕೆಲಸವನ್ನು ಒಂದು ಮಾಡುವುದು ಒಂದು ಮೂಲಭೂತ ಗುರಿ ಎಂದು ಹೇಳಲಾಯಿತು. ಇದರ ಒಂದು ಮುಖ್ಯವಾದ ಸ್ವರೂಪವೆಂದರೆ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರನ್ನು ಮತ್ತು ರೈತರನ್ನು ನೋಂದಾಯಿಸಿಕೊಂಡಿದ್ದು. ಇದನ್ನು ಅನೇಕ ವರ್ಷಗಳ ಕಾಲ ಕಾರ್ಮಿಕ- ರೈತ ವಿಭಾಗದಲ್ಲಿ ಸಿದ್ಧತೆ ನಡೆಸಿದ ನಂತರ ಮಾಡಲಾಯಿತು. ಈ ನೀತಿಯು ವಿದ್ಯಾರ್ಥಿ ಸಮುದಾಯದ ಸ್ವರೂಪವನ್ನು ಬದಲಾಯಿಸಿದ್ದಲ್ಲದೆ, ಪಠ್ಯಕ್ರಮದಲ್ಲಿಯೂ ಸಹ ಮೂಲಭೂತ ಬದಲಾವಣೆಗಳನ್ನು ತಂದಿತು. ಕ್ಯೂಬಾದ ಕ್ರಾಂತಿಯ ಅಭಿಮಾನಿಯಾಗಿದ್ದ ಅಮೆರಿಕಾದ ಹರ್ಬರ್ಟ್ ಮ್ಯಾಥ್ಯೂಸ್ ಎಂಬುವರು 1972ರಲ್ಲಿ ಮತ್ತೊಮ್ಮೆ ಕ್ಯೂಬಾಗೆ ಭೇಟಿ ನೀಡಿ ಅಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಹತ್ತಿರದಿಂದ ಗಮನಿಸಿದರು. ಅವರ ಪ್ರಕಾರ, "ಕಾರ್ಮಿಕನೊಬ್ಬನನ್ನು ವಿಶ್ವವಿದ್ಯಾಲಯಕ್ಕೆ ಕರೆದುಕೊಂಡು ಬರುವುದು, ಅವನು ಕೆಲಸವನ್ನು ಬಿಟ್ಟು ಪುಸ್ತಕಗಳನ್ನು ಓದಲಿ ಎಂದು ಅಲ್ಲ, ಬದಲಿಗೆ ಕೆಲಸ ಮಾಡುತ್ತಲೇ ಆತ ವಿದ್ಯಾಭ್ಯಾಸವನ್ನು ಮುಂದುವರಿಸಲಿ, ವಿಶ್ವವಿದ್ಯಾಲಯಕ್ಕೆ ತನ್ನ ಕೆಲಸದಿಂದ ಬಂದ ಜ್ಞಾನವನ್ನು ಕಾಣಿಕೆಯಾಗಿ ನೀಡಲಿ, ಆತ ಬೋಧಿಸಲಿ ಮತ್ತು ಕಲಿಯಲಿ ಹಾಗೂ ಕಾರ್ಖಾನೆಯಲ್ಲಿ ಅವನು ಅಲ್ಲಿಗೆ ಕೆಲಸ ಮಾಡಲು ಬರುವ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಕಲಿಸಲಿ ಎಂದು"[75]. ಇಂತಹ ವಿವರಣೆಯು ಚೀನಾದಲ್ಲಿಯೂ ಸರ್ಕಾರವು ನಡೆಸುತ್ತಿದ್ದ ವಿಶ್ವವಿದ್ಯಾಲಯಗಳಲ್ಲಿದ್ದ ಚೀನಾದ ಕಾರ್ಮಿಕ -ರೈತ –ಸೈನಿಕರಿಗೆ ಗುರುತಿಸಲು ಸಹ ಅದೇ ಮಟ್ಟಿಗೆ ಅನ್ವಯವಾಗುತ್ತಿತ್ತು, ಮತ್ತು ಚೀನಾದಲ್ಲಿ ಕಾರ್ಖಾನೆಗಳು ನಡೆಸುತ್ತಿದ್ದ ಕಾಲೇಜುಗಳಲ್ಲಿದ್ದ ಕಾರ್ಮಿಕ ವಿದ್ಯಾರ್ಥಿಗಳಿಗೂ ಅನ್ವಯಿಸಬಹುದಾಗಿತ್ತು. ಚೀನಾದಲ್ಲಿ ಇದ್ದ ವಿದ್ಯಾರ್ಥಿಗಳಂತೆ ಕ್ಯೂಬಾದಲ್ಲಿ ವಿದ್ಯಾರ್ಥಿಗಳಾಗಲಿದ್ದವರು ಸಹ ತಾವಿದ್ದ ಸಮೂಹ ಸಂಘಟನೆಯಿಂದ, ವಿಶೇಷವಾಗಿ 'ಕ್ರಾಂತಿಯ ರಕ್ಷಣೆಗಾಗಿ ಸಮಿತಿ( Committee for the Defense of the Revolution) ಎಂಬುದರಿಂದ ತಮ್ಮ ಕ್ರಾಂತಿಕಾರಿ ಧೋರಣೆಯನ್ನು ಸಾಬೀತು ಮಾಡಲು ವರದಿಯೊಂದನ್ನು ತರಬೇಕಾಗಿತ್ತು [76].

ಇನ್ನೊಂದು ಮುಖ್ಯವಾದ ಕ್ರಮವೆಂದರೆ, ವಿಶ್ವವಿದ್ಯಾಲಯಗಳು ಸಂಶೋಧನೆ ಮತ್ತು ಪ್ರಾಯೋಗಿಕ ಉತ್ಪಾದನಾ ಅವಶ್ಯಕತೆಗಳೊಂದಿಗೆ ಸಂಬಂಧಿತವಾದ ಬೋಧನೆ ಇವುಗಳೊಡನೆ ನೇರವಾಗಿ ಸಂಬಂಧ ಹೊಂದಿದ್ದ ಕಾರ್ಖಾನೆ ಅಥವಾ ಗಣಿಗಳಲ್ಲಿ ಕೆಲಸದ ಕೇಂದ್ರಗಳನ್ನು ಸ್ಥಾಪಿಸಿದವು. ಉದಾಹರಣೆಗೆ ಎಲ್ಲ ಮೂರು ಮುಖ್ಯ ವಿಶ್ವವಿದ್ಯಾಲಯಗಳು ಸಹ ಮೋವಾ ಕೊಲ್ಲಿ ಮತ್ತು ನಿಕಾರೊ ನಿಕ್ಕಲ್ ಕಾರ್ಖಾನೆಗಳಲ್ಲಿ ಕೆಲಸದ ಕೇಂದ್ರಗಳನ್ನು ಸ್ಥಾಪಿಸಿದವು. ಇದಲ್ಲದೆ ಬೋಧನೆ ಮತ್ತು ಅಧ್ಯಯನವನ್ನು ಅಭ್ಯಾಸದೊಂದಿಗೆ ಜೋಡಿಸಿದ್ದ ಹಲವು ಶೈಕ್ಷಣಿಕ ಆಸ್ಪತ್ರೆಗಳು ಇದ್ದವು[77]. 1970ರ ದಶಕದ ಆರಂಭ ಭಾಗದಲ್ಲಿ ಹವಾನ ವಿಶ್ವವಿದ್ಯಾಲಯದ ರೆಕ್ಟರ್ ಆಗಿದ್ದ ಹೋಸೆ ಎಂ ಮಿಲ್ಲರ್ (Jose M Millar) ಅವರ ಪ್ರಕಾರ "1959 ಕ್ಕೆ ಮುಂಚೆ ವಿಶ್ವವಿದ್ಯಾಲಯ ಎಂಬುದು ಸಮಾಜದಿಂದ ದೂರೀಕರಿಸಲ್ಪಟ್ಟಿತ್ತು, ಆದರೆ ಅದು ಈಗ ಕ್ರಾಂತಿಕಾರಿ ಆರ್ಥಿಕತೆ ಮತ್ತು ಸಾಮಾಜಿಕ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿತ್ತು". ವಿಶ್ವವಿದ್ಯಾಲಯವು "ಒಂದು ವಿಸ್ತಾರವಾದ ಶಾಲೆ, ಕಾರ್ಖಾನೆಗಳು, ಕೃಷಿ ಕ್ಷೇತ್ರಗಳು, ಗಣಿಗಳು, ಆಸ್ಪತ್ರೆಗಳು ಮುಂತಾದವುಗಳ ಸಂಕೀರ್ಣವಾಗಿದ್ದು, ಅಲ್ಲಿ ವಿದ್ಯಾರ್ಥಿಗಳೇ ಕಾರ್ಮಿಕರು ಮತ್ತು ಕಾರ್ಮಿಕರೇ ವಿದ್ಯಾರ್ಥಿಗಳು. ಈ ಪರಿಕಲ್ಪನೆಯೇ ಒಂದು ಶೈಕ್ಷಣಿಕ ಕ್ರಾಂತಿ. ಈ ಕ್ರಾಂತಿಯ ತಿರುಳೇನೆಂದರೆ "ಅಧ್ಯಯನ ಮತ್ತು ಅಭ್ಯಾಸಗಳನ್ನು ಏಕೀಕರಿಸುವ ಮೂಲಕ ಶಿಕ್ಷಣವನ್ನು ಸಂಪೂರ್ಣವಾಗಿ ಸಮಾಜೀಕರಣಗೊಳಿಸಲಾಗುತ್ತದೆ" [78] ಎಂಬುದು.

ಚೀನಾದ ಶೈಕ್ಷಣಿಕ ಕ್ರಾಂತಿಯು ಬಹುತೇಕ ಮಟ್ಟಿಗೆ ಮಾವೋರವರ ಮೆದುಳಿನ ಕೂಸಾಗಿದ್ದಂತೆಯೇ, ಕ್ಯೂಬಾದ ಶೈಕ್ಷಣಿಕ ಕ್ರಾಂತಿಯು ಸಹ ಫಿಡೆಲ್ ಕ್ಯಾಸ್ಟ್ರೋ ಅವರ ಸೃಷ್ಟಿಯಾಗಿತ್ತು. ಮಾವೋ ಅವರಂತೆ ಕ್ಯಾಸ್ಟ್ರೋರವರು ಸಹ ತಮ್ಮನ್ನು ತಾವು ಒಬ್ಬ ಶಿಕ್ಷಕ ಎಂದು ಪರಿಗಣಿಸಿಕೊಂಡಿದ್ದರು. "ನನಗೆ ಶಿಕ್ಷಣದ ಕುರಿತು ಅಪಾರವಾದ ವ್ಯಸನವಿದೆ" ಎಂದು ಅವರೊಮ್ಮೆ ಹೇಳಿದ್ದರು [79]. ಮಾರ್ಕ್ಸ್ ವಾದಿ ಸೈದ್ಧಾಂತಿಕತೆ(Marxist ideology)ಯ ಬಗ್ಗೆ ಅವರಿಬ್ಬರಿಗೂ ಇದ್ದ ಶ್ರದ್ಧೆಯಲ್ಲದೆ, ಈ ಇಬ್ಬರು ನಾಯಕರ ನಡುವಿನ ಹೋಲಿಕೆಗಳು ಗಮನಾರ್ಹವಾಗಿವೆ. ಇಬ್ಬರಿಗೂ ಸಹ ವೈಯುಕ್ತಿಕ ಅನುಭವದಿಂದಾಗಿಯೇ ಹಳೆಯ ಶಿಕ್ಷಣ ಪದ್ಧತಿಯ ಬಗ್ಗೆ ಬಹಳ ಬೇಸರದ ನೆನಪುಗಳಿದ್ದವು ಮತ್ತು ಋಣಾತ್ಮಕವಾದ ಅಭಿಪ್ರಾಯಗಳಿದ್ದವು[80]. ಮಾವೋರವರು ಅಧಿಕಾರಕ್ಕೆ ಬರುವುದಕ್ಕೆ ಬಹಳ ಮುಂಚೆಯೇ, ಮಕ್ಕಳನ್ನು ನೇರವಾಗಿ ಸರ್ಕಾರದ ಕಣ್ಣೋಟದಲ್ಲಿಡಬೇಕು ಮತ್ತು ಅವರು ತಮ್ಮ ಜೀವನಾವಶ್ಯಕತೆಗಾಗಿ ಕೆಲಸ ಮಾಡಬೇಕು ಎಂದು ಭಾವಿಸಿದ್ದಂತೆ, ಕ್ಯಾಸ್ಟ್ರೋರವರು ಸಹ ಕ್ರಾಂತಿಗೆ ಮುಂಚೆ, ತಾವು 1958ರಲ್ಲಿ ಇನ್ನೂ ಕೂಡ ಸಿಯೆರಾ ಮೇಯ್ ಸ್ತ್ರ (Sierra Maestra)

ಪರ್ವತಶ್ರೇಣಿಯಲ್ಲಿದ್ದಾಗಲೇ ಇದೇ ಅಭಿಪ್ರಾಯಗಳನ್ನು ಹೊಂದಿದ್ದರು. ಅವರು ಹೇಳಿದ್ದೇನೆಂದರೆ: "ನಾನು ಪ್ರತಿಯೊಂದು 25,000 ಜನರಿರುವ ವಸತಿ ಪ್ರದೇಶಕ್ಕೆ ಒಂದು ಕೃಷಿ ಘಟಕವನ್ನು ಸ್ಥಾಪಿಸುತ್ತೇನೆ.... ಈ ಘಟಕಗಳಲ್ಲಿ ಮಕ್ಕಳಿಗಾಗಿ ಒಂದು ತರಬೇತಿ ಕೇಂದ್ರವಿರುತ್ತದೆ...ಮಕ್ಕಳಿಗೆ ಸೂರನ್ನು, ಆಹಾರವನ್ನು, ವಸ್ತ್ರಗಳನ್ನು ಮತ್ತು ಶಿಕ್ಷಣವನ್ನು ಒದಗಿಸಬೇಕು ,ಅವರ ಕೆಲಸದ ಮೂಲಕವೇ ಈ ಕೇಂದ್ರಗಳು ಸ್ವಾವಲಂಬಿಯಾಗುವಂತೆ ಅವರು ಮಾಡುತ್ತಾರೆ; ಎಷ್ಟರಮಟ್ಟಿಗೆ ಎಂದರೆ ದೇಶದ ಪ್ರಭುತ್ವಕ್ಕೆ ಸೇರಿದ ಕಾರ್ಖಾನೆ ಮತ್ತು ಯಂತ್ರ ಗಳಿಗೆ ಕಂತುಗಳ ಮೂಲಕ ಹಣವನ್ನು ಕಟ್ಟುತ್ತಾ ಅವುಗಳನ್ನು ತಮ್ಮದಾಗಿ ಮಾಡಿಕೊಳ್ಳುತ್ತಾರೆ"[81]. ಪ್ರೊಫೆಸರ್ ಗಳಿಗೆ ನಿಜವಾದ ಜ್ಞಾನವಿದೆಯೇ ಎಂಬುದನ್ನು ಮಾವೋ ಸಂಶಯಿಸುತ್ತಿದ್ದರು ಮತ್ತು ಕ್ಯಾಸ್ಟ್ರೋ ಸಹ ಹಾಗೆಯೇ ಇದ್ದರು. ಅವರು ಹವಾನದಲ್ಲಿದ್ದ ಕೃಷಿ ವಿಜ್ಞಾನದ ಶಾಲೆಯ ವಿಶ್ವವಿದ್ಯಾಲಯದಲ್ಲಿನ ಪ್ರೊಫೆಸರ್ ಒಬ್ಬರ ಬಗ್ಗೆ ತಮಗೆ ಬಹಳ ಇಷ್ಟವಾಗುತ್ತಿದ್ದ ಒಂದು ವಿಡಂಬನೆಯ ಕಥೆಯನ್ನು ಹೇಳುತ್ತಿದ್ದರು; ಅದೆಂದರೆ ಗ್ವಾನಹಕಾಬೈಬೀಸ್ ಎಂಬ ಕೊಲ್ಲಿಯಲ್ಲಿದ್ದ ಬಂಡೆಗಲ್ಲಿನ ಭೂಮಿಯಲ್ಲಿ ಆತ ಸುಮಾರು 67 ಹೆಕ್ಟೇರ್ ಗಳಷ್ಟು ವಿಸ್ತಾರವಾದ ಜಾಗದಲ್ಲಿ ಸಿಟ್ರಸ್ ಜಾತಿಯ ಮರಗಳನ್ನು ಹಾಕಲು ಹೊರಟಿದ್ದನಂತೆ[82]. ಅಂತಹ ಪ್ರೊಫೆಸರ್ ಗಳನ್ನು ಸೂಚಿಸಲು ಅವರು "ರಸ್ತೆ ಬದಿಯ ಕೃಷಿ ವಿಜ್ಞಾನಿಗಳು" ಎಂಬ ಪದವನ್ನು ಟಂಕಿಸಿದ್ದರು. ಅದರ ಅರ್ಥ ಆ ಪ್ರೊಫೆಸರ್ ಗಳು ನಗರಗಳಲ್ಲಿದ್ದು ಯಾವ ಬೆಳೆಯನ್ನೂ ಬೆಳೆಯದಿದ್ದವರು ಎಂದು. ಮಾವೋರವರು ನೈತಿಕ ಮತ್ತು ಪ್ರಾಯೋಗಿಕ ಎರಡು ಕಾರಣಗಳಿಂದಾಗಿಯೂ ಸಹ ವಿದ್ಯಾರ್ಥಿಗಳು ಕೃಷಿ ಕೆಲಸದ ಬಗ್ಗೆ ಅಜ್ಞಾನಿಗಳಾಗಿರುವುದು ಹಾಗೂ ಹಳ್ಳಿಗಾಡಿನ ಪರಿಸ್ಥಿತಿಗಳ ಬಗ್ಗೆ ತಿಳಿದುಕೊಳ್ಳದೆ ಇರುವುದರ ಬಗ್ಗೆ ಆತಂಕವನ್ನು ಹೊಂದಿದ್ದರು. ಮತ್ತು ಕ್ಯಾಸ್ಟ್ರೋ ಅವರು ಮಕ್ಕಳಿಗೆ "ಆರೇ ವರ್ಷ ವಯಸ್ಸಾಗಿರಲಿ, ಮೊದಲನೇ ತರಗತಿಯಲ್ಲಿರಲಿ ಅವರಿಗೆ ಲೆಟ್ಯೂಸ್ ಸೊಪ್ಪುಗಳನ್ನು ಬೆಳೆಸುವುದು ಹೇಗೆ, ಲೆಟ್ಯೂಸ್‌ನ ಬಿತ್ತನೆ ಬೀಜಗಳನ್ನು ಸಂಗ್ರಹಿಸುವುದು ಹೇಗೆ ಎಂಬುದು ಗೊತ್ತಿರಬೇಕು" ಎಂದು ಆಗ್ರಹಿಸುತ್ತಿದ್ದರು[83]. ಮಾವೋರವರಿಗೆ ಮಾನವಿಕ ವಿಷಯಗಳು ಮತ್ತು ಸಮಾಜ ವಿಜ್ಞಾನಗಳ ಕುರಿತು ಇಷ್ಟವಿರಲಿಲ್ಲ ಮತ್ತು ಅದಕ್ಕೆ ಸಂಬಂಧಿಸಿದಂತೆ ಉನ್ನತ ಶಿಕ್ಷಣದಲ್ಲಿ ಪಠ್ಯಕ್ರಮ ಮತ್ತು ನೋಂದಣಿಯನ್ನು ಗಮನಾರ್ಹವಾಗಿ ಅವರು ಕಡಿಮೆ ಮಾಡಿದರು. ಕ್ಯಾಸ್ಟ್ರೋ ಸಹ ಹೀಗೆಯೇ ಮಾಡಿದರು. ಕ್ಯಾಸ್ಟ್ರೋರವರಿಗೆ ವಿಶ್ವವಿದ್ಯಾಲಯಗಳ ಜಾಗದಲ್ಲಿ ತಾಂತ್ರಿಕ ಸಂಸ್ಥೆಗಳು ಬರಬೇಕು ಮತ್ತು ಕ್ಯೂಬಾದ ಪ್ರಜೆಗಳ ಭವಿಷ್ಯವು ಹೇಗಿರಬೇಕೆಂದರೆ ಅವರು "ಒಬ್ಬ ಇಂಜಿನಿಯರ್, ಕೃಷಿ ವಿಜ್ಞಾನಿ, ಭೂಮಿ ಶಾಸ್ತ್ರ, ತಂತ್ರಜ್ಞ ಹಾಗೂ ಜಾನುವಾರು ಸಾಕಣೆಯ ತಜ್ಞನಾಗಿರಬೇಕು ಎಂದಿತ್ತು"[84]. ಅಂತಿಮವಾಗಿ ಇಬ್ಬರೂ ಸಹ ಶಾಲೆ ಮತ್ತು ಸಮಾಜದ

ನಡುವೆ ಯಾವುದೇ ರೀತಿಯ ಗಮನಾರ್ಹವಾದ ಮತ್ತು ಸಾಂಸ್ಥಿಕವಾದ ತಡೆಗೋಡೆಗಳು ಇಲ್ಲದೆ ಇರುವಂತಹ ಭವಿಷ್ಯತ್ತನ್ನು ಕಲ್ಪಿಸಿಕೊಂಡಿದ್ದರು. ಕ್ಯಾಸ್ಟ್ರೋ ಹೇಳುತ್ತಿದ್ದರು " ಭವಿಷ್ಯದಲ್ಲಿ ಪ್ರತಿಯೊಂದು ಕಾರ್ಖಾನೆ, ಕೃಷಿ ವಲಯ ಆಸ್ಪತ್ರೆ ಮತ್ತು ಶಾಲೆಯೂ ಸಹ ವಾಸ್ತವದಲ್ಲಿ ಒಂದು ವಿಶ್ವವಿದ್ಯಾಲಯವಾಗುತ್ತವೆ ಮತ್ತು ಒಂದು ದಿನ ನಾವೆಲ್ಲರೂ ಸಹ ಬೌದ್ಧಿಕ "ಕೆಲಸಗಾರ"ರಾಗುತ್ತೇವೆ"[85].

ಆದರೆ ಮಾವೋರವರಿಗಿಂತ ಕ್ಯಾಸ್ಟ್ರೋ ಎಲ್ಲಿ ಭಿನ್ನರಾಗುತ್ತಾರೆ ಎಂದರೆ ಅವರು ಕೇವಲ ಶೈಕ್ಷಣಿಕ ಕ್ರಾಂತಿಯ ಸೈದ್ಧಾಂತಿಕ ಮತ್ತು ಬೋಧನಾತ್ಮಕ ಉದ್ದೇಶಕ್ಕೆ ಮಾತ್ರ ಒತ್ತು ಕೊಡದೆ ಬದಲಿಗೆ ಶಿಕ್ಷಣದ ಪ್ರಾಯೋಗಿಕ/ಪ್ರಯೋಜನಾತ್ಮಕ ಗುರಿಯನ್ನು ಮತ್ತು ಅವಶ್ಯಕತೆಯನ್ನು ಕೂಡ ಸ್ಪಷ್ಟವಾಗಿ ವಿವರಿಸಿದ್ದರು. ಈ ಅರ್ಥದಲ್ಲಿ ಅವರು ಚೀನಾದಲ್ಲಿ ಮಾವೋ ಮತ್ತು ಲಿಯು ಶಾವೋಕಿ ಅವರುಗಳು ವಹಿಸಿದ್ದ ಪಾತ್ರಗಳನ್ನು ಒಟ್ಟಿಗೆ ಸೇರಿಸಿದ್ದರು. ಕ್ಯಾಸ್ಟ್ರೋ ಅವರು ಅನೇಕ ಸಂದರ್ಭಗಳಲ್ಲಿ ಕ್ಯೂಬಾದ ಜನತೆಗೆ ಹೇಳುತ್ತಿದ್ದುದು "ಒಂದು ಅಭಿವೃದ್ಧಿಯಾಗದಿರುವ ದೇಶವಾಗಿರತಕ್ಕಂತಹ ಕ್ಯೂಬಾ, ಎಲ್ಲ ಮಕ್ಕಳಿಗೂ ಕೂಡ ಉಚಿತವಾದ ಮತ್ತು ಪೂರ್ಣಾವಧಿ ಶಿಕ್ಷಣವನ್ನು ಕೊಡುವುದು ಸಾಧ್ಯವಿಲ್ಲ" ಎಂದು. ವಿದ್ಯಾರ್ಥಿಗಳು ಅಥವಾ ಅವರಲ್ಲಿನ ಬಹು ದೊಡ್ಡ ಭಾಗವು ತಮ್ಮ ಅಧ್ಯಯನವನ್ನು ಭೌತಿಕ ಶ್ರಮದೊಂದಿಗೆ ಸೇರಿಸುವುದರ ಮೂಲಕವೇ ಶಿಕ್ಷಣಕ್ಕಾಗಿನ ತಮ್ಮ ಹಕ್ಕನ್ನು ಗಳಿಸಿಕೊಳ್ಳಬೇಕು ಎನ್ನುತ್ತಿದ್ದರು. 1972ರಲ್ಲಿ ಮೂಲಭೂತ ಪ್ರೌಢ ಶಿಕ್ಷಣದ ಕಾರ್ಯಕ್ರಮಗಳನ್ನು ಕುರಿತು ಮಾಡಿದ ಭಾಷಣ ಒಂದರಲ್ಲಿ ಅವರು ಈ ವಿಚಾರವನ್ನು ಹೇಳಿದ್ದರು. ಕ್ಯೂಬಾ ದೇಶದಲ್ಲಿ ಶಿಕ್ಷಣದ ಅವಶ್ಯಕತೆ ಇರುವ 35 ಲಕ್ಷ ಜನ ಎಳೆಯರಿದ್ದಾರೆ. "ಈ ಪರಿಸ್ಥಿತಿಯಲ್ಲಿ ನಮಗೆ ಬೇರೆ ಪರ್ಯಾಯವಿಲ್ಲ .... ಇದು ಮೀರಲಾಗದ ಬೋಧನಾ ತತ್ವವಾಗಿರುವುದಲ್ಲದೆ, ಇದೊಂದು ಸಾಮಾಜಿಕ ಮತ್ತು ಮಾನವೀಯ ಅವಶ್ಯಕತೆಯಾಗಿದೆ ಮತ್ತು ಜೊತೆಗೆ ನಮ್ಮ ದೇಶದ ಅಭಿವೃದ್ಧಿಗೆ ಒಂದು ಅವಶ್ಯಕತೆಯಾಗಿದೆ" [86].

ಚೀನಾದಲ್ಲಿ ಸಾಂಸ್ಕೃತಿಕ ಕ್ರಾಂತಿಯು ಕೊನೆಯಾದಾಗ ಅದು ಶೈಕ್ಷಣಿಕ ಕ್ರಾಂತಿಗೆ ಹಠಾತ್ ಸಮಾಪ್ತಿಯನ್ನು ತಂದಿದ್ದರೆ, ಕ್ಯೂಬಾದಲ್ಲಿ ಶೈಕ್ಷಣಿಕ ಕ್ರಾಂತಿಯು ಇದನ್ನೇ ಹೋಲುವಂತಹ ಆದರೆ ಅಷ್ಟೊಂದು ಹಠಾತ್ತಾಗಿಲ್ಲದಿರುವಂತಹ ರೀತಿಯಲ್ಲಿ ಕೊನೆಗೊಂಡಿತು. 1970ರ ಜೂನ್ ತಿಂಗಳಿನಲ್ಲಿ ಕ್ಯಾಸ್ಟ್ರೋ ಅವರು ಸಾರ್ವಜನಿಕವಾಗಿ ಕ್ರಾಂತಿಕಾರಿ ಆಂದೋಲನದ ಒಂದು ಮುಖ್ಯ ಆರ್ಥಿಕ ಗುರಿಯಾಗಿದ್ದ ಒಂದು ಕೋಟಿ ಟನ್ ನಷ್ಟು ಸಕ್ಕರೆಯನ್ನು ಉತ್ಪಾದಿಸಬೇಕೆಂಬ ಯೋಜನೆಯು ವಿಫಲವಾಗಿದೆ ಎಂದು ಒಪ್ಪಿಕೊಂಡರು. ಈ ಹಿನ್ನಡೆಯಿಂದಾಗಿ ಸಾಮಾಜಿಕ ಬದಲಾವಣೆಯ ಕುರಿತಾದ ಈ ಹಿಂದಿನ ತೀವ್ರಗಾಮಿ ನೀತಿಗಳಿಂದ ಹಿಂತಿರುಗುವ ಹಾಗೂ

ಅವುಗಳನ್ನು ಮರು ಪರೀಕ್ಷೆಗೆ ಒಳಪಡಿಸುವ ಪ್ರಕ್ರಿಯೆ ಆರಂಭವಾಯಿತು. 1977ರಲ್ಲಿ ಕ್ಯಾಸ್ಟ್ರೋ ರವರು ತಮ್ಮ ಆಳ್ವಿಕೆಯು, ಕೆಲವೊಂದು "ಅವಾಸ್ತವವಾದ", ದೇಶದ ಆರ್ಥಿಕ ಪುನರ್ ನಿರ್ಮಾಣಕ್ಕೆ ತೊಂದರೆ ಉಂಟು ಮಾಡಿದ ಯೋಜನೆಗಳನ್ನು ಜಾರಿಗೊಳಿಸುವುದರ ಮೂಲಕ ನಿಸ್ಸಂಶಯವಾಗಿಯೂ "1960ರ ದಶಕದಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಮುಖ್ಯವಾದ ತಪ್ಪನ್ನು ಮಾಡಿತ್ತು" ಎಂದು ಒಪ್ಪಿಕೊಂಡರು[87]. 1970ರ ದಶಕದ ಮಧ್ಯಭಾಗದ ನಂತರ ಶುರುವಾಗಿ ಕ್ಯೂಬಾದ ಶಿಕ್ಷಣ ಪದ್ಧತಿಯು ಚೀನಾದಲ್ಲಿ ಮಾವೋರ ನಂತರ ಬಂದಂತಹ ಕೆಲವೊಂದು ಲಕ್ಷಣಗಳಿಗೆ ಹೋಲಿಕೆಯಾಗುವಂಥದ್ದನ್ನು ಅನುಸರಿಸಿದಂತೆ ಕಾಣುತ್ತಿತ್ತು: ಶಿಕ್ಷಣದ ಒತ್ತು ಕೆಲಸ ಮತ್ತು ಅಧ್ಯಯನವನ್ನು ಏಕೀಕರಿಸುವುದರಿಂದ ಬದಲಾಗಿ ವರ್ಗಗಳ ನೀಡುವಿಕೆ, ಶಿಸ್ತು, ತೇರ್ಗಡೆ ಮುಂತಾದ ಪ್ರಕ್ರಿಯೆಗಳ ಬಗ್ಗೆ ಗಮನವನ್ನು ಕೇಂದ್ರೀಕರಿಸಿತು. 1980ರ ದಶಕದ ಆರಂಭದಲ್ಲಿ ನಿಖರ ವಿಜ್ಞಾನಗಳ ಶಾಲೆ (School for Exact Sciences) ಎಂಬ ಹೊಸ ಉತ್ಕೃಷ್ಟ ಶಾಲಾ ಪದ್ಧತಿಯೊಂದನ್ನು ಸ್ಥಾಪಿಸಲಾಯಿತು. ಕ್ಯೂಬಾದ ಸರ್ಕಾರವು ಶಿಕ್ಷಣವನ್ನು ಉತ್ತಮಪಡಿಸಲು 'ಗುಣಮಟ್ಟಕ್ಕಾಗಿ ಸಮರ' ಎಂಬ ಆಂದೋಲನವನ್ನು ಆರಂಭಿಸಿತು ಮತ್ತು ಕ್ಯಾಸ್ಟ್ರೋ ರವರೆ ಸ್ವತಃ ಅನೇಕ ಸಂದರ್ಭಗಳಲ್ಲಿ ಪರೀಕ್ಷೆಗಳಲ್ಲಿ ಮೋಸ ಮಾಡುವುದು, ಕಪಟತನ ಇವುಗಳ ಪ್ರತಿಯಾಗಿ ಹೋರಾಡಬೇಕೆಂದು ಕರೆ ನೀಡಿದರು [88].

ಕ್ಯೂಬಾದ ಶೈಕ್ಷಣಿಕ ಪದ್ಧತಿಯು 1960ರ ದಶಕದಿಂದ 1970ರ ದಶಕದ ಆರಂಭದವರೆಗೂ ಕೂಡ ಕ್ರಾಂತಿಕಾರಿ ಬದಲಾವಣೆಗಳನ್ನು ಕಂಡಿತು. ಅವು ವ್ಯಾಪಕ ಸ್ವರೂಪದ್ದಾಗಿದ್ದು ಚೀನಾದಲ್ಲಿ ಆದಂತೆಯೇ ತೀವ್ರಗಾಮಿಯಾಗಿದ್ದವು. ಕ್ಯಾಸ್ಟ್ರೋ ಅವರು ಕ್ರಾಂತಿಯ ಪ್ರಾಮುಖ್ಯತೆಯ ಬಗ್ಗೆ ಸಂಪೂರ್ಣವಾಗಿ ಜಾಗೃತರಾಗಿದ್ದರು. ಆದ್ದರಿಂದಲೇ ಅವರು ಒಮ್ಮೆ ಹೆಮ್ಮೆಯಿಂದ ನುಡಿದರು, "ಜನರು ಅದರ ಬಗ್ಗೆ ಮಾತನಾಡುತ್ತಿದ್ದರು ಮತ್ತು ಅದಕ್ಕೆ ಗಮನವನ್ನು ಕೊಟ್ಟರು, ಆದರೆ ಕ್ಯೂಬಾ ಅದನ್ನು ಮೊದಲು ಆಚರಣೆಗೆ ತಂದಿತು". ಚೀನಾದಲ್ಲಿನ ಶೈಕ್ಷಣಿಕ ಕ್ರಾಂತಿಯ ತಿರುಳು "ಮುಕ್ತದ್ವಾರ ಶಾಲೆ" ಆಗಿದ್ದರೆ, ಕ್ಯೂಬಾದಲ್ಲಿ ಅದಕ್ಕೆ ಸಮಾನಾಂತರವಾದದ್ದು "ಭವಿಷ್ಯದಲ್ಲಿ ಪ್ರತಿಯೊಂದು ಉತ್ಪಾದನಾ ಘಟಕವು ಒಂದು ವಿಶ್ವವಿದ್ಯಾಲಯವಾಗುತ್ತದೆ" ಎಂಬುದು ಮತ್ತು ಹೋಸೆ ಎಂ ಮಿಲ್ಲರ್ (Jose M Millar) ಅವರ 'ಶಿಕ್ಷಣದ ಸಂಪೂರ್ಣ ಸಾಮಾಜಿಕರಣ'ದ ಮುನ್ನೋಟವಾಗಿತ್ತು[90].

**ಶೈಕ್ಷಣಿಕ ಕ್ರಾಂತಿಗಳ ವ್ಯಾಖ್ಯಾನಗಳು**

ಚೀನಾದ ಮತ್ತು ಕ್ಯೂಬಾದ ಶೈಕ್ಷಣಿಕ ಕ್ರಾಂತಿಗಳು, ತಮ್ಮ ವೈಫಲ್ಯಗಳೇನೇ ಇರಲಿ ಅವು ತಮ್ಮಷ್ಟಕ್ಕೆ ಜಾಗತಿಕ ಚಾರಿತ್ರಿಕ ಪ್ರಾಮುಖ್ಯತೆಯನ್ನು ಹೊಂದಿದ್ದ ಪ್ರಕರಣಗಳಾಗಿದ್ದವು, ಏಕೆಂದರೆ ಅವು ಬೃಹತ್ತಾದ ಮತ್ತು ಪಥಪ್ರದರ್ಶಕವಾದ ಸಾಮಾಜಿಕ ಆಂದೋಲನಗಳಾಗಿದ್ದವು. ಆದರೆ ಇಂದು ಹೆಚ್ಚಿನ ಸಂಪರ್ಕಗಳನ್ನು ಸಾಧಿಸಿರುವ 20ನೆಯ ಶತಮಾನದ ಕೊನೆಯ ಭಾಗದಲ್ಲಿ ನಾವು, ಆ ಎರಡು ರಾಷ್ಟ್ರಗಳು ಮತ್ತು ಅಲ್ಲಿನ ಶೈಕ್ಷಣಿಕ ಚಳುವಳಿಗಳು ಕೂಡ ಜಗತ್ತಿನ ಪ್ರಕ್ರಿಯೆಗಳೊಂದಿಗೆ ಸಂಬಂಧವನ್ನು ಹೊಂದಿದ್ದವು ಎಂಬುದನ್ನು ನಿರೀಕ್ಷಿಸಬೇಕು. ತಾವು ಯಾವ ಜಾಗತಿಕ ಭೂತಕಾಲವನ್ನು ಉತ್ತರಾಧಿಕಾರಿಯಾಗಿ ಪಡೆದುಕೊಂಡಿದ್ದವೋ ಮತ್ತು ಯಾವುದರೊಂದಿಗೆ ವರ್ತಮಾನವನ್ನು ಹಂಚಿಕೊಂಡಿದ್ದವೋ ಹಾಗೂ ಯಾವುದನ್ನು ತಾವು ತಮ್ಮ ಪರಂಪರೆಗೆ ಕಾಣಿಕೆಯಾಗಿ ನೀಡಿದವೋ ಆ ಜಗತ್ತಿನ ಪ್ರಕ್ರಿಯೆಗಳೊಂದಿಗೆ ಅವು ಸಂಬಂಧವನ್ನು ಹೊಂದಿದ್ದವು.

ಉದಾಹರಣೆಗೆ ಟಾಂಜೇನಿಯಾದಲ್ಲಿ ಪ್ರೆಸಿಡೆಂಟ್ ಜೂಲಿಯಸ್ ನ್ಯೆರೆರೇ ಅವರ ಉಜಾಮಾ ಸಮಾಜವಾದವು (Ujamaa socialism) 1960ರ ದಶಕದಲ್ಲಿ ಮತ್ತು 70 ದಶಕದಲ್ಲಿ ರೂಪಿಸಿದ್ದ ಮುಖ್ಯವಾದ ಯೋಜನೆ ಎಂದರೆ ಸ್ವಾವಲಂಬನೆಗಾಗಿ ಶಿಕ್ಷಣ. ಅದು ಪ್ರತಿಯೊಂದು ಶಾಲೆಯೂ ಸಹ ಒಂದು ಕೆಲಸದಲ್ಲಿ ನಿರತವಾದ ಸಮುದಾಯವಾಗಿರಬೇಕು, ಅಧ್ಯಯನವನ್ನು ಪ್ರಾಯೋಗಿಕವಾದ ಮತ್ತು ಕೆಲಸದತ್ತ ಸಂಬಂಧವನ್ನು ಹೊಂದಿರುವ ವಿಷಯಗಳೊಂದಿಗೆ ಜೋಡಿಸಿ ತನ್ಮೂಲಕ ಸ್ವಾವಲಂಬನೆಯನ್ನು ಸಾಧಿಸಬೇಕು ಎಂದು ಆಗ್ರಹಿಸಿತ್ತು[91.] ಕೃಷಿ ಕ್ಷೇತ್ರಗಳಿಗಾಗಿ ಯೋಜನೆ ತಯಾರಿಸುವ ಮತ್ತು ಅವುಗಳನ್ನು ನಡೆಸಿಕೊಂಡು ಹೋಗುವ ಜವಾಬ್ದಾರಿಯನ್ನು ವಿದ್ಯಾರ್ಥಿಗಳಿಗೆ ವಹಿಸಿ ಅವರಿಗೆ ಅದಕ್ಕೆ ಅನುಗುಣವಾಗಿ ಶ್ರೇಣಿಗಳನ್ನು ಕೊಡಲಾಗುತ್ತಿತ್ತು. ಈ ನೀತಿಗಳು ತಾವೇ ಹಣಕಾಸನ್ನು ಜೋಡಿಸುವ ಸಾಧನವಾಗುತ್ತವೆ ಎಂದು ಪರಿಗಣಿಸಿದ್ದಲ್ಲದೆ ಅವು ಸಮಾಜವಾದದ ಕುರಿತು ಸೂಕ್ತವಾದ ಧೋರಣೆಯನ್ನು ಅಭಿವೃದ್ಧಿಪಡಿಸುತ್ತವೆ ಮತ್ತು ದೈಹಿಕ ಮತ್ತು ಮಾನಸಿಕ ಶ್ರಮದ ನಡುವಿನ ಭೇದವನ್ನು ಮಸುಕಾಗಿಸುತ್ತವೆ ಎಂದು ನಿರೀಕ್ಷಿಸಲಾಗಿತ್ತು. ಟಾಂಜೇನಿಯಾದ ಶೈಕ್ಷಣಿಕ ಸುಧಾರಣೆಯು ಪ್ರಾಯಶಃ ಚೀನಾ ಮತ್ತು ಕ್ಯೂಬಾದ ಪ್ರಭಾವದಿಂದ ಪ್ರೇರಿತವಾಗಿತ್ತು. ನ್ಯೆರೆರೇ ಅವರು 1960ರ ದಶಕದಲ್ಲಿ ಎರಡು ಬಾರಿ ಚೀನಾ ದೇಶಕ್ಕೆ ಭೇಟಿ ನೀಡಿ ಅಲ್ಲಿನ ಸಾಂಸ್ಕೃತಿಕ ಕ್ರಾಂತಿಯಿಂದ ಪ್ರಭಾವಿಸಲ್ಪಟ್ಟಿದ್ದರು ಮತ್ತು ಅವರು ಕ್ಯೂಬಾದ ಶಿಕ್ಷಣವು ಟಾಂಜೇನಿಯಾವು ತಾನು ಅನುಸರಿಸುವುದಕ್ಕೆ ಸೂಕ್ತ ನಿದರ್ಶನವಾಗಬಹುದು ಎಂದು ಪ್ರತಿಪಾದಿಸುತ್ತಿದ್ದರು[92].

ನಿಕರಾಗುವಾದಲ್ಲಿ ಸ್ಯಾಂಡಿನಿಸ್ಟಾ ಬಂಡಾಯಗಾರರು 1979ರಲ್ಲಿ ಅಧಿಕಾರಕ್ಕೆ ಬಂದ ನಂತರ ಹೊಸ ಸರ್ಕಾರ ಒಂದು ಪ್ರಗಾಢವಾದ ಶೈಕ್ಷಣಿಕ ಸುಧಾರಣೆಯನ್ನು ಕೈಗೊಂಡಿತು ಮತ್ತು

ಅದರಲ್ಲಿ "ಜನತೆಗಾಗಿ ಭಾಗವಹಿಸುವಿಕೆಯ ಶಿಕ್ಷಣ ... ವಿಜ್ಞಾನ ಮತ್ತು ತಾಂತ್ರಿಕ ಕ್ಷೇತ್ರದಲ್ಲಿ ಶೈಕ್ಷಣಿಕ ಸುಧಾರಣೆಗಳು, ಶಿಕ್ಷಣವನ್ನು ಉತ್ಪಾದನಾ ಕೆಲಸದೊಂದಿಗೆ ಜೋಡಿಸುವುದು ಮತ್ತು ಹೊಸ ಆರ್ಥಿಕ ಮತ್ತು ಸಾಮಾಜಿಕ ಮಾದರಿಯನ್ನು ಬೆಂಬಲಿಸಲು ಶಿಕ್ಷಣವನ್ನು ಬದಲಾಯಿಸುವುದು" ಇವುಗಳಿಗೆ ಒತ್ತು ನೀಡಲಾಗಿತ್ತು. ಈ ಸುಧಾರಣೆಯ ಅಡಿಯಲ್ಲಿ ಮಾನವಿಕ ಶಾಸ್ತ್ರಗಳಿಗೆ ನೋಂದಾವಣಿಯು ಗಮನಾರ್ಹವಾಗಿ ಕುಸಿತವನ್ನು ಕಂಡಿತು.ಆದರೆ ಅನ್ವಯಿಕ ವಿಜ್ಞಾನಗಳು ಬಹಳಷ್ಟು ವಿಸ್ತರಿಸಿಕೊಂಡವು. ನಿಕರಾಗುವಾದ ಸುಧಾರಣೆಯು ಒಬ್ಬ "ಹೊಸ ಮನುಷ್ಯನನ್ನು" ಅಥವಾ "ಸ್ವಾರ್ಥ ರಹಿತ ಸ್ಯಾಂಡಿನಿಸ್ಟಾ ಕ್ರಾಂತಿಕಾರಿ"ಯನ್ನು ರೂಪಿಸಲು ಯತ್ನಿಸಿತು [93]. ನಿಕರಾಗುವಾಗದ ಸಂದರ್ಭದಲ್ಲಿ, ಟಾಂಜೇನಿಯಾದಲ್ಲಿ ಕಂಡದ್ದಕ್ಕಿಂತ ಹೆಚ್ಚು ಸ್ಪಷ್ಟವಾಗಿ ವಿದೇಶಗಳ ಪ್ರಭಾವವನ್ನು ಕಾಣಲಾಯಿತು. ಸ್ಯಾಂಡಿನಿಸ್ಟಾ ಸರ್ಕಾರಕ್ಕೆ ಬಹುತೇಕ ಸಂದರ್ಭದಲ್ಲಿ ಫಿಡಲ್ ಕ್ಯಾಸ್ಟ್ರೋ ಅವರು ಸಲಹೆಗಳನ್ನು ನೀಡುತ್ತಿದ್ದರು; ನಿಕರಾಗುವಾದ ಸಾಕ್ಷರತಾಂದೋಲನದಲ್ಲಿ ಭಾಗವಹಿಸಲು ಫಿಡಲ್ ಕ್ಯಾಸ್ಟ್ರೋ ಶಿಕ್ಷಕರ ಬ್ರಿಗೇಡ್ ಗಳನ್ನು ಕಳುಹಿಸಿಕೊಟ್ಟರು.

ಎಲ್ಲ ಶೈಕ್ಷಣಿಕ ಆಂದೋಲನಗಳಲ್ಲಿಯೂ ಅತ್ಯಂತ ತೀವ್ರಗಾಮಿ ಯಾಗಿದ್ದೆಂದರೆ ಖ್ಮೆರ್ ರೂಜ್ (KhmerRouge) ಆಳ್ವಿಕೆಯಲ್ಲಿನ ಕ್ಯಾಂಬೋಡಿಯಾದಲ್ಲಿನದು. 1975ರ ಏಪ್ರಿಲ್ ನಿಂದ 1976ರ ಅಂತ್ಯದವರೆಗೂ ಅಲ್ಲಿನ ಆಳ್ವಿಕೆಯು ಅದುವರೆಗಿನ ಎಲ್ಲಾ ಶೈಕ್ಷಣಿಕ ಕ್ರಾಂತಿಗಳಿಗಿಂತ ಆಚೆಗೆ ಹೋಯಿತು. ಸಮಾಜದಲ್ಲಿ ಶಿಕ್ಷಣಕ್ಕೆ ಒಂದು ಧನಾತ್ಮಕ ಪಾತ್ರ ಇರಬಹುದು ಎಂಬುದನ್ನು ಅದು ತಿರಸ್ಕರಿಸಿತು, ಇಡಿಯ ಶಿಕ್ಷಣ ಪದ್ದತಿಯನ್ನು ಅದು ಬೂರ್ಶ್ವಾ ಮತ್ತು ವಸಾಹತುಶಾಹಿ ಪರಂಪರೆಯದ್ದು ಎಂದು ಹೇಳಿ ರದ್ದುಪಡಿಸಿತು. ಕ್ಯಾಂಬೋಡಿಯಾದ ಕಮ್ಯುನಿಸ್ಟರು ಮಾವೋವಾದಿ ಪ್ರಭಾವದಲ್ಲಿದ್ದರೂ ಸಹ, ಸ್ವತಃ ಮಾವೋರವರೇ ತಮ್ಮ ಕ್ರಾಂತಿಯನ್ನು ಪೂರ್ಣಗೊಳಿಸುವುದರಲ್ಲಿ ವಿಫಲರಾದರು, ಏಕೆಂದರೆ ಅವರು ಪದೇ ಪದೇ ಸಾಂಸ್ಕೃತಿ ಕ್ರಾಂತಿಗಳನ್ನು ಜಾರಿಗೊಳಿಸುವ ತಮ್ಮ ವಾಗ್ದಾನವನ್ನು ಮುರಿದರು ಮತ್ತು ಅನೇಕ ಕ್ರಾಂತಿ ಪೂರ್ವ ಸಂಸ್ಥೆಗಳಾದ ಹಣ, ಕುಟುಂಬ, ನಗರ ಕೇಂದ್ರಗಳು ಮತ್ತು ಶಾಲಾ ಪದ್ದತಿಯನ್ನು ಉಳಿಸಿಕೊಂಡರು ಎಂದು ಪ್ರತಿಪಾದಿಸಿದರು. ಖ್ಮೆರ್ ರೂಜ್ ವಾದಿಸಿದ್ದು ಏನೆಂದರೆ, ಹೀಗಾದದ್ದರಿಂದಲೇ ಮಾವೋರವರ ಸಾವು ಸನ್ನಿಹಿತವಾದಂತೆ ಪರಿಷ್ಕರಣವಾದಿಗಳು (Revisionists) ಮತ್ತೆ ಅಧಿಕಾರಕ್ಕೆ ಬಂದು ಎಲ್ಲವನ್ನು ಪುನರ್ ಸ್ಥಾಪಿಸಿದರು ಎಂದು [94]. 1975ರ ವಸಂತ ಕಾಲದಲ್ಲಿ ಕ್ಯಾಂಬೋಡಿಯಾದ ನಗರಗಳನ್ನು ವಶಮಾಡಿಕೊಂಡ ನಂತರ ಪ್ರಾರಂಭದಿಂದಲೂ ಚೀನಾದಿಂದ ಪಾಠ ಕಲಿತ ಅವರು ಈ ಎಲ್ಲ ಸಂಸ್ಥೆಗಳನ್ನು ಸುಧಾರಣೆಗೆ

ಒಳಪಡಿಸುವ ಬದಲು ನಿಷೇಧಿಸಬೇಕೆಂದು ನಿರ್ಧರಿಸಿದರು[95]. 1977 ರಿಂದ ಖ್ಮೆರ್ ರೂಜ್ ಗ್ರಾಮೀಣ ಪ್ರದೇಶಗಳಲ್ಲಿ ಕೆಲವೊಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಶಾಲೆಗಳನ್ನು ಪುನರ್ ಸ್ಥಾಪಿಸಲು ನಿರ್ಧರಿಸಿತು. ಆದರೆ ಶಿಕ್ಷಣಕ್ಕಾಗಿ ನೀಡಿದ ಮಾರ್ಗದರ್ಶನಗಳು ಶೈಕ್ಷಣಿಕ ಕ್ರಾಂತಿಯ ಯುಗದಲ್ಲಿ ಚೀನಾ ಮತ್ತು ಕ್ಯೂಬಾದಲ್ಲಿ ಇದ್ದಂತೆ ಹೆಚ್ಚು ಕಮ್ಮಿ ತದ್ರೂಪವಾಗಿದ್ದವು. ಉದಾಹರಣೆಗೆ ಪಕ್ಷದ ದಸ್ತಾವೇಜೊಂದರಲ್ಲಿ ಪ್ರತಿಪಾದಿಸಿದಂತೆ "ನಮ್ಮ ಗುರಿ ಇರುವುದು ಶಾಲಾ ಶಿಕ್ಷಣವನ್ನು ಉತ್ಪಾದನಾ ಕೆಲಸಕ್ಕೆ ಹತ್ತಿರವಾಗುವಂತೆ ಇರಿಸುವುದು..... ಸೈದ್ಧಾಂತಿಕ ತಿಳುವಳಿಕೆಯನ್ನು, ಅದನ್ನು ವಾಸ್ತವಿಕ ಕೆಲಸದಲ್ಲಿ ಅನ್ವಯಿಸುತ್ತಿರುವಾಗಲೇ ಕಲಿಯಬೇಕು, ನಮ್ಮ ಜನರು ಅಧ್ಯಯನ ಮಾಡುತ್ತಾರೆ ಮತ್ತು ಅದೇ ಸಮಯದಲ್ಲಿ ನೇರವಾಗಿ ಉತ್ಪಾದನಾ ಚಳುವಳಿಯಲ್ಲಿ ಸೇವೆ ಮಾಡುತ್ತಾರೆ. ಇದನ್ನು ಜಾರಿಗೆ ತರಲು ಶಾಲೆಗಳನ್ನು ಬಹುತೇಕವಾಗಿ ಸಹಕಾರಿ ಕೃಷಿ ಕ್ಷೇತ್ರಗಳಿಗೆ ಹಾಗೂ ಕಾರ್ಖಾನೆಗೆ ಹತ್ತಿರವಾಗಿ ಇರಿಸಲಾಗಿದೆ". ಕಾರ್ಲ್ ಜಾಕ್ಸನ್ ಅವರು ಹೇಳುವಂತೆ ಈ ಮಾರ್ಗದರ್ಶನಗಳೂ ಸಾಂಸ್ಕೃತಿಕ ಕ್ರಾಂತಿಯಿಂದ ಪಡೆದುಕೊಂಡ ಸೂಚನೆಗಳಾಗಿದ್ದವು, ಶಿಕ್ಷಣವು ಕೆಲಸದಿಂದ ದೂರೀಕರಿಸಲ್ಪಡಬಾರದು ಏಕೆಂದರೆ ವಿಶೇಷಜ್ಞತೆಯು ಅಂತಿಮವಾಗಿ ಮೇಲರಿಮೆ (elitism) ಗೆ ಜನ್ಮ ಕೊಡುತ್ತದೆ ಮತ್ತು ಅದು ನಿಜವಾದ ಕೆಲಸಕ್ಕೆ ಸಂಬಂಧಿಸಿದ ಸಮಸ್ಯೆಗಳಿಗೆ ಅವಾಸ್ತವಿಕವಾದ ಸೈದ್ಧಾಂತಿಕ ಪರಿಹಾರಗಳನ್ನು ಸೂಚಿಸುತ್ತದೆ"[96].

ಜಗತ್ತಿನ ಬೇರೆ ಭಾಗಗಳಲ್ಲಿನ ಶೈಕ್ಷಣಿಕ ಬದಲಾವಣೆ ಮತ್ತು ಚರ್ಚೆಗಳು, ವಿಶೇಷವಾಗಿ 1960ರ ದಶಕದಲ್ಲಿ ನಡೆದಂತಹವು, ಚೀನಾ ಮತ್ತು ಕ್ಯೂಬಾದಲ್ಲಿ ನಡೆದ ಬದಲಾವಣೆಗಳನ್ನು ಹೋಲುತ್ತವೆ. ಹೊಸ ರಾಷ್ಟ್ರೀಯ ಸರ್ಕಾರಗಳು ಆಫ್ರಿಕಾ, ಏಷ್ಯಾ ಮತ್ತು ಕೆರೆಬಿಯನ್ ಪ್ರದೇಶಗಳ ದೇಶಗಳಲ್ಲಿನ ವಸಾಹತುಶಾಹಿ ಆಳ್ವಿಕೆಯ ನಂತರ ರಾಜ್ಯಾಧಿಕಾರವನ್ನು ವಹಿಸಿಕೊಂಡು, ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವನ್ನು ಸಾಧಿಸಬಹುದೆಂಬ ಭರವಸೆಯಲ್ಲಿ ನಾಟಕೀಯವಾದ ರೀತಿಯಲ್ಲಿ ಶೈಕ್ಷಣಿಕ ವ್ಯವಸ್ಥೆಗಳನ್ನು ವಿಸ್ತರಿಸಿದವು. ಅಲ್ಲಿಯವರೆಗೂ ಅತಿ ಕಡಿಮೆ ಶಾಲಾ ಶಿಕ್ಷಣವನ್ನು ಹೊಂದಿದ್ದಂತಹ ಜನತೆಯ ನಡುವೆ ನಾಟಕೀಯವಾದ ರೀತಿಯಲ್ಲಿ ಸಾಕ್ಷರತೆಯನ್ನು ಹೆಚ್ಚಿಸುವ ಸಾಧನೆಯನ್ನು ಮಾಡಿದ ಐವರಿ ಕೋಸ್ಟ್, ಭಾರತ, ಇಂಡೋನೇಷಿಯಾ ಮತ್ತು ಆಲ್ಜೀರಿಯಾಗಳು ಇದಕ್ಕೆ ಅತ್ಯುತ್ತಮವಾದ ನಿದರ್ಶನಗಳಾಗಿವೆ. ಅವರ ಸಾಧನೆಗಳು ಇನ್ನೂ ಹೆಚ್ಚು ನಮ್ಮ ಮೇಲೆ ಪ್ರಭಾವ ಬೀರುವುದೇಕೆಂದರೆ ಅವೆಲ್ಲವೂ ಕೂಡ ಬಹುಭಾಷೀಯ ರಾಷ್ಟ್ರಗಳಾಗಿದ್ದು ಅವುಗಳಿಗೆ ಆಯ್ಕೆಯು ಕ್ಯೂಬಾ ಮತ್ತು ಚೀನಾಗಿಂತ ಹೆಚ್ಚಿಗೆ ಸಂಕೀರ್ಣವಾಗಿದ್ದು, ಅವು ಬೋಧನೆಯ ಭಾಷೆ ಯಾವುದು ಇರಬೇಕೆಂಬ ಸಂದಿಗ್ಧವನ್ನು

ಎದುರಿಸಬೇಕಾಗಿ ಬಂದಿದ್ದಿತು. ಶೈಕ್ಷಣಿಕ ಆಂದೋಲನಗಳು ಇತ್ತೀಚೆಗಷ್ಟೇ ವಸಾಹತು ಆಳ್ವಿಕೆಯಿಂದ ಹೊರಬಂದ ದೇಶಗಳಿಗೆ ಅಥವಾ ಕ್ರಾಂತಿ ಘಟಿಸಿದ್ದ ದೇಶಗಳಿಗೆ ಸೀಮಿತವಾಗಿರಲಿಲ್ಲ. ಉದಾಹರಣೆಗೆ 1960ರ ದಶಕದಲ್ಲಿಯೇ ಬ್ರೆಜಿಲ್ ನಲ್ಲಿ ಪಾಲೋ ಫ್ರೇರಿ (Paolo Freire) ಅವರು ಒಬ್ಬ ಶೈಕ್ಷಣಿಕ ಸುಧಾರಕನಾಗಿ ಹೊರಹೊಮ್ಮಿದ್ದು ಅವರ 'ಪೆಡಗಾಗಿ ಆಫ್ ದಿ ಅಪ್ರೆಸ್ಡ್' (*Pedagogy of the Oppressed*, ದಮನಿತರ ಬೋಧನಾ ಶಾಸ್ತ್ರ) ಎಂಬ ಪುಸ್ತಕವು ಸಾಮಾಜಿಕ ಅಸಮಾನತೆಗಳಿಗೆ ಸವಾಲೊಡ್ಡುವಂತಹ ಶಿಕ್ಷಣ ಬೇಕೆಂದು ಕರೆ ನೀಡಿತ್ತು. ಫ್ರೇರಿ ಅವರು ಸಾವಿರದ ಒಂಬೈನೂರ ಅರವತ್ತರ ದಶಕದಲ್ಲಿ ಚೆಗೆವಾರ ಅವರ ಶೈಕ್ಷಣಿಕ ದೃಷ್ಟಿಕೋನದೊಂದಿಗೆ ಸಂಬಂಧ ಹೊಂದಿದ್ದರು ಮತ್ತು ನಂತರ ಅಮೆರಿಕಾದಲ್ಲಿನ ನಗರ ಶಿಕ್ಷಣದ ಟೀಕಾಕಾರರಾದ ಜೋನಾಥನ್ ಕೋಜೋಲ್ (Jonathan Kozol) ಅವರೊಂದಿಗೆ ಸಂಪರ್ಕಕ್ಕೆ ಬಂದರು [97].

ಹಾಗಾದರೆ ಚೀನಾ ಮತ್ತು ಕ್ಯೂಬಾದ ಶೈಕ್ಷಣಿಕ ಕ್ರಾಂತಿಗಳ ವಿಶ್ಲೇಷಣೆಯನ್ನು ನಾವು ಚೆನ್ನಾಗಿ ಅರ್ಥೈಸಿಕೊಳ್ಳುವುದು ಹೇಗೆ? ನಾವು ಉಲ್ಲೇಖಿಸಿರುವ ಬೇರೆ ಪ್ರಕರಣಗಳನ್ನು ಕೂಡ ಗಮನಿಸಿದರೆ ಕ್ಯೂಬಾ ಮತ್ತು ಚೀನಾದ ಆಂದೋಲನಗಳು ಅಥವಾ ಕಡೆಯ ಪಕ್ಷ ಅವರ ಬಹುತೇಕ ನೀತಿಗಳು ಜಾಗತಿಕ ಸಂದರ್ಭದಲ್ಲಿ ಅನನ್ಯವಾದದ್ದೇನಲ್ಲ ಎಂಬುದು ಸ್ಪಷ್ಟವಾಗುತ್ತದೆ. ಹೀಗಾಗಿ ವಿಶ್ಲೇಷಕನೊಬ್ಬನು ಚೀನಾ ಮತ್ತು ಕ್ಯೂಬಾದ ಆಂದೋಲನಗಳನ್ನು ಶೈಕ್ಷಣಿಕ ಬದಲಾವಣೆಯ ಇತರ ಪ್ರಕರಣಗಳೊಂದಿಗೆ ಹೇಗೆ ಜೋಡಿಸಬಹುದು ಮತ್ತು ಅದೇ ಸಮಯದಲ್ಲಿ ಅವು ಹೇಗೆ ವಿಭಿನ್ನವಾಗಿದ್ದವು ಎಂಬುದನ್ನು ತೋರಿಸಬಹುದು ಎಂಬುದಕ್ಕೆ ಅತ್ಯಂತ ಸೂಕ್ತವಾದ ದೃಷ್ಟಿಕೋನ ಯಾವುದು?

ಕೆಳಗೆ ನೀಡಲಾಗಿರುವ ವಿಶ್ಲೇಷಕ ಸಾರಾಂಶದಲ್ಲಿ ನಮ್ಮ ಚೌಕಟ್ಟು ಆಧುನಿಕ ಶಿಕ್ಷಣ ಪದ್ಧತಿಯ ಶ್ರೀಮಂತ ಹಾಗೂ ನಗರ ಪರವಾದ ಪೂರ್ವಗ್ರಹವನ್ನು ಸುಧಾರಣೆಗೆ ಒಳಪಡಿಸಲು ತೆಗೆದುಕೊಳ್ಳಲಾದಂತಹ ಮೂರು ದೃಷ್ಟಿಕೋನಗಳನ್ನು ಗುರುತಿಸುತ್ತದೆ. ನಾವು ಈ ದೃಷ್ಟಿಕೋನಗಳನ್ನು ಸಾಮಾಜಿಕ ಸಮಾನತೆಗಾಗಿ ಶಿಕ್ಷಣ, ಅಭಿವೃದ್ಧಿಗಾಗಿ ಶಿಕ್ಷಣ ಮತ್ತು ಕಮ್ಯುನಿಸಂಗಾಗಿ ಶಿಕ್ಷಣ ಎಂದು ಹೆಸರಿಸಿದ್ದೇವೆ. ಶೈಕ್ಷಣಿಕ ಬದಲಾವಣೆಯ ನಾಯಕರು ತಮ್ಮ ದೃಷ್ಟಿಕೋನವನ್ನು ಒಂದರಿಂದ ಇನ್ನೊಂದಕ್ಕೆ ಬದಲಾಯಿಸುವಂತೆ ಪ್ರಚೋದಿಸಿದ ಇಲ್ಲಿನ ಪ್ರತಿಯೊಂದು ದೃಷ್ಟಿಕೋನವು ಸಹ ತನ್ನೊಂದಿಗೆ ತನ್ನದೇ ಆದ ಒಂದಷ್ಟು ಶೈಕ್ಷಣಿಕ ಸಂದಿಗ್ಧಗಳನ್ನು ತಂದಿತ್ತು.

ಶೈಕ್ಷಣಿಕ ವಿಶ್ಲೇಷಕರ ಮೊದಲನೆಯ ದೃಷ್ಟಿಕೋನವೆಂದರೆ ಸಾಮಾಜಿಕ ಸಮಾನತೆಗಾಗಿ ಶಿಕ್ಷಣ ಎಂಬುದು. ಆಧುನಿಕ ಶಿಕ್ಷಣ ಪದ್ಧತಿಯ ಶ್ರೀಮಂತ ಹಾಗೂ ಒಂದು ಜನ ವಿಭಾಗದ ಪರವಾದ ಪ್ರವೃತ್ತಿಗಳನ್ನು ಖಂಡಿಸುವ, ಸಾಮಾಜಿಕ ಸಮಾನತೆಯ ಆದರ್ಶ ರಾಜ್ಯದ ಕಣಸನ್ನು (vision)ಹೊಂದಿದ್ದ ದೀರ್ಘಕಾಲೀನ ಪರಂಪರೆಯೊಂದರ ತೀವ್ರಗಾಮಿ ಬದಲಾವಣೆ ಹಾಗೂ ಮುಂದುವರಿಕೆಯಾಗಿ ಚೀನಾ ಮತ್ತು ಕ್ಯೂಬಾದ ಆಂದೋಲನಗಳು ಆರಂಭವಾದವು. ಈ ಧೋರಣೆಯು ಆರಂಭಕಾಲದ ಚೀನಾ ಮತ್ತು ಕ್ಯೂಬಾ ದೇಶಗಳ ರಾಷ್ಟ್ರವಾದಿಗಳಲ್ಲಿ, ಮಾರ್ಕ್ಸ್ ವಾದಿಗಳಲ್ಲಿ, ಆದರ್ಶವಾದಿ ಸಮಾಜವಾದಿಗಳಲ್ಲಿ (Utopian Socialists) ಮತ್ತು ರಷ್ಯಾದ ಜನಪ್ರಿಯತಾವಾದಿಗಳಲ್ಲಿ ಪ್ರತಿನಿಧಿಸಲ್ಪಟ್ಟಿತ್ತು ಎಂಬುದನ್ನು ನಾವು ಈ ಲೇಖನದ ಆರಂಭದ ವಿಭಾಗದಲ್ಲಿ ಸೂಚಿಸಿದ್ದೇವೆ. ಜ್ಞಾನೋದಯ (Enlightenment) ದ ಕಾಲದಲ್ಲಿಯೇ ಗುರುತಿಸಬಹುದಾದ ಶಿಕ್ಷಣದ ಕುರಿತಾದ ಈ ದೃಷ್ಟಿಕೋನವು, ಶಿಕ್ಷಣದಲ್ಲಿ ಶ್ರೀಮಂತರಿಗೆ ದೊರಕುತ್ತಿದ್ದ ಸವಲತ್ತುಗಳ ಬಗ್ಗೆ ದೂರುತ್ತಾ, ಶಿಕ್ಷಣವನ್ನು ಸಂಘಟಿಸಿರುವ ರೀತಿಯು ಹೆಚ್ಚು ಹೆಚ್ಚಾಗಿ ಸಾಮಾಜಿಕ ಶ್ರೇಣೀಕರಣವನ್ನು ಸಮರ್ಥಿಸುತ್ತದೆಯೇ ಹೊರತು ಅದಕ್ಕೆ ಮಿತಿಗಳನ್ನು ತೊಡಿಸುವುದಿಲ್ಲ ಎಂದು ಟೀಕಿಸುತ್ತಿತ್ತು. ಈ ವಿಮರ್ಶನಕಾರರು ಶಿಕ್ಷಣವು ದಮನಿತರಿಗೆ ಸೇವೆಯನ್ನು ನೀಡಬೇಕೆ ಹೊರತು ಅವರ ದಮನವನ್ನು ಮುಂದುವರೆಸಬಾರದು ಎಂದು ವಾದಿಸಿದರು.

ಚೀನಾದ ಮತ್ತು ಕ್ಯೂಬಾದ ಕ್ರಾಂತಿಕಾರಿ ಸರ್ಕಾರಗಳ ಪ್ರಾರಂಭದ ವರ್ಷಗಳ ಸಾಕ್ಷರತಾಂದೋಲನಗಳು ಸಾಮಾಜಿಕ ಸಮಾನತೆಗಾಗಿ ಶಿಕ್ಷಣ ಎಂಬ ಧ್ಯೇಯಕ್ಕೆ ಹೊಂದಿಕೊಂಡಿದ್ದವು. ಈ ಆಂದೋಲನಗಳು ಶಿಕ್ಷಣವನ್ನು ವಿಸ್ತರಿಸುವುದರ ಮೂಲಕ ಸಾಮಾಜಿಕ ಸಮಾನತೆಯ ಕೆಲವೊಂದು ಅಂಶಗಳನ್ನು ಮುಂದುವರೆಸುವಲ್ಲಿ ಅಸಾಧಾರಣವಾದ ಯಶಸ್ಸನ್ನು ಪಡೆದುಕೊಂಡಿದ್ದವು. ಅದಕ್ಕಿರುವ ಬಲವಾದ ಸಾಕ್ಷ್ಯವೆಂದರೆ ಅವು ಸಾಪೇಕ್ಷವಾಗಿ ಒಂದು ಸಣ್ಣ ಅವಧಿಯಲ್ಲಿ ಸಾಕ್ಷರತೆಯ ಮಟ್ಟವನ್ನು ಹೆಚ್ಚಿಸಿದವು. ಎಷ್ಟರಮಟ್ಟಿಗೆ ಎಂದರೆ ಬಹುತೇಕ ವಯಸ್ಕ ಮತ್ತು ಶಾಲಾ ವಯಸ್ಸಿನ ಮಕ್ಕಳು ಓದುವುದನ್ನು ಕಲಿತಿದ್ದರು[98]. ಈ ಸಾಕ್ಷರತಾ ಆಂದೋಲನಗಳು 1920ರ ದಶಕದಲ್ಲಿ ಸೋವಿಯತ್ ಒಕ್ಕೂಟ ಮತ್ತು ಟರ್ಕಿ ನಡೆಸಿದ ಆಂದೋಲನಗಳಿಗೆ ಮತ್ತು 1950ರ ಹಾಗೂ 60ರ ದಶಕಗಳ ಏಷ್ಯ ಮತ್ತು ಆಫ್ರಿಕಾದ ವಸಾಹತುಶಾಹಿಯಿಂದ ಬಿಡುಗಡೆ ಹೊಂದಿದ ರಾಷ್ಟ್ರಗಳ ಸಾಧನೆಗೆ ಸಮಾನಾಂತರವಾಗಿದ್ದವು. ಇಡೀ ಜಗತ್ತಿನ ಮಟ್ಟಿಗೆ ಹೇಳಬೇಕೆಂದರೆ 1950 ರಿಂದ 1975 ರವರೆಗಿನ ಅವಧಿಯು ಮಾನವ ಜನಸಮುದಾಯದ ನಡುವೆ ಸಾಕ್ಷರತೆಯು ಅತ್ಯಂತ ಮಹೋನ್ನತವಾದ ಮುನ್ನಡೆಗಳನ್ನು

ಸಾಧಿಸಿದ ಸಮಯವಾಗಿತ್ತು. ಸಾಮಾಜಿಕ ಸಮಾನತೆಗಾಗಿ ಶಿಕ್ಷಣ ಎಂಬ ನೀತಿಯು ಸಾಕ್ಷರತೆಯ ವಿಸ್ತರಣೆಯ ಜೊತೆಗೆ ಕೆಲಸದ ಘನತೆಗೆ, ಶಿಕ್ಷಣದ ಕಾರ್ಯಸಾಧುತ್ವಕ್ಕೆ, ಮತ್ತು ಶಿಕ್ಷಣ ಹಾಗೂ ಕೆಲಸ ಎಲ್ಲಾ ಮಟ್ಟಗಳಲ್ಲಿಯೂ ಕೂಡ ಸಂಬಂಧವನ್ನು ಹೊಂದಿರಬೇಕು ಎನ್ನುವುದಕ್ಕೆ ಒತ್ತು ನೀಡಿತು. ಮಾರ್ಕ್ಸ್ ಅವರು ಕೆಲಸ ಮತ್ತು ಅಧ್ಯಯನವು ಚಿಕ್ಕವಯಸ್ಸಿನಲ್ಲಿಯೇ ಒಂದರೊಂದಿಗೆ ಇನ್ನೊಂದು ಬೆಸೆದುಕೊಳ್ಳಬೇಕು ಎಂಬುದಕ್ಕೆ ಆರಂಭಿಕವಾಗಿ ನೀಡಿದ್ದ ಮೆಚ್ಚುಗೆಯು ಒಂದು ಮುಖ್ಯ ವಸ್ತುವಿಷಯ (theme) ಆಗಿದ್ದು 20ನೆಯ ಶತಮಾನದುದ್ದಕ್ಕೂ ಶೈಕ್ಷಣಿಕ ಸುಧಾರಣೆಯಲ್ಲಿ ಅದು ಮರುಕಳಿಸುತ್ತಿತ್ತು.

ಅದೇನೆ ಇರಲಿ "ಸಾಮಾಜಿಕ ಸಮಾನತೆಗಾಗಿ ಶಿಕ್ಷಣ" ಎಂಬುದರ ಬೆಲೆಯೂ ದುಬಾರಿಯಾಗಿತ್ತು. ಜನ ಸಮುದಾಯದ ಉತ್ತಮಗೊಂಡ ಸಂಪರ್ಕದ ಲಾಭಗಳು ಮತ್ತು ಹೊಸ ಸರ್ಕಾರ ಗಳಿಸಿದ ರಾಜಕೀಯ ನಿಷ್ಠೆಯು ಗಣನೀಯವಾಗಿದ್ದರೂ ಆರ್ಥಿಕ ಲಾಭಗಳು ದಕ್ಕುವುದು ತಡವಾಯಿತು. ಕಡಿಮೆ ಆರ್ಥಿಕ ಮತ್ತು ಶೈಕ್ಷಣಿಕ ಸಂಪನ್ಮೂಲಗಳಿದ್ದ ದೇಶಗಳಿಗೆ ಇಂತಹ ಆಂದೋಲನಗಳು, ಪ್ರಭುತ್ವಗಳು ಅವುಗಳಿಗೆ ವಿಪರೀತ ಒತ್ತು ಕೊಟ್ಟಾಗ ನಿರ್ವಹಿಸುವುದಕ್ಕೆ ಅತ್ಯಾದರ್ಶ (ಅಪ್ರಾಯೋಗಿಕ) ಎನ್ನುವಂತಾಯಿತು. ಅತ್ಯಂತ ಮೂಲಭೂತವಾದ ಶೈಕ್ಷಣಿಕ ಸಂಸ್ಥೆಗಳಿಗೆ ಒತ್ತನ್ನು ನೀಡಿದ್ದು ಶಿಕ್ಷಣದ ಹೆಚ್ಚು ಮುಂದುವರೆದ ಸಂಗತಿಗಳಿಗೆ ಉಪೇಕ್ಷೆಯನ್ನುಂಟು ಮಾಡಿತು ಮತ್ತು ಮುಂದುವರೆದ ಶಿಕ್ಷಣದಿಂದ ಲಾಭವನ್ನು ಪಡೆಯಬಹುದು ಎಂದು ಆಶಿಸಿದ್ದ ಕುಟುಂಬಗಳನ್ನು ಅದು ದೂರೀಕರಿಸಿತು. ಈ ನೀತಿಯು ಈಗಾಗಲೇ ಅಂತಹ ದೇಶಗಳಲ್ಲಿ ಒಂದು ಮಿತಿಯಲ್ಲಿದ್ದ ಆರ್ಥಿಕ ಮತ್ತು ಶೈಕ್ಷಣಿಕ ಸಂಪನ್ಮೂಲಗಳು, ಆರ್ಥಿಕವಾಗಿ ಎಲ್ಲಿ ಹೆಚ್ಚು ಸಮರ್ಥವಾಗಿ ಉಪಯುಕ್ತವಾಗುತ್ತಿತ್ತೋ ಅಲ್ಲಿ ಗಮನಹರಿಸುವ ಬದಲು, ಪೋಲಾಗುವಂತೆ ಮಾಡಿತು.

ಈ ಕಾರಣದಿಂದಾಗಿ ಅಭಿವೃದ್ಧಿಗಾಗಿ ಶಿಕ್ಷಣ ಎಂಬ ಧೋರಣೆಯು ನಿಧಾನವಾಗಿ ಹೆಚ್ಚಿನ ಗಮನವನ್ನು ಪಡೆದುಕೊಂಡಿತು ಮತ್ತು ಚೀನಾ, ಕ್ಯೂಬಾ ಮತ್ತು ಉಳಿದ ದೇಶಗಳಲ್ಲಿ ಕೂಡ ಶೈಕ್ಷಣಿಕ ವಲಯದಲ್ಲಿ ತೊಡಗಿಕೊಂಡವರ ಆದ್ಯತೆಯ ವಿಷಯವಾಯಿತು. ಇಲ್ಲಿ "ಅಭಿವೃದ್ಧಿ" ಎಂದರೆ ವೇಗವಾದ ಆರ್ಥಿಕ ಮುನ್ನಡೆಯಾಯಿತು. ಇದು ವಿಶೇಷವಾಗಿ ಮುಂದುವರೆದ ಬಂಡವಾಳಶಾಹಿ ದೇಶಗಳೊಂದಿಗೆ ಸ್ಪರ್ಧೆಯಲ್ಲಿ ಸಮಾನರಾಗಲು ನಡೆಸಿದ ಪ್ರಯತ್ನವಾಯಿತು. ಈ ಧೋರಣೆಯಲ್ಲಿ ಚೀನಾ ಮತ್ತು ಕ್ಯೂಬಾ ದೇಶಗಳನ್ನು ವಸಾಹತುಶಾಹಿಯಿಂದ ಮುಕ್ತರಾಗುವ ಪ್ರಕ್ರಿಯೆಯಲ್ಲಿರುವ ಅಥವಾ ನವವಸಾಹತುಶಾಹಿಯ ವಿರುದ್ಧ ಆಂದೋಲನ ನಡೆಸುತ್ತಿರುವ ದೇಶಗಳೊಂದಿಗೆ ಜೋಡಿಸಬಹುದು. ತಮ್ಮ ವ್ಯವಸ್ಥೆಯು ಪ್ರಸ್ತುತ ಎಂದು ಸಾಬೀತು ಮಾಡಲು

ಆಶಿಸುತ್ತಿದ್ದ ಸಮಾಜವಾದಿಗಳು ಇದೇ ಅಭಿವೃದ್ಧಿಯ ಆಕಾಂಕ್ಷೆಯನ್ನು ಹಂಚಿಕೊಂಡಿದ್ದರು. ಇದರ ಅರ್ಥವೇನೆಂದರೆ ವೃತ್ತಿಪರ ತರಬೇತಿಗೆ, ಕೆಲಸ ಮತ್ತು ಅಧ್ಯಯನಕ್ಕೆ ಮತ್ತು ಇಂಜಿನಿಯರಿಂಗ್ ಮತ್ತು ಅನ್ವಯಿಕ ವಿಜ್ಞಾನಕ್ಕೆ ಒತ್ತು ಕೊಡುವುದು ಸಹ ಆಗಿತ್ತು. ಚೀನಾದಲ್ಲಿ ಲಿಯು ಶಾವ್ಕೋ ಕಿ ಮತ್ತು ಕ್ಯೂಬಾ ದಲ್ಲಿ ಫೆಡಲ್ ಕ್ಯಾಸ್ಟ್ರೋ ಅವರುಗಳು 1960ರ ದಶಕದ ಆದಿಭಾಗದಲ್ಲಿ ಈ ಒಂದು ಕಾರ್ಯಸಾಧುವಾದ ಹಾಗೂ ಕೆಲಸಕ್ಕೆ ಮಹತ್ವ ನೀಡುವ ಧೋರಣೆಯುಳ್ಳ ಹಾಗೂ ಉತ್ಪಾದನೆಯ ಗುರಿಗಳನ್ನು ಮುಟ್ಟುವ ಶಿಕ್ಷಣನೀತಿಗೆ ಸ್ಪಷ್ಟವಾದ ನಿದರ್ಶನವಾಗಿದ್ದರು.

ಸಾಮಾಜಿಕ ಸಮಾನತೆ ಮತ್ತು ಅಭಿವೃದ್ಧಿ ಇವುಗಳ ನಡುವೆ ಆಯ್ಕೆ ಮಾಡಬೇಕಾದ ಸಂದಿಗ್ಧವನ್ನು ಶೈಕ್ಷಣಿಕ ವಿಶ್ಲೇಷಕರು ಮತ್ತು ರಾಜಕೀಯ ನಾಯಕರು ಇಬ್ಬರೂ ಕೂಡ ಉತ್ತರಿಸಿದರು. ಟ್ರೋಬ್ ಮೆಂಡೇ (Trobe Mende) ಅವರು ವಾದಿಸಿದಂತೆ " ಈಗ ಬಡದೇಶದಲ್ಲಿ ಪ್ರಸರಿಸಲಾಗುತ್ತಿರುವ ಬಹುತೇಕ ಶಿಕ್ಷಣವು ಅವರು ಎದುರಿಸುವ ಸಮಸ್ಯೆಗಳ ಪರಿಹಾರಕ್ಕೆ ಅಪ್ರಸ್ತುತವಾಗಿರುವುದು ಮಾತ್ರವಲ್ಲ ಬದಲಿಗೆ ಅದು ಖಂಡಿತವಾಗಿಯೂ ಹಾನಿಕಾರಕವಾಗಿದೆ. ಅದು ಸಾಧಾರಣ ಕೆಲಸಗಳ ಕುರಿತಾದ ತಿರಸ್ಕಾರವನ್ನು ಮುಂದುವರಿಸುತ್ತದೆ ಮತ್ತು ಸವಲತ್ತುಳ್ಳ ಕಡಿಮೆ ಸಂಖ್ಯೆಯ ಜನರು ಮತ್ತು ಆಶಿಕ್ಷಿತ ಅಥವಾ ಅನಕ್ಷರಸ್ಥ ವಿಶಾಲ ಜನಸ್ತೋಮ ಇವರ ನಡುವಿನ ಕಂದರವನ್ನು ಇನ್ನಷ್ಟು ಹೆಚ್ಚು ಮಾಡುತ್ತದೆ.....; ಅದು ಭೌತಿಕ ಪ್ರಗತಿಯನ್ನು ಸಾಧಿಸುವುದಕ್ಕೆ ಅಡ್ಡವಾಗಿರುವ ನಿಜವಾದ ಸಮಸ್ಯೆಗಳನ್ನು ಎದುರಿಸಲು ಯಾವುದೇ ರೀತಿಯ ವೃತ್ತಿಪರ ತರಬೇತಿಯನ್ನು, ಆಧುನಿಕ ವಿಜ್ಞಾನದ ಅಂಶಗಳನ್ನು, ಉಪಯುಕ್ತ ತಂತ್ರಜ್ಞಾನವನ್ನು ಅಥವಾ ಆಧುನಿಕ ಕೃಷಿಯ ಕುರಿತಾದ ತಿಳುವಳಿಕೆಯನ್ನು ನೀಡುವುದರಲ್ಲಿ ವಿಫಲವಾಗುತ್ತದೆ "[99]. ಇಲ್ಲಿ ಉದ್ಧರಿಸಿರುವ ಹೇಳಿಕೆಯ ಮೊದಲ ಭಾಗವು ಸಾಮಾಜಿಕ ಸಮಾನತೆಯ ವಿಷಯವನ್ನು ಹಾಗೂ ಎರಡನೆಯ ಭಾಗವು ಆರ್ಥಿಕ ಅಭಿವೃದ್ಧಿಯ ವಿಷಯಗಳನ್ನು ಕುರಿತಾಗಿದೆ. ಹೀಗಾಗಿ ಮೂರನೆಯ ಜಗತ್ತಿನಲ್ಲಿ ಶೈಕ್ಷಣಿಕ ಆಂದೋಲನಗಳು ಹರಡುತ್ತಿದ್ದಾಗ, 1960 ಮತ್ತು 70ರ ದಶಕದಲ್ಲಿ ಸಂಭವಿಸಿದ ಶೈಕ್ಷಣಿಕ ಬದಲಾವಣೆಗಳನ್ನು ಮೌಲ್ಯಮಾಪನ ಮಾಡಲು ಹಾಗೂ ಅರ್ಥ ಮಾಡಿಕೊಳ್ಳಲು ಇನ್ನೊಂದು ದೃಷ್ಟಿಕೋನವನ್ನು ಒದಗಿಸುತ್ತದೆ ಎಂಬ ಕಾರಣದಿಂದಾಗಿ ಅನೇಕ ವ್ಯಾಖ್ಯಾನಕಾರರು "ಅಭಿವೃದ್ಧಿಗಾಗಿ ಶಿಕ್ಷಣ" ಎಂಬುದನ್ನು ಅಳವಡಿಸಿಕೊಂಡರು ಮತ್ತು ಅಂತಹ ಪ್ರಯೋಗಗಳು ವಿಫಲವಾದ ಮೇಲೂ ಸಹ ಈಗಲೂ ಇತ್ತೀಚಿನ ಕೆಲವು ಕೃತಿಗಳಲ್ಲಿ ಅದು ಪ್ರತಿಬಿಂಬಿತವಾಗುತ್ತಿದೆ[100]. ಪಾಶ್ಚಿಮಾತ್ಯ ಮಾದರಿಯ ಶಿಕ್ಷಣದ ವಿನ್ಯಾಸಗಳನ್ನು ಮುರಿಯುವ ಪ್ರಯತ್ನ ಮಾಡಿದ ಒಂದು ಅಭಿವೃದ್ಧಿಶೀಲ ರಾಷ್ಟ್ರಗಳ ಮಾದರಿ ಎಂದು ಕೆಲವು ಲೇಖಕರು

ಕ್ಯಾಂಬೋಡಿಯ, ಲಾವೋಸ್, ಚೈನಾ, ಟಾನ್ಜೇನಿಯಾ, ಕ್ಯೂಬಾ ಮತ್ತು ಮೊಜಾಂಬಿಕ್ ಗಳನ್ನು ಒಂದೆಡೆ ಸೇರಿಸುತ್ತಾರೆ[101]. "ಕೇಂದ್ರ ಮತ್ತು ಪರಿಧಿಯ" ಪೂರ್ವಸಿದ್ಧಾಂತ (Center-periphery hypothesis), ಅವಲಂಬನೆಯ ಸಿದ್ಧಾಂತ ಮತ್ತು ಜಾಗತಿಕ ವ್ಯವಸ್ಥೆಯ ಸಿದ್ಧಾಂತ ಇವುಗಳನ್ನು ಈ ವಾದಗಳಲ್ಲಿ ಅನೇಕ ಬಾರಿ ಉಪಯೋಗಿಸಿಕೊಳ್ಳಲಾಗುತ್ತದೆ.

"ಅಭಿವೃದ್ಧಿಗಾಗಿ ಶಿಕ್ಷಣ" ಎಂಬುದರ ಸಮಸ್ಯೆ ಏನೆಂದರೆ ಅದು ಹೆಚ್ಚು ಹೆಚ್ಚಾಗಿ ವಿಶೇಷಜ್ಞತೆ ಹಾಗೂ ತಜ್ಞತೆಯ ಮೇಲೆ ಅವಲಂಬಿತವಾಗಿದ್ದು, ಅದರಿಂದಾಗಿ ಅದು ಶ್ರೀಮಂತ ಮತ್ತು ನಗರ ಸವಲತ್ತಿನ ವ್ಯವಸ್ಥೆಯ ಕಡೆಗೆ ಸೆಳೆದುಕೊಳ್ಳುತ್ತಿತ್ತು ಮತ್ತು ಅದನ್ನು ಅನುಸರಿಸುವ ವಿದ್ಯಾಸಂಸ್ಥೆಗಳು (ಆರಂಭಕಾಲದ ಸೋವಿಯತ್ ಸುಧಾರಕರು ಆಪಾದಿಸುತ್ತಿದ್ದಂತಹ) ಮಾತಿನ ಶಾಲೆಗಳಾಗುತ್ತಿದ್ದವೇ ಹೊರತು ಕೆಲಸದ ಶಾಲೆಗಳಾಗುತ್ತಿರಲಿಲ್ಲ ಹಾಗೂ ಇದರ ವಿರುದ್ಧವೇ ಇಡಿಯ ಶೈಕ್ಷಣಿಕ ಸುಧಾರಣೆಯ ಪ್ರಕ್ರಿಯೆಯನ್ನು ಈ ಮೊದಲು ಹರಿಬಿಡಲಾಗಿತ್ತು. ಸೋವಿಯತ್ ಒಕ್ಕೂಟದಲ್ಲಿ ಮತ್ತು ವಸಾಹತುಶಾಹಿಯಿಂದ ಹೊರ ಬರುತ್ತಿದ್ದ ಬಹುತೇಕ ದೇಶಗಳಲ್ಲಿ ಸರ್ಕಾರದ ಮತ್ತು ಶಿಕ್ಷಣಕ್ಷೇತ್ರದ ನಾಯಕರು ಆಧುನಿಕ ಶೈಕ್ಷಣಿಕ ವ್ಯವಸ್ಥೆಯ ಧೋರಣೆಗೆ ಮರಳುವುದರ ಮೂಲಕ ಈ ಎರಡನೆಯ ಸಂಧಿಗ್ದಕ್ಕೆ ಪ್ರತಿಕ್ರಯಿಸಿದರು. ಈ ಸಂಧಿಗ್ದಕ್ಕೆ ಸೋವಿಯತ್ ಒಕ್ಕೂಟದ ಮತ್ತು ಇನ್ನೂ ಕೆಲವರ ಪ್ರತಿಕ್ರಿಯೆ ಹೇಗಿತ್ತೆಂದರೆ ಅದರ ಫಲವಾಗಿ ಸುಧಾರಣೆಯನ್ನು ಕೈ ಬಿಡಲಾಯಿತು ಮತ್ತು ಕೆಲವೇ ಕೆಲವು ಅಸಾಧಾರಣವಾದ ಶೈಕ್ಷಣಿಕ ಸಮಾನತೆಗೆ ಒತ್ತು ಕೊಡುತ್ತಿದ್ದಂತಹ ಸಂಸ್ಥೆಗಳನ್ನು ಉಳಿಸಿಕೊಳ್ಳಲಾಯಿತು (ಉದಾಹರಣೆಗೆ ಸೋವಿಯತ್ ಮಕ್ಕಳ ಅರಮನೆಗಳು) ಮತ್ತು ಅಭಿವೃದ್ಧಿಗಾಗಿ ಶಿಕ್ಷಣ ಎಂಬುದಕ್ಕೆ ಒತ್ತು ನೀಡುವಂತಹ ಕೆಲವು ಸಂಸ್ಥೆಗಳನ್ನು ಉಳಿಸಿಕೊಂಡು (ಉದಾಹರಣೆಗೆ ಮಹಿಳಾ ವೈದ್ಯರು) ತನ್ಮೂಲಕ ಪಾಶ್ಚಿಮಾತ್ಯ ಕೈಗಾರಿಕಾ ದೇಶಗಳ ಶಿಕ್ಷಣದಿಂದ ತಮ್ಮ ಪದ್ಧತಿಯನ್ನು ವಿಭಿನ್ನ ಎಂದು ತೋರಿಸಿಕೊಳ್ಳಲಾಯಿತು [102].

ಚೀನಾ ಮತ್ತು ಕ್ಯೂಬಾದ ಪ್ರಭುತ್ವಗಳು ಇಲ್ಲಿ ತಮ್ಮ ಮಿತಿಯ ಗೆರೆಯನ್ನು ರಚಿಸಿಕೊಂಡು ವಿಭಿನ್ನವಾದವು. 1967 ರವರೆಗೂ ಶಿಕ್ಷಣ ಸುಧಾರಣೆಯ ಚಳುವಳಿಗಳು ಚೀನಾ ಮತ್ತು ಕ್ಯೂಬಾ ದಲ್ಲಿ ಸೋವಿಯತ್ ಒಕ್ಕೂಟದ ಆರಂಭಿಕ ಕಾಲದ ಆಂದೋಲನಕ್ಕಿಂತ ಅಥವಾ ವಸಾಹತುಶಾಹಿಯಿಂದ ಹೊರಗೆ ಬರುತ್ತಿದ್ದ ದೇಶಗಳಲ್ಲಿನ ಸಮಕಾಲೀನ ಆಂದೋಲನಗಳಿಗಿಂತ ಮೂಲಭೂತವಾಗಿ ಭಿನ್ನವಾಗಿರಲಿಲ್ಲ. ಆದರೆ 1967 ರಲ್ಲಿ ಮಾವೋ ಅವರು ಸಾಂಸ್ಕೃತಿಕ ಕ್ರಾಂತಿಯನ್ನು ಆರಂಭಿಸುವ ಆಯ್ಕೆಯನ್ನು ಮಾಡಿಕೊಂಡರು. ಅದು ಜಾಗತಿಕ ಮಟ್ಟದಲ್ಲಿ ಸ್ಪರ್ಧೆಯ ಕ್ಷಣವಾಗಿದ್ದು ಮರು ವರ್ಷದಲ್ಲಿ ಅದು ಇನ್ನೂ ಹೆಚ್ಚು ನಿಚ್ಚಳವಾಗಿ ಕಾಣಿಸಿಕೊಂಡಿತು. ಈ ಕ್ರಮದ ಮೂಲಕ ಮಾವೋ ಅವರು ಶಿಕ್ಷಣ

ಕ್ಷೇತ್ರದ ದ್ವಂದ್ವಗಳಿಗೆ ಶರಣಾಗಬೇಕೆನ್ನುವ ಒತ್ತಡಗಳ ವಿರುದ್ಧದ ಪ್ರತಿರೋಧಕ್ಕೆ ಉತ್ತೇಜನ ನೀಡಿದರು. ನಾವು ಯಾವುದನ್ನು "ಕಮ್ಯುನಿಸಂಗಾಗಿ ಶಿಕ್ಷಣ" ಎಂಬುದರ ಮುನ್ನೋಟ/ಕಾಣ್ಕೆ (vision) ಎಂದು ಕರೆಯುತ್ತೇವೆಯೋ ಅದು ಈ ಸಂದರ್ಭದಲ್ಲಿ ಚೀನಾದಲ್ಲಿ ಮತ್ತು ಅಲ್ಪಕಾಲದಲ್ಲಿಯೇ ಕ್ಯೂಬಾದಲ್ಲಿ ಕಾಣಿಸಿಕೊಂಡಿತು [103]. "ಕಮ್ಯುನಿಸಂಗಾಗಿ ಶಿಕ್ಷಣ" ಎಂಬುದರ ತಿರುಳು ಏನೆಂದರೆ, ಅಸ್ತಿತ್ವದಲ್ಲಿರುವ ಸಾಮಾಜಿಕ ಭೇದ ಭಾವವನ್ನು ಬಲಪಡಿಸುವ ಬದಲು, ಒಂದು ವರ್ಗ ರಹಿತ ಸಮುದಾಯವನ್ನು ಸೃಷ್ಟಿಸಲು—ಕಮ್ಯುನಿಸ್ಟ್ ಸಮಾಜದ ಅತ್ಯಂತ ಅವಶ್ಯಕ ಲಕ್ಷಣ ಇದು—ಶಿಕ್ಷಣವು ಒಂದು ಸಾಧನ ಎಂದು ಪರಿಗಣಿಸುವುದು. ಎರಡೂ ದೇಶಗಳಲ್ಲಿನ ಸರ್ಕಾರಗಳು ಒಂದು ಅನನ್ಯವಾದ ಮಾದರಿಯಲ್ಲಿ ಆರ್ಥಿಕ ದಕ್ಷತೆಯನ್ನು ಉತ್ತಮಪಡಿಸಲು ಅಧಿಕಾರಿಗಳ, ನಿರ್ವಹಣಾ ವರ್ಗದ ಮತ್ತು ತಂತ್ರಜ್ಞರ ವರ್ಗದ ಶ್ರೇಣೀಕರಣದ ಪುನಸ್ಥಾಪಿಸುವಿಕೆಯನ್ನು ಪ್ರತಿರೋಧಿಸಿದವು. ಬದಲಿಗೆ ಅವರು ಸಾಮಾಜಿಕ ಸಮಾನತೆ ಮತ್ತು ಕ್ರಾಂತಿಕಾರಿ ಪ್ರಜ್ಞೆಯ ತಿಳುವಳಿಕೆಯನ್ನು ಉತ್ತಮಪಡಿಸಿ ಉತ್ಪಾದನೆಯನ್ನು ವಿಸ್ತರಿಸುವ ಪ್ರಯತ್ನಗಳಿಗೆ ತಮ್ಮ ಸಂಪೂರ್ಣ ಬೆಂಬಲವನ್ನು ನೀಡಿದವು. ಎರಡೂ ದೇಶಗಳಲ್ಲಿನ ಸರ್ಕಾರಗಳು ಒಂದು ಅನನ್ಯವಾದ ರೀತಿಯಲ್ಲಿ ಉತ್ಪಾದನೆಯ ಗುರಿಗಳನ್ನು ತಲುಪಲು ಸಮಾಜದಲ್ಲಿ ಶ್ರೇಣಿಕರಣವನ್ನು ಮತ್ತೆ ಸ್ಥಾಪಿಸಬೇಕು ಎಂಬ ಯತ್ನವನ್ನು ಪ್ರತಿರೋಧಿಸಿದರು. ಬದಲಾಗಿ ಅವರು ಸಾಮಾಜಿಕ ಸಮಾನತೆ ಯನ್ನು ಸಮರ್ಥಿಸುವ ಮತ್ತು ಏಕಕಾಲದಲ್ಲಿ ಕ್ರಾಂತಿಯನ್ನು ಮುಂದುವರಿಸುವ ಪ್ರಯತ್ನಗಳನ್ನು ತೀವ್ರಗೊಳಿಸುತ್ತಾ ಅದರ ಮೂಲಕ ಉತ್ಪಾದನೆಯ ವಿಸ್ತರಣೆಯನ್ನು ಸಾಧಿಸುವ ಪ್ರಯತ್ನಕ್ಕೆ ಪೂರ್ಣ ಬೆಂಬಲವನ್ನು ಒದಗಿಸಿದರು. ಈ ಒಂದು ತೀವ್ರಗಾಮಿಯಾದ ಸಾಮಾಜಿಕ ಮತ್ತು ರಾಜಕೀಯ ಯೋಜನೆಯ ಅಗತ್ಯ ಭಾಗವಾಗಿ ಈ ಸರ್ಕಾರಗಳು ಶಾಲೆಗಳು ಪ್ರತ್ಯೇಕ ಸಂಸ್ಥೆಗಳಾಗಿರುವುದನ್ನು ತೊಡೆದು ಅವುಗಳನ್ನು ಕೆಲಸದ ಘಟಕಗಳಲ್ಲಿ ವಿಲೀನಗೊಳಿಸಿದವು. ಒಂದು ಸಾಮಾಜಿಕ ಆಂದೋಲನದ ಭಾಗವಾಗಿ ಕಲಿಕೆಯು ನಡೆಯಬೇಕಿತ್ತು. ಈ ದೃಷ್ಟಿಕೋನವು ಎರಡೂ ಆಂದೋಲನಗಳಲ್ಲಿ ಕಂಡು ಬಂದ ತೀವ್ರತೆಯನ್ನು, ಮತ್ತು ಅವುಗಳ ಸಹಮತವನ್ನು ಅರ್ಥ ಮಾಡಿಕೊಳ್ಳಲು ನೆರವಾಗುತ್ತದೆ. ಈ ದೃಷ್ಟಿಕೋನದಲ್ಲಿ ಶಿಕ್ಷಣದ ಉದ್ದೇಶವು ಸಮಾನತೆ ಮತ್ತು ಅಭಿವೃದ್ಧಿಯ ನಡುವೆ ಆಯ್ಕೆ ಮಾಡಿಕೊಳ್ಳಬೇಕು ಎಂಬ ತಿಳುವಳಿಕೆಯ ಮಿತಿಯನ್ನು ಮೀರುವುದಾಗಿರುತ್ತದೆ. ಅಂಥ ಶಿಕ್ಷಣವು ಒಂದು ಬದಲಾದ ಸಮಾಜವನ್ನು ಸೃಷ್ಟಿಸಿ ಅದರಲ್ಲಿ ಜನತೆಯ ಸಾಮೂಹಿಕ ಸಂಕಲ್ಪ ಮತ್ತು ಉತ್ಸಾಹಗಳಿಂದ ಹೊಸ ನೈತಿಕತೆಯನ್ನು ಸೃಷ್ಟಿಸಿ ತನ್ಮೂಲಕ ಉತ್ಪಾದನೆಯಲ್ಲಿ ಜಿಗಿತವನ್ನು ಸಾಧಿಸುತ್ತದೆ. ಒಂದು ಬಂಡವಾಳಶಾಹಿ ಸಮಾಜದೊಂದಿಗೆ ಸಂಘರ್ಷವಿಲ್ಲದೆ ಇದ್ದುಬಿಡುವ ಅಥವಾ ಅವರನ್ನು ತಲುಪಲು ಯತ್ನಿಸುವ ಬದಲು ಇದು ಅದನ್ನು ಮೀರುವ ಪ್ರಯತ್ನವಾಗುತ್ತದೆ.

ಚೀನಾ ಮತ್ತು ಕ್ಯೂಬಾದ ನಾಯಕರು ಶಿಕ್ಷಣದ ಕುರಿತಾದ ಈ ನಿರ್ದಿಷ್ಟ ಧೋರಣೆಯನ್ನು ಮೂರು ಪರಿಕಲ್ಪನೆಗಳ ಗುಚ್ಛ ದೊಂದಿಗೆ ಅಭಿವ್ಯಕ್ತಿಸಿದರು. ಮೊದಲನೆಯದಾಗಿ ಅವರು ಒಂದು ರೀತಿಯ ಜನಪ್ರಿಯವಾದ ಬುದ್ಧಿಜೀವಿ ವಿರೋಧಿ ಮನೋಭಾವವನ್ನು ಹೊಂದಿದ್ದು ಬುದ್ಧಿಜೀವಿಗಳ ವೈಚಾರಿಕ

ನಿರೂಪಣೆಗಳನ್ನು ಮಾತ್ರವಲ್ಲದೆ ಅವರ ಜ್ಞಾನದ ಸತ್ಯತೆಯನ್ನು ಕೂಡ ಸಂಶಯಿಸಿದರು. ಬುದ್ಧಿಜೀವಿಗಳ ಕುರಿತಾದ ಈ ಅಪನಂಬಿಕೆಯಿಂದಾಗಿ ಈ ನಾಯಕರು ಸಾಂಸ್ಥಿಕ ಶಿಕ್ಷಣವನ್ನೇ ಅಲ್ಲಗಳೆದರು. ಅದು ಬುದ್ಧಿಜೀವಿಗಳನ್ನು ಬೆಳೆಸುವ ಕ್ಷೇತ್ರ ಎಂದು ವಾದಿಸಿದರು. ಈ ಅಭಿಪ್ರಾಯದ ಪ್ರಕಾರ ಅಸ್ತಿತ್ವದಲ್ಲಿರುವ ಶೈಕ್ಷಣಿಕ ವ್ಯವಸ್ಥೆಯ ಸಮಸ್ಯೆಯು ಅದು ಬೇರೆ ದೇಶಗಳಿಗಿಂತ ಹಿಂದುಳಿದಿತ್ತು ಎಂಬುದು ಮಾತ್ರವಲ್ಲದೆ ಅದು ಕ್ರಾಂತಿಯ ಮುಂದುವರಿಕೆಗೆ ಅಡ್ಡವಾಗಿತ್ತು ಎಂಬುದು. ಎರಡನೆಯದಾಗಿ, ಮಾವೋ, ಕ್ಯಾಸ್ಟ್ರೋ ಮತ್ತು ಇತರ ನಾಯಕರು ಅಸ್ತಿತ್ವದಲ್ಲಿರುವ ಶಿಕ್ಷಣ ವ್ಯವಸ್ಥೆಯನ್ನು ಅದು ಸಮಾಜದಿಂದ ಪ್ರತ್ಯೇಕಗೊಂಡಿರುವುದು ಎಂದು ಟೀಕಿಸಿದರು. ಮೇಲ್ನೋಟಕ್ಕೆ ಕಂಡುಬರುವ ಪ್ರಶ್ನೆ ಎಂದರೆ ಆ ಶಿಕ್ಷಣ ಪದ್ಧತಿಯು ಸಮಾಜದ ಅವಶ್ಯಕತೆಗಳನ್ನು ಪೂರೈಸುತ್ತದೆಯೋ ಇಲ್ಲವೋ ಎಂಬುದು. ಆದರೆ ಅವರು ಭವಿಷ್ಯದ ಸಮಾಜವು ಎಲ್ಲ ರೀತಿಯ ಉದ್ಯಮಗಳು, ವೃತ್ತಿಗಳು ಒಂದು ಬೃಹತ್ತಾದ ಕಮ್ಯೂನ್ ನಲ್ಲಿ ಏಕೀಭವಿಸುತ್ತದೆ ಎಂದು ಭಾವಿಸಿದ್ದರು. ಹಾಗಾದಾಗ, ಸಾಂಸ್ಥಿಕ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವ ಮೊಟ್ಟಮೊದಲ ಚಟುವಟಿಕೆ ಎಂದರೆ ಶಿಕ್ಷಣ ಎಂದಾಯಿತು. ಅದೇ ಸಮಯದಲ್ಲಿ ಸೋವಿಯತ್ ಸಮಾಜದಲ್ಲಿ ವಿಶೇಷ ಜ್ಞಾನಕ್ಕೆ, ಶಿಸ್ತು ಮತ್ತು ವೃತ್ತಿಯಲ್ಲಿ ಶ್ರೇಷ್ಠತೆಗೆ ಗಮನವಿದ್ದರೆ, ಅದಕ್ಕಿಂತ ಭಿನ್ನವಾಗಿ ಈ ಎರಡು ದೇಶಗಳಲ್ಲಿ ಭವಿಷ್ಯತ್ತಿನ ಸಮಾಜದ ಕುರಿತಾದ ಭವ್ಯವಾದ ಮುನ್ನೋಟವೇ ಶೈಕ್ಷಣಿಕ ಕ್ರಾಂತಿಗಳ ಚಾಲಕ ಶಕ್ತಿಯಾಗಿತ್ತು. ಕೊನೆಯ ಅಂಶವೆಂದರೆ, ಆಯಾ ದೇಶಗಳಲ್ಲಿ ಕ್ರಾಂತಿಯ ಉತ್ತರಾಧಿಕಾರಿಗಳು ಯಾರಾಗುತ್ತಾರೆ ಹಾಗೂ "ಹೊಸ ಮನುಷ್ಯ" ಎಂದರೇನು ಎಂಬುದರ ಕುರಿತು ಚೀನಾ ಮತ್ತು ಕ್ಯೂಬಾಗಳಲ್ಲಿ ಇದ್ದ ಗ್ರಹಿಕೆಯು ಮಾವೋವಾದಿ ಮತ್ತು ಕ್ಯಾಸ್ಟ್ರೋವಾದಿ ಶೈಕ್ಷಣಿಕ ಚಿಂತನೆ ಮತ್ತು ಕಾರ್ಯವಿಧಾನದ ಮೇಲೆ ಗಾಢವಾದ ಪರಿಣಾಮವನ್ನು ಹೊಂದಿತ್ತು[104]. ಚೀನಿಯರು ಮತ್ತು ಕ್ಯೂಬನ್ನರ ಪ್ರಕಾರ ಸೋವಿಯತ್ ಶಿಕ್ಷಣವು ಕೇವಲ ಅತ್ಯಂತ ವಿಶೇಷ ಜ್ಞಾನದ ಮತ್ತು ಸವಲತ್ತುಗಳನ್ನೊಳಗೊಂಡ ಅಧಿಕಾರಶಾಹಿಯ ಹಾಗೂ ತಂತ್ರಜ್ಞಾನಶಾಹಿಯ ಬೆಳವಣಿಗೆಗೆ ಒತ್ತು ನೀಡಿತ್ತು. ಸೋವಿಯತ್ ಒಕ್ಕೂಟದಿಂದ ದೊರೆತ ಈ ಪಾಠದ ಬಗ್ಗೆ ಜಾಗರೂಕರಾದ ಮಾವೋರವರನ್ನು ೧೯೫೦ರಿಂದಲೂ ಕೂಡ ಕ್ರಾಂತಿಕಾರಿ ಉತ್ತರಾಧಿಕಾರಿಗಳನ್ನು ಬೆಳೆಸುವ ವಿಷಯವು ಕಾಡಲಾರಂಭಿಸಿತು ಮತ್ತು ಮುಂದಿನ ದಶಕದಲ್ಲಿ ಅದೇ ಅವರ ಆದ್ಯತೆಯಾಯಿತು. ಇತ್ತ ಕ್ಯೂಬಾ ದಲ್ಲಿ ಕ್ಯಾಸ್ಟ್ರೋ ಮತ್ತು ಚೆಗೆವಾರ ಅವರು ಕ್ಯೂಬಾದ ತರುಣರನ್ನು "ಹೊಸ ಮನುಷ್ಯ"ನ ತಲೆಮಾರು ಆಗಿ ರೂಪಿಸಬೇಕೆಂದು ಕರೆ ನೀಡಿದರು. ಅದಕ್ಕನುಗುಣವಾಗಿ ಎರಡು ದೇಶಗಳ ಶಿಕ್ಷಣದ ಧ್ಯೇಯವು ಸೋವಿಯತ್ ವ್ಯವಸ್ಥೆಯ ಉದ್ದೇಶಕ್ಕೆ ಸಂಪೂರ್ಣವಾಗಿ ವಿರುದ್ಧವಾಯಿತು.

ಅದೇನೆ ಇರಲಿ, ಇದರ ಫಲವೇನೆಂದರೆ ಆ ಪ್ರಯೋಗಗಳು ಕುಸಿತವನ್ನು ಕಂಡವು ಮತ್ತು ಆಧುನಿಕ ಶಿಕ್ಷಣವು ಪುನರ್ ಸ್ಥಾಪಿಸಲ್ಪಟ್ಟಿತು. ಎಲ್ಲ ಪ್ರಕರಣಗಳಲ್ಲಿಯೂ ಸಮಾನತೆಗಾಗಿ ಶಿಕ್ಷಣ ಮತ್ತು ಅಭಿವೃದ್ಧಿಗಾಗಿ ಶಿಕ್ಷಣ ಇವುಗಳ ಮಧ್ಯದ ಸಂಘರ್ಷಗಳು ಅಂತಿಮವಾಗಿ ರಾಷ್ಟ್ರೀಯ ನಾಯಕತ್ವಗಳು ಸುಧಾರಣಾರಹಿತವಾದ ಆಧುನಿಕ ಶಿಕ್ಷಣ ಪದ್ಧತಿಯನ್ನು ಪುನರ್ ಸ್ಥಾಪಿಸುವಂತೆ ಮಾಡಿದವು. ಇನ್ನು

ಟಾನ್ಜೇನಿಯ ಮಟ್ಟಿಗೆ ಹೇಳಬೇಕೆಂದರೆ ಅಂತಹ ಒಂದು ಶಿಕ್ಷಣದ ಸರ್ವಾಂಗೀಣವಾದ ತೀವ್ರಗಾಮಿ ಬದಲಾವಣೆಯನ್ನು ಕೈಗೆತ್ತಿಕೊಳ್ಳುವಂತಹ ಸರ್ಕಾರ ಅಲ್ಲಿರಲಿಲ್ಲ. ನಿಕರಾಗುವಾದಲ್ಲಿ ಸರ್ಕಾರದ ಅಧಿಕಾರಕ್ಕೆ ಮಿತಿ ಇದ್ದು ಅದು ಕೇವಲ 1979ರಲ್ಲಿ ಆಳ್ವಿಕೆಗೆ ಬಂದಿದ್ದು ಅಷ್ಟು ಹೊತ್ತಿಗಾಗಲೇ ಕ್ಯೂಬಾ ಮತ್ತು ಚೀನಾದ ಶೈಕ್ಷಣಿಕ ಕ್ರಾಂತಿಗಳನ್ನು ಅವರೇ ಕೈಬಿಟ್ಟಿದ್ದರು. ಆದ್ದರಿಂದ ಕ್ಯೂಬಾದಿಂದ ನಿಕರಾಗುವಾಗೆ ದೊರೆತ ಶೈಕ್ಷಣಿಕ ನೆರವು ಮುಖ್ಯವಾಗಿ ಅಭಿವೃದ್ಧಿಗಾಗಿ ಶಿಕ್ಷಣ ಎಂಬ ಮಾದರಿಗೆ ಅನುಗುಣವಾಗಿತ್ತು.

ಕೆಲವೇ ವರ್ಷಗಳ ಮಟ್ಟಿಗಾದರೂ ಚೀನಾ ಮತ್ತು ಕ್ಯೂಬಾ ಗಳು ಒಂದು ಅಪವಾದವಾಗಿದ್ದವು. ಅಭಿವೃದ್ಧಿ ಮತ್ತು ಸಮಾನತೆಯ ನಡುವೆ ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬ ಸಂದಿಗ್ಧತೆಯನ್ನು ಎದುರಿಸಿದ್ದ ಈ ಎರಡೂ ಆಳ್ವಿಕೆಗಳು ಶ್ರೀಮಂತರ ಪರವಾದ ಆಧುನಿಕ ಶಿಕ್ಷಣ ಪದ್ಧತಿಗೆ ಹೊರಳುವ ಅಪಾಯಗಳನ್ನು ತಪ್ಪಿಸಿಕೊಳ್ಳಬೇಕು ಎಂದು ಆಶಿಸುತ್ತಾ, 1920ರ ದಶಕದಲ್ಲಿ ಸೋವಿಯತ್ ಒಕ್ಕೂಟದಲ್ಲಿ ಧ್ವನಿಸಲ್ಪಟ್ಟಿದ್ದ ತೀವ್ರಗಾಮಿಯಾಗಿದ್ದ ಶೈಕ್ಷಣಿಕ ಬದಲಾವಣೆಯ ಪ್ರತಿಪಾದನೆಗಳನ್ನು ಜಾರಿಗೆ ತರಲು ಹೊರಟಿದ್ದವು. ಕ್ಯೂಬಾದ ಶೈಕ್ಷಣಿಕ ಆಂದೋಲನವು 1967 ರಿಂದ 1971 ರವರೆಗೆ ನಡೆದಿದ್ದರೆ, ಚೀನಾದ ಆಂದೋಲನವು 1967 ರಿಂದ 76ರವರೆಗೆ ನಡೆದಿತ್ತು. ಮಧ್ಯಂತರದಲ್ಲಿ ಈ ಎರಡು ಆಳ್ವಿಕೆಗಳು ಸಹ ಶಿಕ್ಷಣವನ್ನು ಸಾಂಸ್ಥೀಕರಣದಿಂದ ಹೊರಗೆ ತರಲು ಮತ್ತು "ಕಮ್ಯುನಿಸಂಗಾಗಿ ಶಿಕ್ಷಣ" ಎಂಬ ವಿಶಾಲವಾದ ಚೌಕಟ್ಟಿನ ಅಡಿಯಲ್ಲಿ ಶಿಕ್ಷಣವನ್ನು ಸ್ಥಾಪಿಸಲು ಪ್ರಯತ್ನಿಸಿದ್ದವು.

ಶೈಕ್ಷಣಿಕ ಸುಧಾರಣೆಯನ್ನು ಅರ್ಥಮಾಡಿಕೊಳ್ಳುವ ಸಮಸ್ಯೆಗೆ ಎಂದಿಗೂ ಸಹ ಸಂಪೂರ್ಣ ಪರಿಹಾರವು ದೊರಕದೇ ಹೋಗಬಹುದು; ಏಕೆಂದರೆ ಅದು ಎರಡು ಶತಮಾನಗಳಿಗೂ ಮೀರಿದ ಅವಧಿಗೆ ಹರಡಿಕೊಂಡಿದ್ದು, ಅನೇಕ ರಾಷ್ಟ್ರೀಯ ಮತ್ತು ಸಾಂಸ್ಕೃತಿಕ ಗಡಿಗಳೊಳಗೆ ಪ್ರವೇಶಿಸುತ್ತಾ, ಎಷ್ಟೊಂದು ವಿಭಿನ್ನವಾದ ಸಾಮಾಜಿಕ ಚಳುವಳಿ ಮತ್ತು ಬೌದ್ಧಿಕ ಪರಂಪರೆಗಳಿಗೆ ಸಂಬಂಧಿಸಿರುತ್ತದೆ. ಆದರೆ ಒಂದು ಸಂಗತಿಯನ್ನು ನಾವು ಹೇಳಬಹುದು: ಎಲ್ಲಿಯವರೆಗೂ ಶೈಕ್ಷಣಿಕ ವಿವಾದಗಳು ಮತ್ತು ವೈರುಧ್ಯಗಳು ಪರಿಹಾರವಿಲ್ಲದೆ ಇರುತ್ತವೆಯೋ, ಶೈಕ್ಷಣಿಕ ನೀತಿಯಲ್ಲಿನ ಕರ್ಷಣಗಳು ಮತ್ತು ಏರಿಳಿತಗಳು ಮುಂದುವರಿಯುತ್ತವೆಯೋ ಅಲ್ಲಿಯವರೆಗೂ ಸುಧಾರಣಾ ಆಂದೋಲನಗಳ ಆವರ್ತವು ಅನೇಕ ಸ್ವರೂಪಗಳಲ್ಲಿ ಮರುಕಳಿಸುತ್ತಿರುತ್ತದೆ.

ಸೋವಿಯತ್ ಒಕ್ಕೂಟ ಚೀನಾ ಮತ್ತು ಕ್ಯೂಬಾ ಅದೇ ರೀತಿಯಲ್ಲಿ ಬೃಹತ್ ಪ್ರಮಾಣದಲ್ಲಿ ಶೈಕ್ಷಣಿಕ ಬದಲಾವಣೆಗಳನ್ನು ತರಲು ಪ್ರಯತ್ನಿಸಿದ ಇತರ ದೇಶಗಳೆಲ್ಲವೂ ಸಹ ಅಸಾಧಾರಣವಾದ ಶೈಕ್ಷಣಿಕ ಮುನ್ನಡೆಗಳನ್ನು ಸಾಧಿಸಿದವು. ಆದರೆ ಆಧುನಿಕ ಶಿಕ್ಷಣದ ಮೂಲಭೂತ ವೈರುಧ್ಯಗಳಿಗೆ ವಾಸ್ತವವಾದ ಪರಿಹಾರಗಳನ್ನು ಕಂಡುಕೊಳ್ಳುವಲ್ಲಿ ವಿಫಲವಾದವು. ಬದಲಿಗೆ ಅವುಗಳಲ್ಲಿಯ ಕ್ರಾಂತಿಗಳು ನಿಜಕ್ಕೂ ಶಿಕ್ಷಣದ ಸಾಂಸ್ಥಿಕ ಆಯಾಮಗಳನ್ನು ದುರ್ಬಲಗೊಳಿಸಿದವು ಮತ್ತು ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದಂತೆ ಋಣಾತ್ಮಕವಾದ ಮತ್ತು ಹಾನಿಕಾರಕವಾದ ಪರಿಣಾಮಗಳನ್ನು ಉಂಟು

ಮಾಡಿದವು. ಈ ಅರ್ಥದಲ್ಲಿ ಅವರ (ಆ ದೇಶಗಳ) ಪ್ರಯತ್ನಗಳು ಮತ್ತು ವೈಫಲ್ಯಗಳು ಸಮಾನತೆ ಮತ್ತು ದಕ್ಷತೆ ಹಾಗೂ ಸುಧಾರಣೆ ಮತ್ತು ಪರಂಪರೆ ಇವುಗಳ ನಡುವೆ 20ನೆಯ ಶತಮಾನ ಕಂಡ ವಿಶಾಲವಾದ ಸಂದಿಗ್ಧತೆಯ ಭಾಗವಾಗಿದೆ. ತತ್ವಶಃ ಅವೆಲ್ಲವೂ ಅಪೇಕ್ಷಣೀಯವೇ. ಆದರೆ ವಾಸ್ತವ ಕಾರ್ಯಾಚರಣೆಯಲ್ಲಿ ಅನೇಕ ಬಾರಿ ಅವು ಒಂದು ಇನ್ನೊಂದರೊಂದಿಗೆ ಸಂಘರ್ಷಕ್ಕಿಳಿಯುವಂತಾಗುತ್ತದೆ. ಈ ಎರಡು ವೈರುಧ್ಯಗಳು ಅಥವಾ ಸಂದಿಗ್ಧಗಳ ನಡುವೆ ಸೂಕ್ತ ಸಮತೋಲನವನ್ನು ಕಂಡುಕೊಳ್ಳುವಂತಹ ಉದಾಹರಣೆಗಳು ಅಪರೂಪವಾಗಿದ್ದರೆ, ವಿಫಲವಾದ ಮತ್ತು ವಿನಾಶಕಾರಿಯದ ತೀವ್ರಗಾಮಿ ಬದಲಾವಣೆಗಳ ನಿದರ್ಶನಗಳು ಬೇಕಾದಷ್ಟಿವೆ. ಎಲ್ಲೆಡೆಯಲ್ಲಿನ ಶೈಕ್ಷಣಿಕ ಕ್ರಾಂತಿಗಳು ಅಥವಾ ಪ್ರಯೋಗಗಳನ್ನು ಈ ದೃಷ್ಟಿಯಿಂದ ನೋಡಿದಾಗ, ಅವು ಲೋಲಕವು ಎರಡು ಅಂತ್ಯಬಿಂದುಗಳ ನಡುವೆ ಓಲಾಡುವುದಕ್ಕೆ ಅತ್ಯಂತ ಆಧಾರಪೂರ್ವಕ ಉದಾಹರಣೆಗಳನ್ನು ಒದಗಿಸುತ್ತವೆ.

—----------+------

ಅಡಿ ಟಿಪ್ಪಣಿಗಳು

—-------+

1. ಹರ್ಬರ್ಟ್ ಎಲ್ ಮ್ಯಾಥ್ಯೂಸ್, ರೆವಲ್ಯೂಷನ್ ಇನ್ ಕ್ಯೂಬಾ: ಆನ್ ಎಸ್ಸೆ ಇನ್ ಅಂಡಸ್ಟ್ಯಾಂಡಿಂಗ್ (ನ್ಯೂಯಾರ್ಕ್: ಚಾರ್ಲ್ಸ್ ಸ್ಕ್ರಿಬ್ನರ್ಸ್ ಸನ್ 1975) ಪುಟ 193.

2. ಚೀನಾ ಮತ್ತು ಕ್ಯೂಬಾದ ನಡುವೆ 1960ರ ದಶಕದಲ್ಲಿ ಇದ್ದಂತಹ ಹೋಲಿಕೆಗಳ ಬಗ್ಗೆ ಅಮೆರಿಕದಲ್ಲಿನ ವಿದ್ವಾಂಸರು ಸುಮಾರಾಗಿ ಗಮನ ನೀಡಿದ್ದಾರೆ. ಉದಾಹರಣೆಗೆ ಕಾರ್ಮೆಲೋ ಮೆಸಾ ಲಾಗೊ(Carmela Mesa-Lago) ಅವರು ಸೋವಿಯತ್ ಒಕ್ಕೂಟಕ್ಕಿಂತ ಭಿನ್ನವಾಗಿ ಈ ಎರಡು ದೇಶಗಳನ್ನು ಒಂದು ಗುಂಪಾಗಿರಿಸಿ ಈ ಎರಡು ದೇಶಗಳಲ್ಲಿನ ಸಮಾನ ಅಂಶಗಳನ್ನು ತೋರಿಸುತ್ತಾರೆ: ಸೈದ್ಧಾಂತಿಕ ಬೆಳವಣಿಗೆಗೆ (ಹೊಸ ಮನುಷ್ಯನ ಸೃಷ್ಟಿ ಎಂಬ ಗುರಿ, ವರ್ಗರಹಿತ ಸಮಾಜ, ನ್ಯಾಯಪರ ಸಮಾನತೆ ಇತ್ಯಾದಿ) ಒತ್ತು ನೀಡಲಾಗಿರುವುದನ್ನು, ಆಂದೋಲನಕ್ಕಾಗಿ ಜನರನ್ನು ಸೇರಿಸುವ ಆಳ್ವಿಕೆ, ಮಾರುಕಟ್ಟೆ ವಿರೋಧಿ ಧೋರಣೆಗಳು". ಈ ಎರಡು ದೇಶಗಳಲ್ಲಿನ "ಸಾಂಸ್ಕೃತಿಕ ಕ್ರಾಂತಿ" ಮತ್ತು "ಕ್ರಾಂತಿಕಾರಿ ಆಂದೋಲನ" ಇವೆರಡು ಹೆಚ್ಚು ಕಡಿಮೆ ಹೋಲುತ್ತವೆ ಎಂದು ಅವರು ಹೇಳುತ್ತಾರೆ. "ಕಾರ್ಮೆಲ ಮೆಸಾ ಲಾಗೋ, ಏ ಕಂಟಿನ್ಯೂಯಂ ಮಾಡೆಲ್ ಫಾರ್ ಗ್ಲೋಬಲ್ ಕಂಪ್ಯಾರಿಸನ್", *ಕಂಪ್ಯಾರಿಟಿವ್ ಸೋಶಿಯಲಿಸ್ಟ್ ಸಿಸ್ಟಮ್ಸ್ ಆನ್ ಪಾಲಿಟಿಕ್ಸ್ ಅಂಡ್ ಎಕನಾಮಿಕ್ಸ್* ಪುಸ್ತಕದಲ್ಲಿ, ಸಂಪಾದಕರು: ಕಾರ್ಮೆಲೋ ಮೆಸಾ ಲಾಗೊ– (ಪಿಟ್ಸ್ ಬರ್ಗ್, ಯೂನಿವರ್ಸಿಟಿ ಆಫ್ ಪಿಟ್ಸ್ ಬರ್ಗ್ ಮುದ್ರಣಾಲಯ 1975) ಪುಟ 96.

3. ಮ್ಯಾಕ್ಸ್ ಫಿಗುಯೇ ರೋವಾ, ಏಬೆಲ್ ಪ್ರಿಯಟೊ ಮತ್ತು ರಾವುಲ್ ಗಾಲ್ ಗ್ಯೂಟಿಯೆರಸ್, ( 3 Max Figueroa, Abel Prieto, and Raul Gaul Gutierrez,) ಎಜುಕೇಶನಲ್ ಡಿಪಾರ್ಟ್ಮೆಂಟ್ ಸೆಂಟರ್, ಹವಾನ, *ಎಕ್ಸ್ಪರಿಮೆಂಟ್ಸ್ ಅಂಡ್ ಇನ್ನೋವೇಶನ್ಸ್ ಇನ್ ಎಜುಕೇಶನ್*, ಸ್ಟಡಿ ಪ್ರಿಪೇರ್ಡ್ ಫಾರ್ ದಿ

ಇಂಟರ್ನ್ಯಾಷನಲ್ ಬ್ಯೂರೋ ಆಫ್ ಎಜುಕೇಶನ್, ನಂಬರ್ ಏಳು,( ಪ್ಯಾರಿಸ್ ಡಿ ಯುನೆಸ್ಕೋ ಪ್ರೆಸ್ 1974) ಪುಟ 3.

4. ರಾಬರ್ಟ್ ಡಿ ಬ್ಯಾರೆನ್ಡ್ ಸೆನ್ (Robert D. Barendsen, T,) *ದಿ ಎಜುಕೇಶನಲ್ ರೆವೊಲ್ಯೂಷನ್ ಇನ್ ಚೈನಾ* (ವಾಷಿಂಗ್ಟನ್ ಡಿ ಸಿ, ಯು ಎಸ್ ಡಿಪಾರ್ಟ್ಮೆಂಟ್ ಆಫ್ ಹೆಲ್ತ್ ಎಜುಕೇಶನ್ ಅಂಡ್ ವೆಲ್ಫೇರ್, ಯುಎಸ್ ಗೌರ್ಮೆಂಟ್ ಪ್ರಿಂಟಿಂಗ್ ಆಫೀಸ್ 1975) ಪುಟ ಮೂರು

5. ಫಿಗುಯೆರೋವ: *ಎಕ್ಸ್ಪೆರಿಮೆಂಟ್ಸ್ ಅಂಡ್ ಇನ್ನೋವೇಶನ್ಸ್*

6.ಕೇ ಯುವಾನ್ಪೇ (Cai Yuanpei, C): *ಕಲೆಕ್ಟಿವ್ ವರ್ಕ್ಸ್ ಆನ್ ಎಜುಕೇಶನ್* (ಬೀಜಿಂಗ್ :ದ ಪೀಪಲ್ಸ್ ಪಬ್ಲಿಷರ್ಸ್ 1992).

7.ಜೌ ಕುವಾನ್ ಹುವಾ. (Zhou Quanhua), *ದಿ ಎಜುಕೇಶನಲ್ ರೆವೆಲ್ಯುಶನ್ ಇನ್ ದಿ ಕಲ್ಚರಲ್ ರೆವೆಲ್ಯೂಷನ್ (*ಗುವಾಂಗ್ ಜೌ: ಗುವಾಂಗ್ ಡಾಂಗ್ ಎಜುಕೇಶನ್ ಪಬ್ಲಿಷರ್ 1999) ಪುಟ 441.

8. ಈ ಕಾನೂನಿನ ಅಡಿಯಲ್ಲಿ ಕೆಲಸವನ್ನು ಮಾಡಿದಂತಹ ವಿದ್ಯಾರ್ಥಿಗಳು ಹೆಚ್ಚು ಲವಲವಿಕೆಯಿಂದ ಇರುವಂತೆ ಕಾಣುತ್ತಿದ್ದರು ಮತ್ತು ಎಂದೂ ಕೆಲಸಕ್ಕೆ ಹೋಗದಿದ್ದ ಮಕ್ಕಳಿಗಿಂತ ಅಧ್ಯಯನದಲ್ಲಿ ಒಳ್ಳೆಯ ಸಾಧನೆಯನ್ನು ತೋರಿಸಿದರು ಎಂದು ಮಾರ್ಕ್ಸ್ ವಾದಿಸುತ್ತಾರೆ. ನೋಡಿರಿ, ಕಾರ್ಲ್ ಮಾರ್ಕ್ಸ್, *ಕ್ಯಾಪಿಟಲ್* (ನ್ಯೂ ಯಾರ್ಕ್,ದಿ ಮಾಡ್ರನ್ ಲೈಬ್ರರಿ 1936) ಪುಟ 526

9. ಕಾರ್ಲ್ ಮಾರ್ಕ್ಸ್, *ಆನ್ ದಿ ಥರ್ಡ್ ಇಂಟರ್ನ್ಯಾಷನಲ್* ಪುಸ್ತಕದಲ್ಲಿ, ಕಂಪಲ್ಸರಿ ಎಜುಕೇಶನ್, ಕಾರ್ಲ್ ಮಾರ್ಕ್ಸ್, ಲೇಖಕರು ಸಾವುಲ್ ಕೆ ಪೆಡೊವರ್,( ನ್ಯೂಯಾರ್ಕ್, ಮೆಕ್ ಗ್ರಾ ಹಿಲ್ 1973), ಪುಟ 113

10. ಮೋನಾ ಓಝುಫ್ (Mona Ozouf), ", ಲಾ ರೆವಲ್ಯೂಷನ್ ಫ್ರಾಂಕೆ ಎಟ್ ಲಿಡಿ ಲಾ ಹೊಮ್ಮೆ ನೂವೊ (ಎಂದು ಫ್ರೆಂಚ್ ಭಾಷೆಯಲ್ಲಿ), *ದಿ ಫ್ರೆಂಚ್ ರೆವಲ್ಯೂಷನ್ ಅಂಡ್ ದಿ ಕ್ರಿಯೇಶನ್ ಆಫ್ ಮಾಡ್ರನ್ ಪೊಲಿಟಿಕಲ್ ಕಲ್ಚರ್,* ಸಂಪುಟ 2, *ದಿ ಪೊಲಿಟಿಕಲ್ ಕಲ್ಚರ್ ಆಫ್ ದ ಫ್ರೆಂಚ್ ರೆವಲ್ಯೂಷನ್,* ಸಂಪಾದಕರು- ಕಾಲಿನ್ ಲೂಕಾಸ್, (ಆಕ್ಸ್ಫರ್ಡ್, ಪೆರ್ಗಮಾನ್ ಪ್ರೆಸ್ 1988). ಪುಟ 213- 32

11. ಮಾರ್ಟಿನ್ ಎ ಮಿಲ್ಲರ್, *ಕ್ರೊಪೊಟ್ಕಿನ್* (ಚಿಕಾಗೋ: ದ ಯುನಿವರ್ಸಿಟಿ ಆಫ್ ಚಿಕಾಗೋ ಪ್ರೆಸ್ 1976), ಪುಟ 102,ಮೈಕೇಲ್ ಅಲೆಕ್ಸಾಂಡರೊವಿಚ್ ಬಕುನಿನ್, *ದ ಬೇಸಿಕ್ ಬಕುನಿನ್,* ( ಬಫೆಲೊ,ಪ್ರೊಮಿಥಿಯೂಸ್ ಬುಕ್ಸ್ 1992) ಪುಟ 111- 25

12. ಜೇಮ್ಸ್ ಬೌನ್, *ಸೋವಿಯತ್ ಎಜುಕೇಶನ್- ಆಂಟನ್ ಮಕರಂಕೋ ಅಂಡ್ ಇಯರ್ಸ್ ಆಫ್ ಎಕ್ಸ್ಪರಿಮೆಂಟ್,* (ಮ್ಯಾಡಿಸನ್: ಯುನಿವರ್ಸಿಟಿ ವಿಸ್ಕಾನ್ಸಿನ್ ಪ್ರೆಸ್ 1962), ಪುಟ 30- 34.

13. ಜಾರ್ಜ್ ಎಸ್ ಕೌಂಟ್ಸ್, ದಿ ರಿಪ್ಯೂಡಿಯೇಷನ್ ಆಫ್ ಎಕ್ಸ್ಪರಿಮೆಂಟ್, *ದ ಸ್ಟ್ಯಾಲಿನ್ ರೆವಲ್ಯೂಷನ್: ಫೌಂಡೇಶನ್ಸ್ ಆಫ್ ಸೋವಿಯಟ್ ಟೋಟಲಿಟೇರಿಯನಿಸಂ* ಪುಸ್ತಕದಿಂದ, ಸಂಪಾದಕರು-ರಾಬರ್ಟ್ ವಿ

ಡೇನಿಯಲ್ಸ್ (ಲೇಕ್ಸಿಂಗ್ ಟನ್, ಮಾಸ್: ಡಿ.ಸಿ. ಹೀತ್ ಅಂಡ್ ಕಂಪನಿ 1972) ಪುಟ 121. ಪಾಲ್ ಬ್ಲಾನ್ಸ್ ಕಿ ಬಗ್ಗೆ ಹೆಚ್ಚು ತಿಳಿಯಲು ಆತನ "ರಷ್ಯಾ" ಲೇಖನವನ್ನು, *ಎಜುಕೇಶನಲ್ ಇಯರ್ ಬುಕ್ ಆಫ್ ದಿ ಇಂಟರ್ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಟೀಚರ್ಸ್ ಕಾಲೇಜ್* ಎಂಬ ಪುಸ್ತಕದಲ್ಲಿ ಓದಿರಿ, ಸಂಪಾದಕರು ಐ ಎಲ್ ಕಾನ್ಡೆಲ್ (ನ್ಯೂ ಯಾರ್ಕ್: ಕೊಲಂಬಿಯಾ ಯೂನಿವರ್ಸಿಟಿ ಪ್ರೆಸ್ 1927) ಪುಟ 315 - 38.

14. ಅದೇ ಪುಸ್ತಕ ಪುಟ 123

15. ಜೋ ಆನ್ ಬಾಯ್ಡ್ ಸ್ಟನ್ (Jo Ann Boydston) ಸಂ: ಜಾನ್ ಡ್ಯೂಯಿ, *ದಿ ಲೇಟರ್ ವರ್ಕ್ಸ್* (1925 -1953), *ಸಂಪುಟ ಮೂರು*: 1927 -28, (ಕಾರ್ಬನ್ ಡೇಲ್, ಇಲ್ಲಿನೋಯ್ಸ್: ಸದರ್ನ್ ಇಲ್ಲಿನೋಯ್ಸ್ ಯುನಿವರ್ಸಿಟಿ ಪ್ರೆಸ್, 1984), ಪುಟ- 224-41

16. ಕೌಂಟ್ಸ್, 'ರೆಪ್ಯೂಡಿಯೇಶನ್', ಪುಟ 126

17. ಉದಾಹರಣೆಗೆ ಹೇಳಬೇಕೆಂದರೆ 1950ರ ದಶಕದ ಚೀನಾದ ಬುದ್ಧಿಜೀವಿಗಳಿಗೆ, ಸೋವಿಯತ್ ಒಕ್ಕೂಟದಲ್ಲಿ ವೇತನದಲ್ಲಿ ಬೌದ್ಧಿಕ ಮತ್ತು ಭೌತಿಕ ಶ್ರಮಿಕರ ನಡುವೆ ಅಚ್ಚರಿ ಹುಟ್ಟಿಸುವಷ್ಟು ವಿಪರೀತ ಅಂತರವಿತ್ತು ಎಂಬುದು ತಿಳಿದಿತ್ತು. 1956 ರಲ್ಲಿ ಶೈಕ್ಷಣಿಕ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದ ಮನೆವಾರ್ತೆಯವರ, ಪದವೀಧರರ, ಸಹಾಯಕ ವೈದ್ಯರ ಮತ್ತು ವೈದ್ಯರ ಸಂಬಳಗಳು ತಿಂಗಳಿಗೆ ಅನುಕ್ರಮವಾಗಿ 30, 90,240 ಮತ್ತು 480 ರೂಬಲ್ ಗಳಿದ್ದವು. ನೋಡಿರಿ- ಜೌ, *ಎಜುಕೇಶನಲ್ ರೆವ್ಯಲೂಷನ್*, ಪುಟ- 425.

18. ಕೌಂಟ್ಸ್, 'ರೆಪ್ಯುಡಿಯೇಷನ್', ಪುಟ, 123- 25

19. ವೈ ಚೆಂಗ್ಸಿ (Wei Chengsi), ಸಂಪಾದಕರು *ಎಜುಕೇಶನಲ್ ಥಾಟ್ಸ್ ಇನ್ ಕಂಟೆಂಪರರಿ ಚೈನಾ*, 1949–1987 (ಶಾಂಘೈ: ಸ್ಯಾನ್ ಲಿಯಾನ್ ಪಬ್ಲಿಷರ್ಸ್ 1991), ಪುಟ 2; ಚೆನ್ ಯಂಗ್ ಫಾ , ಸೆವೆಂಟಿ ಇಯರ್ಸ್ ಆಫ್ ದಿ ಚೈನೀಸ್ ಕಮ್ಯುನಿಸ್ಟ್ ರೆವೆಲ್ಯೂಷನ್, (ಟೈಬೆ, ಲಿಯಾನ್ ಜಿಂಗ್ ಪಬ್ಲಿಷರ್, 2001), ಪುಟ 669

20. ರಾಲ್ಫ್ ಕ್ರೂಸಿಯರ್ (Ralph Croizier), ", 'ವರ್ಲ್ಡ್ ಹಿಸ್ಟರಿ ಇನ್ ದಿ ಪೀಪಲ್ಸ್ ರಿಪಬ್ಲಿಕ್ ಆಫ್ ಚೈನಾ', ಜರ್ನಲ್ ಆಫ್ ವರ್ಲ್ಡ್ ಹಿಸ್ಟರಿ, 1,ನಂ2, (1990): 155-57

21. ಮಕರೆಂಕೋ (Makarenko)ಎಂಬುವರು ಎಳೆಯ ಮಕ್ಕಳ ವರ್ತನೆಯನ್ನು ಹಾಗೂ ಮನಸ್ಸನ್ನು ರೂಪಿಸುವುದರಲ್ಲಿ ಸಾಮಾಜಿಕ ಪರಿಸ್ಥಿತಿಗಳನ್ನು ಬದಲಾಯಿಸುವ ಪರಿಸರ ವಿಧಾನಗಳಿಗೆ ಸಂಬಂಧಿಸಿದಂತೆ ಸೋವಿಯತ್ ಒಕ್ಕೂಟದಲ್ಲಿ ಪ್ರಸಿದ್ಧ ಆಚಾರ್ಯ ವ್ಯಕ್ತಿಯಾಗಿದ್ದರು. ಅವರ ತರಬೇತಿ ಶಿಬಿರದ ಹೆಸರು ಗಾರ್ಕಿ ಕಾಲೋನಿ. ಕೈರೂವ್ (Kairov) ಎನ್ನುವರು ಇನ್ನೂ ಹೆಚ್ಚಾಗಿ ಸೈದ್ಧಾಂತಿಕ ಶಿಕ್ಷಣ ತಜ್ಞರಾಗಿದ್ದು ಅಕಾಡೆಮಿ ಆಫ್ ಪೆಡಗಾಜಿಕಲ್ ಸೈನ್ಸಸ್ ನ ಅಧ್ಯಕ್ಷರಾಗಿ 1930ರ ದಶಕದಲ್ಲಿ ಕೆಲಸ ಮಾಡುತ್ತಿದ್ದು, ಅನೇಕ ಬೋಧನಾ ಶಾಸ್ತ್ರದ ಪಠ್ಯಪುಸ್ತಕಗಳ ಸಂಪುಟಗಳನ್ನು ಪ್ರಕಟಿಸಿದರು.

22. ರಿಚರ್ಡ್ ಜಾಲಿ, 'ಎಜುಕೇಶನ್: ದಿ ಪ್ರಿ- ರೆವೆಲ್ಯುಶನರಿ ಬ್ಯಾಗ್ರೌಂಡ್' ಇನ್ *ಕ್ಯೂಬಾ: ದಿ ಎಕನಾಮಿಕ್ ಅಂಡ್ ಸೋಶಿಯಲ್ ರೆವೆಲ್ಯುಶನ್* ಎಂಬ ಪುಸ್ತಕದಲ್ಲಿ, ಸಂಪಾದಕರು: ಡಡ್ಲೇ ಸಿಯರ್ಸ್ (ಚಾಪೆಲ್ ಹಿಲ್: ಯೂನಿವರ್ಸಿಟಿ ಆಫ್ ನಾರ್ತ್ ಕೆರೋಲಿನ ಪ್ರೆಸ್, 1964), ಪುಟ 250- 251.

23. 1957ರ ಸುಮಾರಿಗೆ ಚೀನಾ ತನ್ನ ಪಕ್ಷ ಹಾಗೂ ಸರ್ಕಾರಗಳ ಉನ್ನತ ವಲಯಗಳಲ್ಲಿ ಸೋವಿಯತ್ ಮಾದರಿಯನ್ನು ಪುನರ್ ಪರಿಶೀಲಿಸಲು ಆರಂಭಿಸಿತು. ಸ್ಟ್ಯಾಲಿನ್ ಅವರನ್ನು ತೀವ್ರವಾಗಿ ಟೀಕಿಸಿದ ಸೋವಿಯತ್ ಕಮ್ಯುನಿಸ್ಟ್ ಪಕ್ಷದ 20ನೇ ಮಹಾಧಿವೇಶನದ ಪರಿಣಾಮವಾಗಿ ಇದು ಹುಟ್ಟಿಕೊಂಡಿತ್ತು ಮತ್ತು ಚೀನಾದ ಸಮಾಜವಾದವನ್ನು ಕಟ್ಟುವ ಅನುಭವದೊಂದಿಗೆ ಸಹ ಬಂದಿತ್ತು. 1962 ರಲ್ಲಿ ತೀವ್ರವಾದ ಸೈದ್ಧಾಂತಿಕ ವಾಗ್ವಾದ ಆರಂಭವಾದಾಗ ಈ ಎರಡು ಪಕ್ಷಗಳ ನಡುವಿನ ರಾಜಕೀಯ ಭಿನ್ನಾಭಿಪ್ರಾಯಗಳು ಸಾರ್ವಜನಿಕರ ಗಮನಕ್ಕೆ ಬಂದವು. 1961 ರಿಂದ 65 ರ ವರೆಗೂ ಕಾರ್ಮಿಲೋ ಮೆಸ ಲಾಗೋ ವಿವರಿಸುವಂತೆ ಕ್ಯೂಬಾದಲ್ಲಿ ಸೋವಿಯತ್ ಮಾದರಿಯನ್ನು ಪರಿಚಯಿಸಲಾಯಿತು ಮತ್ತು ಪರ್ಯಾಯ ಪದ್ಧತಿಗಳ ಬಗ್ಗೆ ಚರ್ಚಿಸಲಾಯಿತು. ನಂತರ 1966 ರಿಂದ 1970ರ ವರೆಗೆ ಅದೊಂದು' 'ಚೀನಾ - ಚೆಗೆವಾರ ಆದರ್ಶ ಪದ್ಧತಿಯನ್ನು ಇನ್ನಷ್ಟು ತೀವ್ರಗಾಮಿಯಾಗಿಸಿ ಅಳವಡಿಸಿಕೊಂಡ' ಅವಧಿಯಾಗಿತ್ತು. ಕಾರ್ಮೆಲೊ ಮೆಸ -ಲಾಗೊ, 1970ರ ದಶಕದಲ್ಲಿ, *ಪ್ರಾಗ್ಮಾಟಿಸಂ ಅಂಡ್ ಇನ್ಸ್ಟಿಟ್ಯೂಷನಲೈಸೇಶನ್*,(ಅಲ್ಬುಕರ್ಕ್, ಯುನಿವರ್ಸಿಟಿ ಆಫ್ ನ್ಯೂ ಮೆಕ್ಸಿಕೋ ಪ್ರೆಸ್, 1978), ಪುಟ 9.

24. ವೇ (Wei), *ಎಜುಕೇಶನಲ್ ಥಾಟ್ಸ್* ಪುಟ 3

25. ಉದಾಹರಣೆಗೆ ವೇ ಚೆಂಗ್ಸಿ (Wei Chengsi) ಹೇಳುವಂತೆ: "ಸೋವಿಯತ್ ಪದ್ಧತಿಯ ಮಾರಣಾಂತಿಕ ದೌರ್ಬಲ್ಯವು ಇದ್ದದ್ದು ಅದರಲ್ಲಿನ ಯಾಂತ್ರಿಕವಾದ ಮತ್ತು ಬಿಗಿಯಾದ ಪರಿಪಾಠ (routine)ದಲ್ಲಿ ಮತ್ತು ನಿಜವಾದ ಬದುಕಿನಿಂದ ವಿಚ್ಛೇದವಾಗಿದ್ದರಲ್ಲಿ. ಅದು ಜ್ಞಾನ ಶಿಸ್ತುಗಳ ಹಾಗೂ ವಿದ್ಯಾರ್ಥಿಗಳ ಬದುಕಿನ ವಿಸ್ತಾರವನ್ನು ಸಂಕುಚಿತಗೊಳಿಸಿತು; ಬೋಧನೆ ಮತ್ತು ಕಲಿಕೆ ನಿರ್ಜೀವವಾಗಿತ್ತು. ಇಡೀ ಶಾಲಾ ಚಟುವಟಿಕೆಯು ನಿಗದಿತವಾದ ಮಾನದಂಡಗಳಿಗೆ ಅನುಗುಣವಾಗಿ ಏಣಿಯಲ್ಲಿ ಮೆಟ್ಟಲಿನ ನಂತರ ಮೆಟ್ಟಿಲನ್ನು ಹತ್ತುವಂತಿತ್ತು. ವಿದ್ಯಾರ್ಥಿಗಳ ಕಾರ್ಯಶೀಲತೆ, ಮುಂದೊಡಗು (initiative) ಮತ್ತು ಸೃಜನಶೀಲತೆಗಳನ್ನು ಬಹುತೇಕವಾಗಿ ಉಪೇಕ್ಷಿಸಲಾಗಿತ್ತು", (ಅದೇ ಪುಸ್ತಕ). ಸೋವಿಯತ್ ಶಿಕ್ಷಣ ಪದ್ಧತಿಯನ್ನು ಟೀಕೆ ಮಾಡಿದವರು ಕೇವಲ ಚೀನಾದ ಮತ್ತು ಕ್ಯೂಬಾದ ಲೇಖಕರಲ್ಲ. ಸೋವಿಯತ್ ಮಾದರಿಯನ್ನಾಗಲೀ, ಚೀನಾ - ಕ್ಯೂಬಾ ಮಾರ್ಗವನ್ನಾಗಲಿ ಅನುಸರಿಸದೇ ಇದ್ದ ಯುಗೊಸ್ಲಾವಿಯದಲ್ಲಿ ಶೈಕ್ಷಣಿಕ ಸಿದ್ಧಾಂತಿಗಳು ಸೋವಿಯತ್ ಶಿಕ್ಷಣದ ಕುರಿತು ಇದನ್ನೇ ಹೋಲುವಂತಹ ಟೀಕೆಯನ್ನು ಮಾಡಿದ್ದರು. ಮೀರೊಸ್ಲಾವ್ ಪೆಕ್ಯುಜ್ಲಿಕ್ (Miroslav Pecujlic) ಹೇಳುವಂತೆ ೧೯೨೦ರ ದಶಕದ "ಸೋವಿಯತ್ ಸುಧಾರಣೆಗಳು ಪರಂಪರಾಗತವಾಗಿ ಬಂದಿದ್ದ ಸರ್ವಾಧಿಕಾರಿ ಮನೋಭಾವದ, ದಮನಕಾರಿಯಾದ ಬೋಧನಾ ಶಾಸ್ತ್ರವನ್ನು, ಅದರ ಪುಸ್ತಕ ಆಧಾರಿತ ಕಾಳಜಿಗಳನ್ನು ಮತ್ತು ಜ್ಞಾನವನ್ನು ಗಳಿಸಿಕೊಳ್ಳುವ ವಿಧಾನಗಳನ್ನು ಬುಡಮೇಲು ಮಾಡಿದವು;" ಆದರೆ 1930ರ ದಶಕದ ನಂತರ

ರೂಪಿಸಲ್ಪಟ್ಟ ಸೋವಿಯತ್ ಪದ್ಧತಿಯು "ಅಧಿಕಾರಶಾಹಿ ಪ್ರತಿಕ್ರಾಂತಿಯು ಜಾರಿಗೆ ತಂದುದಾಗಿತ್ತು. . ಅದಕ್ಕೆ ರೈತರು ಕಾರ್ಮಿಕರು ಸಾಮಾನ್ಯ ಶಿಕ್ಷಣವನ್ನು ಪಡೆದುಕೊಳ್ಳುವುದು ಬೇಕಾಗಿರಲಿಲ್ಲ. ಕಠೋರವಾದ ಶಿಸ್ತು ಮತ್ತು ವಿಧೇಯತೆ ಅದು ಅಪೇಕ್ಷಿಸಿದ ಗುಣಗಳಾಗಿದ್ದವು."- ಮಿರೋಸ್ಲಾವ್ ಪೆಕ್ಯುಜ್ಲಿಕ್, '*ದಿ ಯೂನಿವರ್ಸಿಟಿ ಆಫ್ ದಿ ಫ್ಯೂಚರ್: ದಿ ಯುಗೋಸ್ಲಾವ್ ಎಕ್ಸ್ಪೀರಿಯನ್ಸ್* (ನ್ಯೂಯಾರ್ಕ್ ಗ್ರೀನ್ ವುಡ್ ಪ್ರೆಸ್ 1987) ಪುಟ 49.

26. ಮಾವೊ ಜೆಡಾಂಗ್, *ಚೇರ್ಮನ್ ಮಾವೋ ಆನ್ ಎಜುಕೇಶನ್ ರೆವಲ್ಯುಶನ್* ( ಬೀಜಿಂಗ್, ಪೀಪಲ್ಸ್ ಪಬ್ಲಿಷರ್ 1967), ಪುಟ 11

27. ಸಾಂಸ್ಕೃತಿಕ ಕ್ರಾಂತಿಗೆ ಮುಂಚೆ ಚೀನಾದಲ್ಲಿ ಪಿ ಎಚ್ ಡಿ ಪದವಿಯು ಇರಲಿಲ್ಲ. ಹೀಗಾಗಿ ಇಲ್ಲಿ ಬಂದಿರುವ ಅಸೋಸಿಯೇಟ್ ಡಾಕ್ಟರೇಟ್ ಎಂಬುದನ್ನು, ಪೂರ್ಣಗೊಳಿಸಲು ನಾಲ್ಕು ವರ್ಷಗಳು ಬೇಕಾಗುತ್ತಿದ್ದ, ಆಗಿನ ಕಾಲದ ಅತ್ಯುನ್ನತ ಪದವಿ ಎಂದು ಅರ್ಥ ಮಾಡಿಕೊಳ್ಳಬೇಕು. 1956ರಲ್ಲಿ ಈ ಕಾರ್ಯಕ್ರಮವನ್ನು ಜಾರಿಗೆ ತರಲಾಯಿತು ಮತ್ತು 490 ಅಭ್ಯರ್ಥಿಗಳು ನೊಂದಾಯಿಸಿಕೊಂಡರು. ಆದರೆ ಮಾವೋರವರ ಭಾಷಣದ ನಂತರ ಈ ಕಾರ್ಯಕ್ರಮವನ್ನು "ಬೌದ್ಧಿಕ ಕುಲೀನರನ್ನು ಪೋಷಿಸುವಂತದ್ದು" ಎಂದು ಟೀಕಿಸಲಾಯಿತು ಮತ್ತು ತದನಂತರ ರದ್ದುಪಡಿಸಲಾಯಿತು.

28.ಜ್ಯೂಲಿ ಮಾರಿ ಬಂಕ್ (Julie Marie Bunck), *ಫಿಡಲ್ ಕ್ಯಾಸ್ಟ್ರೋ ಅಂಡ್ ದಿ ಕ್ವೆಸ್ಟ್ ಫಾರ್ ರೆವೊಲ್ಯೂಷನರಿ ಕಲ್ಚರ್ ಇನ್ ಕ್ಯೂಬಾ*, (ಯೂನಿವರ್ಸಿಟಿ ಪಾರ್ಕ್, ಪೆನ್: ಪೆನ್ಸಿಲ್ವೇನಿಯ ಸ್ಟೇಟ್ ಯೂನಿವರ್ಸಿಟಿ ಪ್ರೆಸ್ 1994) ಪುಟ 35.

29. ಫಿಡೆಲ್ ಕ್ಯಾಸ್ಟ್ರೋ: *ಫಿಡೆಲ್ ಕ್ಯಾಸ್ಟ್ರೋ ಆನ್ ಚಿಲಿ* ( ನ್ಯೂಯಾರ್ಕ್, ಪಾತ್ ಫೈಂಡರ್ ಪ್ರೆಸ್ 1982) ಪುಟ 56

30. ಒಂದು ಮೂಲದ ಪ್ರಕಾರ 1958ರ ಸೆಪ್ಟೆಂಬರ್ ತಿಂಗಳ ಕೊನೆಯ ಹೊತ್ತಿಗೆ 22 ಪ್ರಾಂತ್ಯಗಳಲ್ಲಿನ ಎಲ್ಲ ರೀತಿಯ 22100 ಶಾಲೆಗಳು ಒಟ್ಟು 86 ಸಾವಿರ ಬೃಹತ್ ಕುಲುಮೆಗಳನ್ನು ಕಟ್ಟಿದ್ದವು. *ವೇ, ಎಜುಕೇಶನಲ್ ಥಾಟ್ಸ್*, ಪುಟ ನಾಲ್ಕು.

31. ಅದೇ ಪುಸ್ತಕ, ಅನೇಕ ಪ್ರಕರಣಗಳಲ್ಲಿ ಶಾಲೆಯೊಂದು ಒಂದು ಕಾರ್ಖಾನೆ ಅಥವಾ ಕಾರ್ಯಾಗಾರಕ್ಕಿಂತ ಹೆಚ್ಚಿನದನ್ನು ನಡೆಸಿಕೊಂಡು ಹೋಗುತ್ತಿತ್ತು. ಉದಾಹರಣೆಗೆ ಬೀಜಿಂಗ್ ವಿಶ್ವವಿದ್ಯಾಲಯವು ಎರಡು ವಾರಗಳಲ್ಲಿ ಅಂತಹ 20 ಘಟಕಗಳನ್ನು ಆರಂಭಿಸಿತ್ತು.

32. ಜೌ (Zhou), *ಎಜುಕೇಶನಲ್ ರೆವಲ್ಯೂಷನ್*, ಪುಟ 447.

33. ಜಾನ್ ಕ್ಲವರ್ಲಿ (John Cleverly) *ದ ಸ್ಕೂಲಿಂಗ್ ಆಫ್ ಚೈನಾ: ಟ್ರೆಡಿಶನ್ ಅಂಡ್ ಮಾಡರ್ನಿಟಿ ಇನ್ ಚೈನಿಸ್ ಎಜುಕೇಶನ್* (ನಾರ್ತ್ ಸಿಡ್ನಿ,ಆಸ್ಟ್ರೇಲಿಯಾ, ಅಲೆನ್ ಅಂಡ್ ಉನ್ವಿನ್, 1991) ಪುಟ 153.

34. *ಪೀಪಲ್ಸ್ ಡೈಲಿ*, 25 ಏಪ್ರಿಲ್ 1958.

35. *ಪೀಪಲ್ಸ್ ಡೈಲಿ* 30 ಜುಲೈ 1958.

36. *ಪೀಪಲ್ಸ್ ಡೈಲಿ* ಏಳು ಜುಲೈ 1958 ಶಿಕ್ಷಕರು ಇನ್ನೂ ಕೆಟ್ಟದಾಗಿದ್ದರು: ಆಚಾರ್ಯರನಿಸಿಕೊಂಡ ಪ್ರೊಫೆಸರ್ ಗೆ ಪೀಡಕ ಕೀಟಗಳಿಂದ ಹಣ್ಣಿನ ಮರಗಳನ್ನು ರಕ್ಷಿಸಲು ಅಸಹಾಯಕರಾಗಿದ್ದರು ಮತ್ತು ಕೆಲವು ಪ್ರಾಣಿ ಶಾಸ್ತ್ರದ ಪ್ರೊಫೆಸರ್ ಗಳು ಹೆಚ್ಚಿಗೆ ಔಷಧಿ ಕೊಡುವುದರ ಮೂಲಕ ಆಕಸ್ಮಿಕವಾಗಿ ರೈತರ ಮೊಲಗಳನ್ನು ಕೊಂದುಬಿಟ್ಟರು. ಇದಕ್ಕೆ ವಿರುದ್ಧವಾಗಿ ಅನೇಕ ರೈತರು ಇಂತಹ ಸಮಸ್ಯೆಗಳನ್ನು, ಕೇವಲ ಈರುಳ್ಳಿಯನ್ನು ಉಪಯೋಗಿಸುವುದರ ಮೂಲಕ ಅಥವಾ ರೋಗಿಷ್ಟ ಮೊಲಗಳಿಗೆ ವಾಂತಿ ಮಾಡಿಸುವುದರ ಮೂಲಕ ರೋಗವನ್ನು ಇನ್ನೂ ಚೆನ್ನಾಗಿ ಪರಿಹರಿಸುತ್ತಿದ್ದರು. ಹೀಗಾಗಿ "ಶಿಕ್ಷಿತ"ರಿಗೆ ಬೋಧನೆ ಮಾಡುತ್ತಿದ್ದದ್ದು ಈ "ಆಶಿಕ್ಷಿತ" ಜನರೇ.

37. *ಪೀಪಲ್ಸ್ ಡೈಲಿ* 30 ಜುಲೈ 1958, ಸಾಧ್ಯವಿದ್ದ ಅತ್ಯುನ್ನತ ಶ್ರೇಣಿ ಎಂದರೆ ನಾಲ್ಕು ಅಥವಾ ಐದು.

38. ಜೋನಾಥನ್ ಸ್ಪೆನ್ಸ್ (Jonathan Spence), *ಮಾವೋ ಜೆಡಾಂಗ್*, (ನ್ಯೂಯಾರ್ಕ್ ಪ್ಯಾನ್ಗ್ವಿಯಾನ್ ಗ್ರೂಪ್, 1999), ಪುಟ 41; ಸ್ಟುವರ್ಟ್ ಸ್ಕ್ರಾಮ್, ಸಂಪಾದಕರು: ಚೇರ್ಮನ್ ಮಾವೋ ಟಾಕ್ಸ್ ಟು ದಿ ಪೀಪಲ್, ( ನ್ಯೂಯಾರ್ಕ್ ಬುಕ್ಸ್ 1974) ಪುಟ, 242 – 53

39. ಅದೇ ಪುಸ್ತಕ ಪುಟ 246

40. ಅದೇ ಪುಸ್ತಕ ಪುಟ 116

41.ಕ್ಸಿಯಾವೊ ಯು ( Xiao Yu), *ದಿ ಅರ್ಲಿ ಇಯರ್ಸ್ ಆಫ್ ಮಾವೋ ಜೆಡಾಂಗ್*(ಟೈ ಬೈ, ತೈವಾನ್: ಲಿ ಬೈ ಪಬ್ಲಿಷರ್ 1989 )ಪುಟ 210.

42. ಮಾವೋ ಜೆಡಾಂಗ್, "ಸ್ಟುಡೆಂಟ್ಸ್ ವರ್ಕ್", *ಮಾವೋ ಜೆಡಾಂಗ್ಸ್ ಅರ್ಲಿ ರೈಟಿಂಗ್ಸ್*, ಸಂಪಾದಕರು ಡಿಪಾರ್ಟ್ಮೆಂಟ್ ಆಫ್ ಡಾಕ್ಯುಮೆಂಟ್ಸ್ ಆಫ್ ದಿ ಚೈನೀಸ್ ಕಮ್ಯೂನಿಸ್ಟ್ ಪಾರ್ಟಿ ಸೆಂಟ್ರಲ್ ಕಮಿಟಿ ಅಂಡ್ ದಿ ಎಡಿಟಿಂಗ್ ಗ್ರೂಪ್ ಆಫ್ ದ ಮಾವೊ ಜೆಡಾಂಗ್ಸ್ ಅರ್ಲಿ ರೈಟಿಂಗ್ಸ್ ಆಫ್ ಹುನಾನ್ ಪ್ರಾವಿನ್ಸ್ ಕಮಿಟಿ ಆಫ್ ದಿ ಚೈನಿಸ್ ಕಮ್ಯುನಿಸ್ಟ್ ಪಾರ್ಟಿ (ಚಾಂಗ್ಸ: ಕುನಾನ್ ಪಬ್ಲಿಷರ್ಸ್, 1990) ಪುಟ 450.

43. ಮಾವೋ ಅವರು ತಮ್ಮ ಗಾರ್ಡ್ ರೆಜಿಮೆಂಟ್ ನಲ್ಲಿಯೇ ಒಂದು ಕಾರ್ಖಾನೆಯನ್ನು ತೆರೆಯಬಹುದು ಮತ್ತು ಸೈನಿಕರು ನಾಲ್ಕು ಗಂಟೆಗಳ ಕಾಲ ಅಧ್ಯಯನವನ್ನು ಮತ್ತು ನಾಲ್ಕು ಗಂಟೆಗಳ ಕಾಲ ಕೈಗಾರಿಕಾ ಕೆಲಸವನ್ನು ಪ್ರತಿದಿನವೂ ಮಾಡಬಹುದೆಂದು ಸೂಚಿಸಿದರು. ಅನಾಮಧೇಯ-*ಮಾವೋ ಜೆಡಾಂಗ್ ಇನ್ ದಿ ಪೀಪಲ್*, ಬೀಜಿಂಗ್: ಪೀಪಲ್ಸ್ ಪಬ್ಲಿಷರ್ 1958) ಪುಟ 63.

44. ಲಿಯು ಶಾವೊಕಿ, *ಅಂತಾಲಜಿ ಆಫ್ ಲಿಯು ಶಾವೋಕಿ*, ಸಂಪುಟ ಎರಡು (ಬೀಜಿಂಗ್, ಪೀಪಲ್ಸ್ ಪಬ್ಲಿಷರ್, 1985) ಪುಟ 465

45. *ಪೀಪಲ್ಸ್ ಡೈಲಿ*, 4 ಏಪ್ರಿಲ್ 1966

46. *ಪೀಪಲ್ಸ್ ಎಜುಕೇಶನ್*, ಬೀಜಿಂಗ್, ಸೆಪ್ಟೆಂಬರ್ 1964.

47. ಉದಾಹರಣೆಗೆ ಲು ಡಿಂಗ್ಯಿ (Lu Dingyi), ಪಕ್ಷದ ಪ್ರಚಾರ ಇಲಾಖೆಯ ಮುಖ್ಯಸ್ಥರು ಇವರು 1962ರಲ್ಲಿ ರಾಷ್ಟ್ರೀಯತಾವಾದಿ ಯುಗಕ್ಕಿಂತ ಶಿಕ್ಷಣದ ಮಟ್ಟ ಕೆಳಕ್ಕೆ ಕುಸಿದಿದೆ ಎಂದು ಹೇಳಿದರು. ಶಿಕ್ಷಣ

ಸಚಿವಾಲಯವು, ಪೂರ್ಣಾವಧಿ ಶಾಲೆಗಳಲ್ಲಿ ಹಿಂದಿನ ವರ್ಷಗಳಲ್ಲಿ ಏರುಪೇರಿಗೆ ಒಳಗಾಗಿದ್ದ ಮಾಮೂಲಿ ಪಠ್ಯಕ್ರಮವನ್ನು ಪುನರ್ ಸ್ಥಾಪಿಸಲು ತಾತ್ಕಾಲಿಕ ಕೆಲಸದ ನಿಯಮಗಳನ್ನು ಬಿಡುಗಡೆ ಮಾಡಿತು. ಕ್ಲವರ್ಲಿ (Cleverly), *ದಿ ಸ್ಕೂಲಿಂಗ್ ಆಫ್ ಚೈನಾ*, ಪುಟ 150.

48. 1963 – 65ರ ಅವಧಿಯಲ್ಲಿ ಚೀನಾದ ಕಮ್ಯೂನಿಸ್ಟ್ ಪಕ್ಷವು ಸಮಾಜವಾದಿ ಶೈಕ್ಷಣಿಕ ಆಂದೋಲನವನ್ನು ಆರಂಭಿಸಿತು. ಆಂದೋಲನದ ಹೆಸರು ಸ್ವಲ್ಪ ದಾರಿ ತಪ್ಪಿಸುವಂತಿದೆ. ಏಕೆಂದರೆ ಅದರ ಗುರಿ ಇದ್ದದ್ದು ಪೀಪಲ್ಸ್ ಕಮ್ಯೂನ್ ಗಳಲ್ಲಿದ್ದ ಕಾರ್ಯಕರ್ತರ ಕೆಲಸದ ಲೆಕ್ಕ ಹಿಡಿಯುವುದು, ಅವರಿಗೆ ಸಮಾಜವಾದಿ ಸಿದ್ಧಾಂತದ ಶಿಕ್ಷಣವನ್ನು ಕೊಡುವುದು ಇತ್ಯಾದಿ, ಇವೆಲ್ಲವೂ ಕೂಡ ಶಿಕ್ಷಣ ಪದ್ಧತಿಗೆ ಸಂಬಂಧಿಸಿದ್ದಾಗಿರಲಿಲ್ಲ.

49. *ಪೀಪಲ್ಸ್ ಡೈಲಿ*, 1 ಆಗಸ್ಟ್ 1966, ಇದರ ಫಲಿತಾಂಶವಾಗಿ ಪ್ರಾಥಮಿಕ ಶಾಲೆಯಿಂದ ವಿಶ್ವವಿದ್ಯಾಲಯದವರೆಗೂ ಇದ್ದ ಶಿಕ್ಷಣದ ಅವಧಿಯನ್ನು 16 ವರ್ಷಗಳಿಂದ 12ಕ್ಕೆ ಇಳಿಸಲಾಯಿತು.

50.ವೇ (Wei), *ಎಜುಕೇಶನಲ್ ಥಾಟ್ಸ್* ,ಪುಟ 7.

51. *ಪೀಪಲ್ಸ್ ಡೈಲಿ*, 22 ಜುಲೈ 1968

52 ವೇ (Wei), *ಎಜುಕೇಶನಲ್ ಥಾಟ್ಸ್*, ಪುಟ 8

53. *ಪೀಪಲ್ಸ್ ಡೈಲಿ*, 24 ಫೆಬ್ರುವರಿ 1976

54. *ಪೀಪಲ್ಸ್ ಡೈಲಿ*, 14 ಫೆಬ್ರುವರಿ 1976

55. *ಪೀಪಲ್ಸ್ ಡೈಲಿ*, 22 ಜುಲೈ 1968

56. ಸಾಂಸ್ಕೃತಿಕ ಕ್ರಾಂತಿಯ ಸಮಯದಲ್ಲಿ ಎಲ್ಲಾ ಆಡಳಿತಾಂಗಗಳನ್ನು ಪುನರ್ ಸಂಘಟಿಸಲಾಯಿತು ಮತ್ತು ಅವುಗಳಿಗೆ ಕ್ರಾಂತಿಕಾರಿ ಸಮಿತಿಗಳೆಂದು ಹೆಸರಿಸಲಾಯಿತು ಹಾಗೂ ಅದರ ಮುಖ್ಯಸ್ಥನನ್ನು ಸಮಿತಿಯ ನಿರ್ದೇಶಕ ಎಂದು ಹೆಸರಿಸಲಾಯಿತು.

57. ಸಾಂಸ್ಕೃತಿಕ ಕ್ರಾಂತಿಯ ಸಂದರ್ಭದಲ್ಲಿ 'ಪರ್ವತಗಳವರೆಗೂ ಏರುವುದು ಮತ್ತು ಹಳ್ಳಿಗಳವರೆಗೂ ಇಳಿಯುವುದು' ಎಂಬ ಆಂದೋಲನದ ಹೆಸರಿನಲ್ಲಿ ಮಿಲಿಯಾಂತರ ನಗರದ ತರುಣರನ್ನು ಹಾಗೂ ಬುದ್ಧಿಜೀವಿಗಳನ್ನು ರೈತರಿಂದ ಪುನರ್-ಶಿಕ್ಷಣಕ್ಕೆ ಒಳಗಾಗಬೇಕೆಂದು ಗ್ರಾಮೀಣ ಪ್ರದೇಶಗಳಿಗೆ ಕಳಿಸಲಾಯಿತು. ನಾವು ಈ ಆಂದೋಲನವನ್ನು ನಮ್ಮ ಅಧ್ಯಯನದೊಳಗೆ ಸೇರಿಸಿಕೊಂಡಿಲ್ಲ. ಏಕೆಂದರೆ ನಾವು ಶಾಲಾ ವ್ಯವಸ್ಥೆಯೊಳಗಿನ ಶಿಕ್ಷಣದ ಮೇಲೆ ಗಮನ ಕೊಟ್ಟಿದ್ದೇವೆಯೇ ಹೊರತು ಸಾಮಾನ್ಯವಾದ ರಾಜಕೀಯ ಮತ್ತು ವೈಚಾರಿಕ ಶಿಕ್ಷಣದ ಬಗ್ಗೆ ಅಲ್ಲ. ಇದೇ ಕಾರಣದಿಂದಲೇ ನಾವು ಈ ಲೇಖನದಲ್ಲಿ ಸಾಂಸ್ಕೃತಿಕ ಕ್ರಾಂತಿಯ ಸಂದರ್ಭದಲ್ಲಿ ಸ್ಥಾಪಿಸಲಾದ ಮೇ 7ರ ಕಾರ್ಯಕರ್ತರ ಶಾಲೆಯನ್ನು ಹೊರಗಿಟ್ಟಿದ್ದೇವೆ.

58. *ಪೀಪಲ್ಸ್ ಡೈಲಿ*, 22 ಮಾರ್ಚ್ 1978.

59. ಪೆಕ್ಯುಜ್ಲಿಕ್ (Pecujlic) ಅವರು ಚೀನಾದ ಪ್ರಯೋಗ ಮತ್ತು ಅದು ಹಿಂಜರಿದದ್ದು, ಈ ಇಡೀ ಪ್ರಕ್ರಿಯೆಯನ್ನು ಗಮನಿಸಿದರು. ಅವರು ಚೀನಾದ ದುಡುಕಿನ ಪ್ರಯೋಗಗಳನ್ನು 'ಯಾಂತ್ರಿಕೃತ ಶಸ್ತ್ರ ವೈದ್ಯದ ಮಧ್ಯಪ್ರವೇಶ'; ಈ ಮಧ್ಯಪ್ರವೇಶವು ಸಂಸ್ಕೃತಿಯನ್ನು "ಅತಿಸಾಮಾನ್ಯಗೊಳಿಸಿ ಪ್ರಜಾಸತ್ತಾತ್ಮಕಗೊಳಿಸಿದ ಜ್ಞಾನ"ವನ್ನಾಗಿಸಿತು' ಎಂದು ಟೀಕಿಸಿದರು. *ಯೂನಿವರ್ಸಿಟಿ ಆಫ್ ದಿ ಫ್ಯೂಚರ್* ಪುಟ 54.

60. ಈ ಪದಪುಂಜವು ಸಾಂಸ್ಕೃತಿಕ ಕ್ರಾಂತಿಯ ಸಂದರ್ಭದ್ದು. ಆದರೆ ಅದರ ಉದ್ದೇಶವು ಆ ಹಿಂದಿನ ಕಾಲಾವಧಿಗೂ ಕೂಡ ಅನ್ವಯಿಸುತ್ತಿತ್ತು.

61.ಶೆಲ್ಡನ್ ಬಿ ಲಿಸ್ (Shelden B. Liss), *ಫಿಡೆಲ್! ಕ್ಯಾಸ್ಟ್ರೋಸ್ ಪೊಲಿಟಿಕಲ್ ಅಂಡ್ ಸೋಶಿಯಲ್ ಥಾಟ್ಸ್* (ನ್ಯೂ ಯಾರ್ಕ್: ವೆಸ್ಟ್ ವ್ಯೂ ಪ್ರೆಸ್, 1994), ಪುಟ 28.

62. *ಗ್ರಾನ್ ಮಾ ವೀಕ್ಲಿ ರಿವ್ಯೂ* (ಇನ್ನೂ ಮುಂದೆ ಜಿ ಡಬ್ಲ್ಯೂ ಆರ್ ಎಂದು ಕರೆಯಲಾಗುವುದು) 19 ಜೂನ್ 1966.

63. ಚೆಗೆವಾರ, *ವೆನ್ಸೆರೆಮೋಸ್! (Venceremos!) ದ ಸ್ಪೀಚಸ್ ಅಂಡ್ ರೈಟಿಂಗ್ಸ್ ಆಫ್ ಅರ್ನೆಸ್ಟೊ ಚೆಗೆವಾರ,* (ನ್ಯೂ ಯಾರ್ಕ್, ಮೆಕ್ ಮಿಲನ್ ಕಂಪನಿ 1968,) ಪುಟ 391, 397

64. ಮೆಸ – ಲಾಗೋ (Mesa-Lago)ಡ, *ಕ್ಯೂಬಾ ಇನ್ ದಿ 1970s*, ಪುಟ 6

65. ಅದೇ ಪುಸ್ತಕ ಪುಟ11

66. ಕ್ರಾಂತಿಯ ನಂತರದ ಕ್ಯೂಬಾದ ಶೈಕ್ಷಣಿಕ ಅಭಿವೃದ್ಧಿಯಲ್ಲಿ 1965ರ ಸಮಯವನ್ನು ಒಂದು ಮುಖ್ಯ ತಿರುವಿನ ಬಿಂದು ಎಂದು ಗುರುತಿಸಲಾಗಿದೆ. ಉದಾಹರಣೆಗೆ ರೋಲನ್ ಜಿ ಪಾಲ್ಸ್ಟನ್(Rolland G. Paulston), ಅವರು *ರೆವೊಲ್ಯೂಷನರಿ ಚೇಂಜ್ ಇನ್ ಕ್ಯೂಬಾ* ಎಂಬ ಪುಸ್ತಕದಲ್ಲಿನ, 'ಆನ್ ಕ್ಯೂಬನ್ ರೆವಲ್ಯೂಷನ್' ಎಂಬ ಲೇಖನದಲ್ಲಿ ಹೇಳಿರುವುದನ್ನು ಗಮನಿಸಬಹುದು; ಸಂಪಾದಕರು: ಕಾರ್ಮೆಲೋ ಮೆಸ -ಲಾಗೊ, (ಪಿಟ್ಸ್ ಬರ್ಗ್:ಯುನಿವರ್ಸಿಟಿ ಆಫ್ ಪಿಟ್ಸ್ ಬರ್ಗ್ ಪ್ರೆಸ್, 1971), ಪುಟ 387, ಜೆರಾಲ್ಡ್ ಹೆಚ್ ರೀಡ್ ,'ದಿ ರೆವಲ್ಯೂಷನ್ ಇನ್ ಎಜುಕೇಶನ್' ಎಂಬ ಲೇಖನ, *ಫಿಡೆಲ್ ಕ್ಯಾಸ್ಟ್ರೋಸ್ ಪರ್ಸನಲ್ ರೆವೊಲ್ಯೂಷನ್ ಇನ್ ಕ್ಯೂಬಾ* ಪುಸ್ತಕದಲ್ಲಿ, 1959- 1973, ಸಂಪಾದಕರು: ಜೇಮ್ಸ್ ನೆಲ್ಸನ್ ಗುಡ್ಸೆಲ್ (James Nel son Goodsell), ( ನ್ಯೂ ಯಾರ್ಕ್, ನಾಫ್(Knopf), 1975) ಅಂಡ್ ಮ್ಯಾಥ್ಯೂಸ್, *ರೆವಲ್ಯೂಷನ್ ಇನ್ ಕ್ಯೂಬಾ,* ಪುಟ 344.

67. *ಜಿ ಡಬ್ಲ್ಯೂ ಆರ್,* 3 ಜೂನ್ 1967.

68. ಥಿಯೊಡೊರ್ ಮೆಕ್ ಡೊನಾಲ್ಡ್, *ಮೇಕಿಂಗ್ ಎ ನ್ಯೂ ಪೀಪಲ್: ಎಜುಕೇಶನ್ ಇನ್ ರೆವಲ್ಯೂಷನರಿ ಕ್ಯೂಬಾ* (ವ್ಯಾನ್ ಕೋವರ್ (Vancouver): ನ್ಯೂ ಸ್ಟಾರ್ ಬುಕ್ಸ್ 1985) ಪುಟ 125. ಲೇಖಕರ ಪ್ರಕಾರ ಆ ಶಾಲೆಗಳಲ್ಲಿದ್ದ ಎಲ್ಲ ವಿದ್ಯಾರ್ಥಿಗಳು ಕೂಡ ರಾಜಕೀಯ ಅರ್ಥವಿರುವ ಹೊಸ ಹೆಸರುಗಳಿಗೆ ತಮ್ಮ ಹೆಸರುಗಳನ್ನು ಬದಲಿಸಿಕೊಂಡರು.

69. ರೀಡ್, 'ರೆವೊಲ್ಯೂಷನರಿ ಅಫೆನ್ಸಿವ್' ಪುಟ 216.

70. ಮೆಕ್ ಡೊನಾಲ್ಡ್, *ಮೇಕಿಂಗ್ ಎ ನ್ಯೂ ಪೀಪಲ್*, ಪುಟ 125.

71. ಫಿಗುಯೆರೋವ (Figueroa), *ಎಕ್ಸ್ಪರಿಮೆಂಟ್ಸ್ ಅಂಡ್ ಇನ್ನೋವೇಶನ್ಸ್*, ಪುಟ 15– 23.

72. *ಜಿ ಡಬ್ಲ್ಯೂ ಆರ್*, 5 ಫೆಬ್ರುವರಿ 1967.

73. ಪಾಲ್ ಸ್ವನ್, 'ಆನ್ ಕ್ಯೂಬನ್ ಎಜುಕೇಶನ್', ಪುಟ 388.

74. ಅದೇ ಪುಸ್ತಕ, ಪುಟ 380 - 91, ಮತ್ತು ಲಿಯೋ ಹ್ಯೂಬರ್ ಮ್ಯಾನ್ ಮತ್ತು ಪಾಲ್ ಸ್ವೀಜಿ, *ಸೋಶಿಯಲಿಸಂ ಇನ್ ಕ್ಯೂಬಾ*,(ನ್ಯೂ ಯಾರ್ಕ್: ಮಂತ್ಲಿ ರಿವ್ಯೂ ಪ್ರೆಸ್, 1969), ಪುಟ 43 - 44.

75. ಮ್ಯಾಥ್ಯೂಸ್, *ರೆವಲ್ಯುಷನ್ ಇನ್ ಕ್ಯೂಬಾ*, ಪುಟ 344.

76. ಯೂಸೆಬಿಯೋ ಮುಜಾಲ್ ಲಿಯಾನ್ (Eusebio Mujal-Leon), ","ಹೈಯರ್ ಎಜುಕೇಶನ್ ಅಂಡ್ ದಿ ಇನ್ಸ್ಟಿಟ್ಯೂಷನಲೈಸ್ಡ್ ರೆಜೀಮ್" ಎಂಬ ಲೇಖನ; *ಕ್ಯೂಬನ್ ಕಮ್ಯುನಿಸಮ್* ಎಂಬ ಪುಸ್ತಕದಲ್ಲಿ, ಸಂಪಾದಕರು: ಇರ್ವಿಂಗ್ ಲೂಯಿ ಹೊರೊವಿಟ್ಸ್(Irving Louis Horowitz),( ನ್ಯೂ ಬ್ರುನ್ಸ್ ವಿಕ್: ಟ್ರಾನ್ಸಾಕ್ಷನ್ ಪಬ್ಲಿಷರ್ಸ್ 1989), ಪುಟ 416. ಚೀನಾದಲ್ಲಿ ವಿದ್ಯಾರ್ಥಿಯು ಯಾವ ಉದ್ಯೋಗದ ಘಟಕದಿಂದ ಬಂದಿದ್ದನೋ ಅಲ್ಲಿಂದ ಶಿಫಾರಸು ಪತ್ರವನ್ನು ತರುವುದು ಅವಶ್ಯಕವಾಗಿತ್ತು.

77. ಮ್ಯಾಥ್ಯೂಸ್, *ರೆವಲ್ಯುಷನ್ ಇನ್ ಕ್ಯೂಬಾ* ಪುಟ 344.

78. ಅದೇ ಪುಸ್ತಕ

79. ಫ್ರೆಡ್ ವಾರ್ಡ್, *ಇನ್ ಸೈಡ್ ಕ್ಯೂಬಾ*,( ನ್ಯೂಯಾರ್ಕ್ , ಕ್ರೌನ್ ಪಬ್ಲಿಷನ್ಸ್ 1978), ಪುಟ 95.

80. ಮಾವೋ ಮತ್ತು ಕ್ಯಾಸ್ಟ್ರೋ ಇಬ್ಬರೂ ಸಹ ವಿದ್ಯಾರ್ಥಿಗಳಾಗಿದ್ದಾಗ ಬುದ್ಧಿವಂತರಾಗಿದ್ದರು ಆದರೆ ಕೆಲವೊಮ್ಮೆ ಬಂಡುಕೋರರಾಗಿದ್ದರು ಮತ್ತು ಇಬ್ಬರೂ ಪ್ರಾಥಮಿಕ ಶಾಲೆಯ ಶಿಕ್ಷಕರಿಗೆ ಇಷ್ಟವಾಗುತ್ತಿರಲಿಲ್ಲ. ನಂತರದ ವರ್ಷಗಳಲ್ಲಿ ಕ್ಯಾಸ್ಟ್ರೋ ಅವರು ಹಳೆಯ ಶಾಲೆಗಳನ್ನು 'ಜೈಲು' ಎಂದು ಕರೆದರೆ, ಮಾವೋ ಅವರು ಶಾಲೆಗಳು ವಿದ್ಯಾರ್ಥಿಗಳನ್ನು 'ಹೆಚ್ಚು ಹೆಚ್ಚು ಮೂರ್ಖರನ್ನಾಗಿ ಮಾಡುತ್ತವೆ' ಎಂದರು. ನೋಡಿರಿ: *ಜಿ ಡಬ್ಲ್ಯೂ ಆರ್*, 30 ಜನವರಿ 1967 ಮತ್ತು ಸ್ಕ್ರಾಮ್, ಚೇರ್ಮನ್ ಮಾವೋ ಟಾಕ್ಸ್, ಪುಟ 236.

81. ರಾಬರ್ಟ್ ಈ ಕ್ವಿಕ್, *ಫಿಡೆಲ್ ಕ್ಯಾಸ್ಟ್ರೋ*, (ನ್ಯೂಯಾರ್ಕ್: ನಾರ್ಟನ್ 1993), ಪುಟ 160.

82. 1960ರ ದಶಕದ ಆರಂಭದಲ್ಲಿ ತಮ್ಮ ತನಿಖಾ ಪ್ರವಾಸ ಒಂದರಲ್ಲಿ ಕ್ಯಾಸ್ಟ್ರೋ ಇಂತಹ ಅಜ್ಞಾನವನ್ನು ಕಂಡಿದ್ದರು ಮತ್ತು ಅವರು ಈ ಪ್ರಕರಣವನ್ನು ಉಪಯೋಗಿಸಿಕೊಂಡು ಪ್ರೊಫೆಸರ್ ಗಳನ್ನು ಅಜ್ಞಾನಿಗಳೆಂದು ಜರಿಯುತ್ತಿದ್ದರು. 1967 ರಲ್ಲಿ ಜನಸಭೆಯೊಂದರಲ್ಲಿ ಅವರು ವ್ಯಂಗ್ಯವಾಗಿ ಈ ಕಥೆಯನ್ನು ಜನರಿಗೆ ಹೇಳಿದರು ಮತ್ತು ಅನೇಕ ಬಾರಿ "ಇಂತಹ ಅಜ್ಞಾನಿ ವ್ಯಕ್ತಿಯು ಒಬ್ಬ "ಪ್ರೊಫೆಸರ್" ಆಗಿದ್ದನು ಎಂದು ಅನೇಕ ಬಾರಿ ಹೇಳಿದರು. ನಿಜವಾಗಿಯೂ ತಿಳಿದುಕೊಂಡ ಮನುಷ್ಯ ಮಾತ್ರ ನಿಜವಾದ ತಜ್ಞನಾಗುತ್ತಾನೆ ಎಂದಿದ್ದರು. *ಜಿ ಡಬ್ಲ್ಯೂ ಆರ್* 7 ಮೇ 1967.

83.*ಜಿ ಡಬ್ಲ್ಯೂ ಆರ್*, 5 ಫೆಬ್ರುವರಿ 1967.

84. *ಜಿ ಡಬ್ಲ್ಯೂ ಆರ್,* ಏಳು ಆಗಸ್ಟ್ 1967.

85. ರೀಡ್, 'ರೆವೆಲ್ಯೂಶನರಿ ಅಫೆನ್ಸಿವ್' ಪುಟ 217, ಕ್ಯಾಸ್ಟ್ರೋ, *ಫಿಡೆಲ್ ಕ್ಯಾಸ್ಟ್ರೋ ಆನ್ ಚಿಲಿ,* ಪುಟ 134.

86. ಫಿಗುಯೆರೊವ, *ಎಕ್ಸ್ಪರಿಮೆಂಟ್ಸ್ ಅಂಡ್ ಇನ್ನೋವೇಶನ್ಸ್,* ಪುಟ 6.

87. *ಜಿ ಡಬ್ಲ್ಯೂ ಆರ್,* 17 ಸೆಪ್ಟೆಂಬರ್ 1978.

88. ಮಾರ್ವಿನ್ ಲೈನರ್ (Marvin Leiner), '', 'ಕ್ಯೂಬಾಸ್ ಸ್ಕೂಲ್ಸ್: 25 ಇಯರ್ಸ್ ಲೇಟರ್', *ದ ಕ್ಯೂಬಾ ರೀಡರ್- ದಿ ಮೇಕಿಂಗ್ ಆಫ್ ಏ ರೆವಲ್ಯೂಷನರಿ ಸೊಸೈಟಿ* ಎಂಬ ಪುಸ್ತಕದಲ್ಲಿ, ಸಂಪಾದಕರು: ಫಿಲಿಪ್ ಬ್ರೆನ್ನರ್ ಮತ್ತು ವಿಲಿಯಂ ಲಿಯೋ ಗ್ರಾಂಡೇ ,(ನ್ಯೂ ಯಾರ್ಕ್: ಗ್ರೋವ್ ಪ್ರೆಸ್ 1989), ಪುಟ 454.

89. ವಾರ್ಡ್, *ಇನ್ಸೈಡ್ ಕ್ಯೂಬಾ,* ಪುಟ 95.

90. ರೀಡ್, 'ರೆವೆಲ್ಯೂಷನರಿ ಅಫೆನ್ಸಿವ್', ಪುಟ 217, ಮ್ಯಾಥ್ಯೂಸ್,*ರೆವಲ್ಯೂಷನ್ ಇನ್ ಕ್ಯೂಬಾ,* ಪುಟ 344, ಮಿಲ್ಲಾರ್ ಅವರ 1971ರ ಸಂದರ್ಶನ ಒಂದನ್ನು ಉಲ್ಲೇಖಿಸಿ.

91. ಜಾರ್ಜ್ ಈ ಉರ್ಚ್ (George E. Urch), '', 'ಶಿಫ್ಟ್ಸ್ ಇನ್ ಸೋಶಿಯೊ ಎಕನಾಮಿಕ್ ಅಂಡ್ ಎಜುಕೇಶನ್ ಪಾಲಿಸಿ ಇನ್ ಟಾನ್ಜೇನಿಯಾ: ಎಕ್ಸ್ಟರ್ನಲ್ ಅಂಡ್ ಇಂಟರ್ನಲ್ ಫೋರ್ಸಸ್' ಎಂಬ ಲೇಖನ, *ಅಂಡಸ್ಟ್ಯಾಂಡಿಂಗ್ ಎಜುಕೇಶನಲ್ ರಿಫಾರ್ಮ್ ಇನ್ ಗ್ಲೋಬಲ್ ಕಾಂಟೆಕ್ಸ್ಟ್: ಎಕಾನಮಿ, ಐಡಿಯಾಲಜಿ ಅಂಡ್ ದಿ ಸ್ಟೇಟ್* ಎಂಬ ಪುಸ್ತಕದಲ್ಲಿ, ಸಂಪಾದಕರು- ಮಾರ್ಕ್ ಬಿ ಗಿನ್ಸ್ ಬರ್ಗ್( ನ್ಯೂಯಾರ್ಕ್: ಗಾರ್ಲ್ಯಾಂಡ್ ಪಬ್ಲಿಶಿಂಗ್ ,1991) ಪುಟ 201.

92. ಜಾರ್ಜ್ ಟಿ. ಯು (George. T.Yu), *ಚೀನಾ ಅಂಡ್ ಟಾನ್ಜೇನಿಯಾ: ಎ ಸ್ಟಡಿ ಇನ್ ಕೋ ಆಪರೇಟಿವ್ ಇಂಟರಾಕ್ಷನ್* (ಬರ್ಕಲಿ: ಯೂನಿವರ್ಸಿಟಿ ಆಫ್ ಕ್ಯಾಲಿಫೋರ್ನಿಯ ಪ್ರೆಸ್ 1970), ಪುಟ 35, ಜೂಲಿಯಸ್ ಕೆ ನ್ಯೆರೇರೆ, 'ಫ್ರೀಡಂ ಅಂಡ್ ಸೋಶಿಯಲಿಸಂ: ಎ ಸೆಲೆಕ್ಷನ್ ಫ್ರಮ್ ರೈಟಿಂಗ್ಸ್ ಅಂಡ್ ಸ್ಪೀಚಸ್ 1965 -1967' (ಲಂಡನ್, ಆಕ್ಸ್ಫರ್ಡ್ ಯೂನಿವರ್ಸಿಟಿ ಪ್ರೆಸ್ 1968), ಪುಟ 21

93. ರೋಲ್ಯಾಂಡ್ ಜಿ ಪಾಲ್ಸ್ ಟನ್ ಮತ್ತು ಸುಸಾನ್ ರಿಪ್ ಬರ್ಜರ್ (Susan Rippberger), '', 'ಐಡಿಯಾಲಜಿಕಲ್ ಪ್ಲ್ಯೂರಲಿಸಂ ಇನ್ ನಿಕರಾಗುವ', ಗಿನ್ಸ್ ಬರ್ಗ್ ಅವರ *ಅಂಡಸ್ಟ್ಯಾಂಡಿಂಗ್ ಎಜುಕೇಶನ್ ರಿಫಾರ್ಮ್* ಪುಸ್ತಕದಲ್ಲಿ, ಪುಟ 183.

94. 1974ರಲ್ಲಿ ಮಾವೋ ಅವರು ಈ ಮುಂಚೆ ಬಂಡವಾಳಶಾಹಿ ಪಥಿಕ ಎಂದು ಅಪಮಾನಕ್ಕೆ ಒಳಗಾಗಿದ್ದ ಡೆಂಗ್ ಸಿಯಾವೋ ಪಿಂಗ್ ಅವರನ್ನು, ಆರ್ಥಿಕ ಪರಿಸ್ಥಿತಿಯನ್ನು ಮತ್ತೆ ಸುಭದ್ರಗೊಳಿಸಲಿಕ್ಕೆಂದು ಉಪ ಪ್ರಧಾನಿಯಾಗಿ ನೇಮಿಸಿದರು ಮತ್ತು ಇದರಿಂದಾಗಿ ಕೆಲವೊಂದು ಶೈಕ್ಷಣಿಕ ಬದಲಾವಣೆಗಳು ಉಂಟಾದವು.

95.ಖ್ಮೆರ್ ರೂಜ್ ನ ಸಾಮಾನ್ಯ ರಾಜಕೀಯ ಮತ್ತು ಶೈಕ್ಷಣಿಕ ನೀತಿಗಳು ಮತ್ತು ಅವುಗಳ ಮೇಲಿನ ಮಾವೋವಾದಿ ಪ್ರಭಾವವನ್ನು ಅರಿಯಲು ಬೆನ್ ಕೀಮನ್ ಅವರ '*ದಿ ಪಾಲ್ ಪಾಟ್ ರೆಜೀಮ್ : ರೇಸ್, ಪವರ್ ಅಂಡ್ ಜೆನೋಸೈಡ್ ಇನ್ ಕ್ಯಾಂಬೋಡಿಯ 1975 - 1979* ಎಂಬ ಪುಸ್ತಕವನ್ನು ನೋಡಿರಿ.( ನ್ಯೂ ಹೇವನ್: ಯೇಲ್ ಯುನಿವರ್ಸಿಟಿ ಪ್ರೆಸ್, 1998) ಹಾಗೆಯೇ ಡೇವಿಡ್ ಪಿ ಚಾಂಡ್ಲರ್ (David P. Chandler),

*ಬ್ರದರ್ ನಂಬರ್ ಒನ್ : ಏ ಪೊಲಿಟಿಕಲ್ ಬಯೋಗ್ರಫಿ ಆಫ್ ಪಾಲ್ ಪಾಟ್*(ಬೋಲ್ಡರ್: ವೆಸ್ಟ್ ವ್ಯೂ ಪ್ರೆಸ್, 1999).

96. ಕಾರ್ಲ್ ಡಿ ಜಾಕ್ಸನ್ *ಕಾಂಬೋಡಿಯಾ1975- 1978, ರೆಂಡಿವೂ ವಿಥ್ ಡೆತ್* (ಪ್ರಿನ್ಸ್ಟನ್: ಪ್ರಿನ್ಸ್ ಟನ್ ಯೂನಿವರ್ಸಿಟಿ ಪ್ರೆಸ್, 1989), ಪುಟ 76, 1978ರಲ್ಲಿ ವಿಯೆತ್ನಾಂ ಪಡೆಗಳು ಬಂದು ಅವರನ್ನು, ಥೈಲೆಂಡ್ ನ ಗಡಿ ಪ್ರದೇಶದ ಅಂಚಿನವರೆಗೂ ಹೊರದೂಡಿದ ಮೇಲೆ ಖ್ಮೆರ್ ರೂಜ್ ನ ಪ್ರಯೋಗಗಳು ನಿಂತು ಹೋದವು.

97. ಪಾಲೊ ಫ್ರೇರಿ, *ಪೆಡಗಾಜಿ ಆಫ್ ದಿ ಅಪ್ರೆಸ್ಡ್* ಅನುವಾದ-ಮೈರಾ ಬರ್ಗ್ ಮನ್ ರಾಮೋಸ್,(ನ್ಯೂಯಾರ್ಕ್ 1970), ಜೋನಾಥನ್ ಕಜೋಲ್, *ಡೆತ್ ಅಟ್ ಆನ್ ಅರ್ಲಿ ಏಜ್* (ನ್ಯೂಯಾರ್ಕ್: 1967), ಇತ್ತೀಚಿನ ಅಧ್ಯಯನಕ್ಕಾಗಿ ಪೀಟರ್ ಮೆಕ್ ಲಾರೆನ್ ಅವರ ಪುಸ್ತಕ *ಚೆಗೆವಾರ, ಪಾಲೊ ಫ್ರೇರಿ ಅಂಡ್ ದಿ ಪೆಡಗಾಜಿ ಆಫ್ ರೆವೊಲ್ಯೂಷನ್* ಅನ್ನು ನೋಡಿರಿ (ಲಾನ್ ಹಾಂ, ಎಂಡಿ:2000).

98. ಬಹುತೇಕ ಲ್ಯಾಟಿನ್ ಅಮೆರಿಕಾದ ದೇಶಗಳಿಗೆ ಹೋಲಿಸಿದರೆ ಹೆಚ್ಚಿನ ಸಾಕ್ಷರತೆಯನ್ನು ಆ ಹೊತ್ತಿಗಾಗಲೇ ಗಳಿಸಿಕೊಂಡಿದ್ದ ಕ್ಯೂಬಾವು 1965ರ ಹೊತ್ತಿಗೆ ಉನ್ನತ ಮಟ್ಟದ ಸಾಕ್ಷರತೆಯನ್ನು ಸಾಧಿಸಿತು. ಚೀನಾದಲ್ಲಿ 1965ರ ಹೊತ್ತಿಗೆ ಜನಸಂಖ್ಯೆಯ ಬಹುತೇಕ ಭಾಗವು ಸಾಕ್ಷರತೆಯನ್ನು ಗಳಿಸಿಕೊಂಡಿದ್ದರೂ ಸಹ ಅಲ್ಲಿದ್ದ ಬರವಣಿಗೆಯಲ್ಲಿನ ಸಂಕೀರ್ಣ ಪದ್ಧತಿಯಿಂದಾಗಿ ಹಾಗೂ ದೇಶದಾದ್ಯಂತ ಇದ್ದ ಅನೇಕ ಭಾಷೆಗಳು ಮತ್ತು ಉಪಭಾಷೆಗಳಿಂದಾಗಿ ಸಾಕ್ಷರತೆಯ ಬೆಳವಣಿಗೆಗೆ ಕೆಲವೊಂದು ಮಿತಿಗಳು ಕಂಡುಬಂದಿದ್ದವು.

99. ಟ್ರೊಬ್ ಮೆಂಡೆ (Trobe Mende), *ಫ್ರಮ್ ಏಯ್ಡ್ ಟು ರಿಕನ್ಸ್ಟ್ರಕ್ಷನ್: ಲೆಸೆನ್ಸ್ ಆಫ್ ಎ ಫೇಲ್ಯೂರ್,*( ಲಂಡನ್,ಹರ್ರಾಪ್,1973), ಪುಟ 101-102.

100. 1960 ಮತ್ತು 1970ರ ದಶಕಗಳ ಕುರಿತು ಜಾನ್ ಮೇಯರ್ ಇತ್ಯಾದಿ ನೋಡಿರಿ,'ದಿ ವರ್ಲ್ಡ್ ಎಜುಕೇಶನ್ ರೆವೊಲ್ಯೂಷನ್1950-70, *ಸೋಶಿಯಾಲಜಿ ಆಫ್ ಎಜುಕೇಶನ್ 50* (ಅಕ್ಟೋಬರ್ 1977): 255. ಇತ್ತೀಚಿನ ಅಧ್ಯಯನಗಳಿಗಾಗಿ ಗಿನ್ಸ್ ಬರ್ಗ್ ಅವರ ಕೊಡುಗೆಗಳನ್ನು ಗಮನಿಸಿ: *ಅಂಡಸ್ಟ್ಯಾಂಡಿಂಗ್ ಎಜುಕೇಶನಲ್ ರಿಫಾರ್ಮ್.*

101. ಕೀತ್ ವ್ಯಾಟ್ಸನ್ (Keith Watson), 'ಎಜುಕೇಶನಲ್ ನಿಯೋ ಕಲೋನಿಯಲಿಸಂ: ದಿ ಕಂಟಿನ್ಯೂಯಿಂಗ್ ಕಲೋನಿಯಲ್ ಲೆಗಸಿ' ಎಂಬ ಲೇಖನ, *ಎಜುಕೇಶನ್ ಇನ್ ದಿ ಥರ್ಡ್ ವರ್ಲ್ಡ್* ಎಂಬ ಪುಸ್ತಕ, ಸಂಪಾದಕರು: ಕೀತ್ ವ್ಯಾಟ್ಸನ್ (ಲಂಡನ್ ಅಂಡ್ ಕ್ಯಾನ್ ಬೆರ್ರಾ, ಕ್ರೂಮ್ ಹೆಲ್ಮ್ ,1981) ಪುಟ 188.

102. ಸೋವಿಯತ್ ವೈದ್ಯರಲ್ಲಿ ಮಹಿಳೆಯರ ಪ್ರಮಾಣ ಹೆಚ್ಚಾಗಿದ್ದುದನ್ನು ಅನೇಕ ಬಾರಿ ಸೋವಿಯತ್ ಒಕ್ಕೂಟದಲ್ಲಿನ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಗೆ ಉದಾಹರಣೆಯಾಗಿ ತೋರಿಸಲಾಗುತ್ತಿತ್ತು.

103. 'ಎಜುಕೇಶನ್ ಫಾರ್ ಕಮ್ಯುನಿಸಂ' ಎಂಬ ಪದಗುಚ್ಛವು ನಮ್ಮದೇ ಆಗಿದ್ದು ಅದನ್ನು ಚೀನಾ ಅಥವಾ ಕ್ಯೂಬಾದಲ್ಲಿ ಪ್ರಚಲಿತವಾಗಿದ್ದ ಪದಪುಂಜಗಳಿಂದ ತೆಗೆದುಕೊಂಡಿಲ್ಲ. ಸೋವಿಯತ್ ಶಿಕ್ಷಣವು

ಪರಿಷ್ಕರಣವಾದಿಯಾಗಿದೆ ಅಥವಾ ನವ ಬಂಡವಾಳವಾದಿಯಾಗಿದೆ ಎಂದು ಚೀನಾ ಮತ್ತು ಕ್ಯೂಬಾದ ನಾಯಕರು ಅದನ್ನು ತಿರಸ್ಕರಿಸಿದ್ದನ್ನು ತೋರಿಸಲು ಮತ್ತು ಅವರು ತಾವು ಸಮಾಜವಾದದ ಹಂತವನ್ನು ದಾಟಿ ಹೋಗಿ ಶಿಕ್ಷಣದ ಮೂಲಕ ಕಮ್ಯುನಿಸ್ಟ್ ಸಮಾಜವನ್ನು ಸೃಷ್ಟಿಸುತ್ತಿದ್ದೇವೆ ಎಂದು ಬಿಂಬಿಸಿಕೊಳ್ಳುತ್ತಿದ್ದುದನ್ನು ತೋರಿಸಲು ನಾವು ಈ ಪದಪ್ರಯೋಗವನ್ನು ಮಾಡಿದ್ದೇವೆ.

104. ಈ ವಿಷಯದ ಕುರಿತಾದ ಇನ್ನೂ ಹೆಚ್ಚು ಸಮಗ್ರವಾದ ವಿಶ್ಲೇಷಣೆಗಾಗಿ, ಯಿಂಗ್ ಹಾಂಗ್ ಚೆಂಗ್(Yinghong Cheng), ಅವರ, 'ಕ್ರಿಯೇಟಿಂಗ್ ದಿ ನ್ಯೂ ಮ್ಯಾನ್: ಕಮ್ಯುನಿಸ್ಟ್ ಎಕ್ಸ್ಪರಿಮೆಂಟ್ಸ್ ಇನ್ ಚೀನಾ ಅಂಡ್ ಕ್ಯೂಬಾ, ಎ ವರ್ಲ್ಡ್ ಹಿಸ್ಟರಿ ಪರ್ಸ್ಪೆಕ್ಟಿವ್' ಎಂಬುದನ್ನು ಗಮನಿಸಿ (ಬೋಸ್ಟನ್: ನಾರ್ತ್ ಈಸ್ಟರ್ನ್ ಯೂನಿವರ್ಸಿಟಿ, 2001, ಅಪ್ರಕಟಿತ ಸಂಶೋಧನಾ ಪ್ರಬಂಧ).

105. ಉದಾಹರಣೆಗೆ 25 ವರ್ಷಗಳ ಹಿಂದೆ ಮಾವೋ ವಾದಿ ಶಿಕ್ಷಣ ನೀತಿಯನ್ನು ಬದಲಾಯಿಸಿದ ಚೀನಾದಲ್ಲಿ, 1998 ರಿಂದ ಈಚೆಗೆ ಸಮಾನತೆಯನ್ನು ಉಪೇಕ್ಷಿಸಿ ಕೇವಲ ದಕ್ಷತೆಗೆ ಒತ್ತು ನೀಡಿದ ದೇಶದ ಆರ್ಥಿಕ ಸುಧಾರಣೆಗೆ ಪ್ರತಿಕ್ರಿಯೆಯಾಗಿ ಚೆ ಗೆವಾರನನ್ನು ಆರಾಧಿಸುವ ಹೊಸ ಅಲೆಯೊಂದು ಹೊರಹೊಮ್ಮಿದೆ. ಈ ಸಂಭ್ರಮವು ಹೊಸ ಶಿಕ್ಷಣಕ್ಕೆ ಒತ್ತು ನೀಡಿದ ಚೆಗೆವಾರನ ಕ್ರಾಂತಿಕಾರಿ ಚರ್ಚೆಯನ್ನು ಆಧರಿಸಿದ ಪ್ರಯೋಗಾತ್ಮಕ ನಾಟಕದ ಸ್ವರೂಪವನ್ನು ಇತ್ತೀಚೆಗೆ ಪಡೆದುಕೊಂಡಿತು. ನೋಡಿರಿ: ಲಿಯು ಜಿಫೆಂಗ್(Liu Zhifeng) ಸಂಪಾದಿಸಿರುವ *ಚೆಗೆವಾರ: ಎ ರೆಡ್ ಸ್ಟಾರ್ಮ್ ಇನ್ ಚೈನೀಸ್ ಸೊಸೈಟಿ ಅಂಡ್ ಇಂಟೆಲಿಜೆನ್ಸಿಯಾ(ಬೀಜಿಂಗ್: ದಿ ಸೋಶಿಯಲ್ ಸೈನ್ಸ್ ಪಬ್ಲಿಷರ್ 2001).*

—------------++++++++++----------------